ಜನಶಕ್ತಿ

ಕನ್ನಡ ವಾರಪತ್ರಿಕೆ

g janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 17
ಏಪ್ರಿಲ್ 28, 2013

ಪುಟ 16 ರೂ. 10/-



ಎಡ ಪಕ್ಷಗಳ ಅಭ್ಯರ್ಥಿಗಳನ್ನು ಗೆಲ್ಲಿಸಿ



ನೀತಿಗಳಲ್ಲಿ ಬದಲಾವಣೆಗಾಗಿ ವರ್ಗ ಹೋರಾಟವನ್ನು ತೀವ್ರಗೊಳಿಸಿ

ಸಿಐಟಿಯು 14ನೇ ಸಮ್ಮೇಳನದ ಕರೆ

ನಡೆಯಬೇಕಿದೆ ನರೇಂದ್ರ ಮೋದಿಯ ವಿಚಾರಣೆ





ಏನಿದು ? ಚುನಾವಣೆಯ ಹೊಸ್ತಿಲಲ್ಲೇ ಬಾಂಬ್ ದಾಳಿ !!



ಬೈಂದೂರು : ಪರ್ಯಾಯ ನಿರೀಕ್ಷಿಸುತ್ತಿರುವ ಜನತೆ



ರಕ್ತ ಕ್ಯಾನ್ಸರ್ ಔಷಧಿ : ರಕ್ತದಾಹಿ ನೊವಾರ್ಟಿಸ್

ನಮ್ಮದು ಒಂದು ಪ್ರಜಾಸತ್ತಾತ್ಮಕ ಭಾಷಾ ನೀತಿಯ ಸುತ್ತಲಿನ ಸಂವಾದ

–ಎಸ್.ವೈ.ಗುರುಶಾಂತ್

ನಮ್ಮ 'ಈ ವಾರ 'ಅಂಕಣದಲ್ಲಿ ಪ್ರಕಟಗೊಂಡ ಲೇಖನಕ್ಕೆ ಒಂದು ಗಂಭೀರ ಪ್ರತಿಕ್ರಿಯೆಯನ್ನು ಹಿರಿಯ ಸಾಹಿತಿ ಪ್ರೊ.ಚಂದ್ರಶೇಖರ್ ಪಾಟೀಲ್(ಚಂಪಾ) ರವರು ಕೂಡಲೇ ನೀಡಿದ್ದಾರೆ. ಸಂವಾದ ಸಾಧ್ಯವಾಗಿಸಿದ ಅವರಿಗೆ ಧನ್ಯವಾದಗಳು.

ಅವರು ಪತ್ರದಲ್ಲಿ ಎತ್ತಿದ ಪ್ರತಿಯೊಂದೂ ವಿಷಯಕ್ಕೂ ಪ್ರತಿಕ್ರಿಯಿಸುವುದು ಅಗತ್ಯವಿಲ್ಲ ಎನಿಸುತ್ತದೆ. ಮುಖ್ಯವಾಗಿ ಅವರು ತಮ್ಮ ನಿಲುವುಗಳ ಹಿನ್ನೆಲೆಯನ್ನು, ಕಾರಣಗಳನ್ನು ಸ್ಪಷ್ಟಪಡಿಸಿದ್ದಾರೆ. ಪ್ರಾದೇಶಿಕ ಪಕ್ಷದ ಕುರಿತ ಅವರ ಅಭಿಪ್ರಾಯಗಳನ್ನು ಗಮನಿಸುತ್ತಾ ಆ ಬಗ್ಗೆ ಮುಂದೆಯೂ ಸಂವಾದ ನಡೆಸಬಹುದಾದ ಅವಕಾಶವನ್ನು ತೆರೆದಿಟ್ಟುಕೊಳ್ಳಬಹುದು. ಇಂತಹ ಹಲವು ಪ್ರಶ್ನೆಗಳಿಗೆ ಕಾಲವೂ ಉತ್ತರಗಳನ್ನು ಕೊಡಬಹುದು. ಅವರು ಹೇಳಿದಂತೆ ಎಲ್ಲರ ಪ್ರಯತ್ನಗಳಿಂದ ಬಿಜೆಪಿ ನೆಲ ಕಚ್ಚಲಿ ಎಂದು ಆಶಿಸೋಣ.

ನಾವು ನಡೆಸುವ ಪ್ರಯತ್ನಗಳು ವಿಫಲವಾಗುವುದು ಅಸಹಜವೇನಲ್ಲ, ಅವುಗಳಿಂದ ನಾವು ಪಾಠ ಕಲಿಯಬೇಕಷ್ಟೇ. ಹಾಗೆ ಭವಿಷ್ಯ ಎಂದೂ ಭೂತಕಾಲದ ಜೆ-ರಾಕ್ಸ್ ಆಗಲಾರದು ಎಂಬುದು ಚಲನಶೀಲ ಇತಿಹಾಸದ ಗತಿ, ಪ್ರಕ್ರಿಯೆಗಳನ್ನು ವೈಜ್ಞಾನಿಕವಾಗಿ ಅವಲೋಕಿಸಿ ಅನ್ವಯಿಸಿಕೊಳ್ಳುವ ಮಾರ್ಕ್ಸ್‌ವಾದಿಗಳ ಖಚಿತ ನಂಬಿಕೆ.

ಇನ್ನು ಮುಖ್ಯವಾಗಿ ಗೋಕಾಕ್ ಚಳುವಳಿಯನ್ನು ಬಗ್ಗು ಬಡಿಯಲು ಕೆಲವು ಕಮ್ಯೂನಿಸ್ಟರು ಯತ್ನಿಸಿದರು ಎಂಬುದು ಸರಿಯಲ್ಲ. ಸಂಸ್ಕೃತದ ಹೇರಿಕೆ ವಿರೋಧಿಸಿದ ಕಮ್ಯೂನಿಸ್ಟರು ಕನ್ನಡ ಭಾಷೆಯ ಉಳಿವಿನ ಕಾಳಜಿಯಿಂದಲೇ ಆರಂಭದಲ್ಲಿ ಗೋಕಾಕ್ ಚಳುವಳಿಯಲ್ಲಿ ತೊಡಗಿದ್ದು. ನಂತರದಲ್ಲಿ ಅದು ಇತರೆ ಅನ್ಯ ಭಾಷಿಕರೂ ಕನ್ನಡ ಕಲಿಯುವುದು ಕಡ್ಡಾಯವೆನ್ನುವ ವಿಷಯದಲ್ಲಿ ಕಮ್ಯೂನಿಸ್ಟರು ತಾತ್ವಿಕ ಭಿನ್ನಾಭಿಪ್ರಾಯ ಹೊಂದಿದ್ದರು. ಹೀಗೆ ನಿಲುವು ತಾಳಲು ಅವರಿಗೆ ಅವರದ್ದೇ ಆದ ಸೈದ್ಧಾಂತಿಕ ದೃಷ್ಟಿಯಿದೆ ಹೊರತು ಹರಿಕುಮಾರ್, ಅನಂತಮೂರ್ತಿ ಮುಂತಾದವರ ಕಾರಣದಿಂದ ಅಲ್ಲ. ಜನತೆಯ ಯಾವುದೇ ಚಳುವಳಿಗಳನ್ನು ಸಿನಿಕತನದಿಂದ ವಿಮರ್ಶಿಸುವುದು ಕಮ್ಯೂನಿಸ್ಟರ ಪರಿಪಾಠವಲ್ಲ. ಒಂದು ವೇಳೆ ಯಾವುದೇ ಪ್ರತಿಗಾಮಿ ಬೇಡಿಕೆಯ ಸುತ್ತ ಜನಸಮೂಹ ಅಣಿ ನೆರೆದಾಗಲೂ ಹಗುರವಾಗಿ ಕಾಣುವುದಿಲ್ಲ, ಹಾಗೇ ವಿಮರ್ಶಿಸಲಾಗುವುದಿಲ್ಲ. ಜನತೆಯ ಪ್ರತಿಕ್ರಿಯೆಗೆ ಒಂದು ಅರ್ಥ ಖಂಡಿ[ತ] ಇರುತ್ತದೆ.


ಯಾರ ಮೇಲೂ, ಎಲ್ಲೂ ಮ[…] ಭಾಷೆಯ ಹೊರತಾದ ಭಾಷಾ ಕಲಿಕೆಯ[…] ಹೇರುವುದಕ್ಕೆ ಕಮ್ಯೂನಿಸ್ಟರ ವಿರೋಧ[…] ಅನ್ಯ ಭಾಷಿಕರು ಪ್ರಥಮ ಭಾಷೆಯಾಗಿ ಕ[…] ಕಲಿಕೆಗೆ ಮುಂದಾದರೆ ಅದು ಸ್ವಾಗತಾ[…] ಮಾತೃಭಾಷೆಯಲ್ಲೇ ಶಿಕ್ಷಣ ನೀಡುವುದ[…] ಆ ಮಾಧ್ಯಮದಲ್ಲಿನ ಕಲಿಕೆಗೆ […] ಸಹಮತವಿದೆ. ಅಲ್ಲದೇ ಉಳಿದಂತೆ ಭಾ[…] ಕಲಿಕೆ ಐಚ್ಛಿಕವಾಗಿರಬೇಕು ಎಂಬು[…] ಪ್ರಜಾಸತ್ತಾತ್ಮಕ ನಿಲುವಾಗಿದೆ.

ಈ ಬಗ್ಗೆ ವಿವಿಧ ಭಿನ್ನ ಅಭಿಪ್ರಾಯ[…] ಇರಬಾರದೆಂದೇನಿಲ್ಲ. ಈಗಲೂ ಭಾ[…] ಪ್ರಶ್ನೆ ಬಂದಾಗ ಸಂವಾದಗಳು ನಡೆ[…] ಇವೆ. ಭಾರತದಂಹ ವಿಶಾಲ, ವೈವಿಧ್ಯತೆ[…] ದೇಶದಲ್ಲಿ ರಾಷ್ಟ್ರೀಯತೆಯನ್ನು ಭಾ[…] ಸಂಸ್ಕೃತಿಯಾಧಾರದಲ್ಲೇ ಗುರುತಿಸ[…] ಕಮ್ಯೂನಿಸ್ಟರು ಜನ ಭಾಷೆ, ಸಂಸ್ಕೃತಿಗಳ[…] ಬಿಟ್ಟು ಚಿಂತಿಸುವುದಾದರೂ ಹೇಗೆ? ಚೀನ[…] ರಶಿಯಾದಲ್ಲಿನ ಪ್ರಯೋಗಗಳು ಒಂದು ವಿ[…] ಅನುಭವ. ಅದು ಯಾಂತ್ರಿಕ ಕಟ್ಟುಪಾಡೆಂ[…] ಕಮ್ಯೂನಿಸ್ಟರು ಭಾವಿಸುವುದಿಲ್ಲ.

ಪ್ರಾದೇಶಿಕ ಪಕ್ಷ : ನನ್ನ ಪ್ರಜ್ಞಾಪೂರ್ವಕ ಆಯ್ಕೆ

ಪ್ರಿಯ ಕಾಮ್ರೇಡ್
ಗುರುಶಾಂತ್..................

ನಿಮ್ಮ 'ಜನಶಕ್ತಿ' (ಎಪ್ರಿಲ್ 14) ಲೇಖನದಲ್ಲಿ ವ್ಯಂಗ್ಯದ ಹೊದಿಕೆಯಲ್ಲೇ ಅನೇಕ ಗಂಭೀರ ವಿಷಯಗಳ ಪ್ರಸ್ತಾವನೆ ಇರುವುದರಿಂದ ಅದನ್ನು ಗಂಭೀರವಾಗಿಯೇ ಪರಿಗಣಿಸಿರುವೆ. ಇತ್ತೀಚಿನ ನನ್ನ 'ನಡೆ' – (ಅಂದರೆ ಬಿಎಸ್‌ವೈ ಪ್ರಾದೇಶಿಕ ಪಕ್ಷ ಕೆಜೆಪಿಗೆ ಅಧಿಕೃತವಾಗಿಯೇ ಸೇರಿದ್ದು.)– ಅನಿರೀಕ್ಷೀತವಲ್ಲ, ಅಂತ ನೀವು ಗುರುತಿಸಿದ್ದೀರಿ. ಕಳೆದ ಮೂವತ್ತು ವರ್ಷಗಳಿಂದ ನಮಗೊಂದು ಪ್ರಾದೇಶಿಕ ಪಕ್ಷ ಬೇಕೆಂದು ಬಲವಾಗಿ ಪ್ರತಿಪಾದಿಸುತ್ತ ಬಂದವ ನಾನು. ಈ ನಿಟ್ಟಿನ ಅನೇಕ ಪ್ರಯತ್ನಗಳು ಬೇರೆ ಬೇರೆ ಕಾರಣಗಳಿಂದಾಗಿ ವಿಫಲವಾಗಿರುವುದನ್ನು ನಾವು ನೋಡಿದ್ದೇವೆ. ಆದರೆ "ವಿಫಲ ಪ್ರಯತ್ನ" ಗಳು ಕಾಮ್ರೇಡರಿಗೆ ಅಸಹಜವೆಂದೆನಿಸಲಾರವು. ಇತಿಹಾಸದ ಅರಿವು ಬೇಕು, ಅದರೆ ಅದೊಂದರಿಂದಲೇ ಭವಿಷ್ಯ ಕಟ್ಟಲು ಆಗದು. ಅದ್ದರೆ ಭವಿಷ್ಯ ಎಂಬುದು ಭೂತದ ಜೆರಾಕ್ಸ್ ಕಾಪಿ ಆಗಲಾರದು. ಯಡಿಯೂರಪ್ಪ ನವರು –(ಸಾಕಷ್ಟು ವಿಚಾರ ಮಾಡಿಯೇ)– ನನ್ನ ಸಹಕಾರವನ್ನು ಬಯಸಿದ್ದು. ಸಂಘಪರಿವಾರದ ಬಿಜೆಪಿಗೆ ಸೈದ್ಧಾಂತಿಕವಾಗಿ ಮತ್ತು ಮಾನಸಿಕವಾಗಿ ವಾಪಸಾಗುವ ಪ್ರಶ್ನೆಯೇ ಇಲ್ಲ – ಇದು ಅವರ ಭರವಸೆ. ಅಲ್ಲದೆ ಅವರ ತಕ್ಷಣದ ಅಜಂಡಾ. ಬಿಜೆಪಿಯನ್ನು ಧ್ವಂಸ ಮಾಡುವುದು. (ಪ್ರೇರಣೆ ಏನೇ ಇರಲಿ) ಇದು ನಮ್ಮೆಲ್ಲರ ಪುರಾತನ ಅಜೆಂಡಾ



ಅಲ್ಲವೇ? ನಾನು ಕೆಜೆಪಿ ಸೇರಲು ಇದೂ ಒಂದು ಮುಖ್ಯ ಕಾರಣ.

ಇತ್ತೀಚಿನ ಹಾವೇರಿ ಜಿಲ್ಲಾ ಸಾಹಿತ್ಯ ಸಮೇಳನದಲ್ಲಿ ಕರ್ನಾಟಕದ ಕಮ್ಯುನಿಷ್ಟರ ಬಗ್ಗೆ ನಾನಾಡಿದ ಮಾತು ಕಾಂ ಸಿದ್ದನಗೌಡ ಪಾಟೀಲರ ಟೀಕೆಗೆ ಕೊಟ್ಟ ತಕ್ಷಣದ ಉತ್ತರ. "ಇಂಡಿಯಾದ ಕಮ್ಯುನಿಸ್ಟರು ಇಂಡಿಯನ್ ಆಗಿದ್ದರೆ, ಕರ್ನಾಟಕದ ಕಮ್ಯುನಿಸ್ಟರು ಕನ್ನಡಿಗರಾಗಿದ್ದರೆ ನಾನೂ ಎಂದೋ ಕಮ್ಯುನಿಸ್ಟ್‌ನಾಗಿಬಿಡುತ್ತಿದ್ದೆ" ಈ ಅಭಿಪ್ರಾಯಕ್ಕೆ ನನಗೆ ಹಿನ್ನೆಲೆಯಾಗಿದ್ದು. ಗೋಕಾಕ್ ಚಳುವಳಿಯ ನಿರ್ಣಾಯಕ ಘಟ್ಟದಲ್ಲಿ ರಾಜಧಾನಿಯ ಪತ್ರಿಕೆಯೊಂದರ ಪ್ರಾಯೋಜತ್ವದಲ್ಲಿ ನಮ್ಮ ಕೆಲವು ಕಾಮ್ರೇಡರು ನಮ್ಮ ಚಳುವಳಿಯನ್ನು ಬಗ್ಗು ಬಡಿಯಲು ಏನೆಲ್ಲ ಪ್ರಯತ್ನ ಮಾಡಿದ್ದು. ಗೋಕಾಕ್ ವರದಿಯ ಕನ್ನಡ –ಪರ ಶಿಫಾರಸು "ದುಡಿಯುವ ವರ್ಗದ ವಿರೋಧಿ, ಅನ್ಯಭಾಷಾ ವಿರೋಧಿ" ಯಾಗಿರಲೇ ಇಲ್ಲ. ಒಂದು ನಾಡಿನಲ್ಲಿ ಆ ನಾಡಿನ ಭಾಷೆ ಪ್ರಥಮ ಆದ್ಯತೆ ಪಡೆಯುವುದು ಕಮ್ಯುನಿಸ್ಟ್ ಸಿದ್ಧಾಂತಕ್ಕೆ ವಿರೋಧವಾಗುವುದೇ? ಖ್ಯಾತ ಸಾಹಿತಿ ಯು.ಅರ್. ಅನಂತಮೂರ್ತಿ ಒಂದು ಜನಪರ ಆಂದೋಲನವನ್ನು "ಸಮೂಹ ಸನ್ನಿ" ಆಂತ ಕರೆದದ್ದು ನಿಮಗೆ ಸರಿ ಅನ್ನಿಸುತ್ತದೆಯೇ? ಇದು ಕನ್ನಡ – ದ್ರೋಹವಲ್ಲದೆ ಮತ್ತೇನು, ಗುರುಶಾಂತ್?

* ಏಕೀಕರಣ ಚಳುವಳಿಯಲ್ಲಿ ಕಮ್ಯುನಿಸ್ಟರ ಪಾತ್ರ ನಮಗೆ ಗೊತ್ತು. ಗೋಕಾಕ್ ಚಳುವಳಿಗೆ ಮುನ್ನ ಸಂಸ್ಕತದ ವಿರುದ್ಧ ಬೀದಿಗಿಳಿದವರು ಬಂಡಾಯ ಸಾಹಿತ್ಯ ಸಂಘಟನೆಯ ಸಂಗಾತಿಗಳು. ಆದ–ರೆ ಹರಿಕುಮಾರ– ಅನಂತಮೂರ್ತಿ ಪ್ರವೇಶ ಆದೊಡನೆ ಈ ಗೆಳೆಯರು ಪರಾರಿಯಾಗಿದ್ದಷ್ಟೆ ಅಲ್ಲ, ಚಳುವಳಿಯನ್ನು ಧ್ವಂಸ ಗೊಳಿಸಲು ಪ್ರಯತ್ನಸಿದರು. ಇದು ಇತಿಹಾಸ.

* ಕಮ್ಯುನಿಸ್ಟ್ ಆಂದೋಲನವೂ ಸದಾ ವಿಮರ್ಶೆ– ಸ್ವಯಂ ವಿಮರ್ಶೆಯಿಂದಲೇ ಬೆಳೆಯುತ್ತದೆ. ಎಂಬ ನಿಮ್ಮ ಮಾತು ನಿಜ, ರಶಿಯಾ – ಚೀನದಲ್ಲಿರುವಂತೆ ಇಂಡಿಯದ್ದು ಕೂಡ ವರ್ಗ – ಸಮಾಜವೇ – ಎಂಬ ಗೊಡ್ಡು ಮಾರ್ಕ್ಸ್‌ವಾದಿ ನಿಲುವಿನಿಂದ ಸಾಕಷ್ಟು ದೂರು ಬಂದಿರುವ ಹೊಸ ಪಿಳಿಗೆಯ ಕಮ್ಯುನಿಸ್ಟ್‌ರು ಭಾಷೆ – ಸಂಸ್ಕತಿಗಳ ಬಗ್ಗೆ ಗಟ್ಟಿಯಾಗಿ ಮಾತಾಡುತ್ತಿರುವುದು ಸ್ವಾಗತಾರ್ಹ. ಈ ನಿಟ್ಟಿನಲ್ಲಿ ನಡೆದ ಅನೇಕ ಸಮಾವೇಶಗಳಲ್ಲಿ ನಾನೂ ಪಾಲುಗೊಂಡಿದ್ದು ನಿಮಗೆ ಗೊತ್ತು. ಕನ್ನಡ ನಾಡಿನ ಕಮ್ಯುನಿಸ್ಟ್‌ರು. ತಕ್ಕಮಟ್ಟಿಗೆ ಕನ್ನಡಿಗರೂ ಆಗುತ್ತಿದ್ದಾರೆ.

* ರಾಷ್ಟ್ರೀಯ ಪಕ್ಷಗಳಿಂದ ರಾಜ್ಯದ ಹಿತಾಸಕ್ತಿಗಳ ರಕ್ಷಣೆ ಅಸಾಧ್ಯ. ನಮ್ಮ ರಾಜ್ಯಕ್ಕಂತೂ ಇದು ಪ್ರತ್ಯಕ್ಷ ಅನುಭವ. ನಮಗಂತೂ ಈಗ ಪ್ರಾದೇಶಿಕ ಪಕ್ಷಗಳು ಅನಿವಾರ್ಯ. ಈ ದಿಕ್ಕಿನಲ್ಲಿ ನಡೆಯುತ್ತಿರುವ ಪ್ರಯತ್ನಗಳಿಗೆ ನಾನು ಕೈಜೋಡಿಸುತ್ತಿರುವೆ. ಇದು ನನ್ನ ಪ್ರಜ್ಞಾಪೂರ್ವಕ ಆಯ್ಕೆ. ಕನ್ನಡ ಹೋರಾಟದ ಒಂದು ಮುಖ್ಯವಾದ ಆಯಾಮವಿದು ನನ್ನ ಪಾಲಿಗೆ.

ಬೆಂಗಳೂರು 09 ಏಪ್ರಿಲ್ 2013

ಸಂಪಾದಕೀಯ

ಬಿಜೆಪಿ ಭ್ರಮನಿರಸ ಓಟುಗಳು ಕಾಂಗ್ರೆಸಿಗೆ ಹರಿದು ಹೋಗದಿರಲಿ.

ವಚನಭ್ರಷ್ಟರಿಂದ ಬಿಜೆಪಿಗೆ ಅನ್ಯಾಯವಾಗಿದೆ ಎಂದು ಗಂಭೀರವಾಗಿ ಮನಸ್ಸಿಗೆ ಹಚ್ಚಿಕೊಂಡು, 2008 ರ ಚುನಾವಣೆಯಲ್ಲಿ ಬಿಜೆಪಿಗೆ ಮತನೀಡಿದ ರಾಜ್ಯದ ಜನ, ಕಳೆದ ಐದು ವರ್ಷಗಳ ಅದರ ದುರಾಡಳಿತ, ಭ್ರಷ್ಟಾಚಾರ ಮತ್ತು ಅಧಿಕಾರಕ್ಕಾಗಿ ನಡೆದ ಕಿತ್ತಾಟದಿಂದಾಗಿ ಬೇಸತ್ತು ಈ ಸಲ ಭಿನ್ನವಾದ ತೀರ್ಪನ್ನು ನೀಡಲು ಸಜ್ಜಾಗಿರುವುದು ಎದ್ದು ಕಾಣುತ್ತದೆ.ಬಿಜೆಪಿಗೆ ಇದು ಆಘಾತಕಾರಿ ಬೆಳವಣಿಯಾಗಿದ್ದು ಅದರ ಮುಖಂಡತ್ವ ಚುನಾವಣಾ ನಂತರವಾದರೂ ಬೇರೆ ಪಕ್ಷಗಳೊಂದಿಗೆ ಕೈಜೋಡಿಸಲು ಸಿದ್ದತೆ ಮಾಡಿಕೊಳ್ಳತೊಡಗಿದೆ.

ಚುನಾವಣೆ ನಡೆಯುವ ಮೊದಲೇ ಬಿಜೆಪಿ ಸರಿಸುಮಾರು ತನ್ನ ಸೋಲನ್ನು ಒಪ್ಪಿಕೊಂಡಿರುವುದು ಕಾಂಗ್ರೆಸ್‌ನಲ್ಲಿ ಎಲ್ಲಿಲ್ಲದ ನಿರೀಕ್ಷೆಯನ್ನು ಹುಟ್ಟುಹಾಕಿದೆ. ಬಿಜೆಪಿ ವಿರುದ್ದದ ಜನರ ಅತೃಪ್ತಿಯ ಲಾಭ ಅನಾಯಾಸವಾಗಿ ಕಾಂಗ್ರೆಸಿಗೇ ಆಗಲಿದೆ ಎಂಬ ಲೆಕ್ಕಾಚಾರ ಪ್ರಬಲವಾಗುತ್ತಿದ್ದಂತೆ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆ ನಿಯಂತ್ರಣಕ್ಕೆ ನಿಲುಕದಂತಾಗಿದೆ. ಟಿಕೆಟ್‌ಗಾಗಿ ಕಾಂಗ್ರೆಸ್‌ನಲ್ಲಿ ಭುಗಿಲೆದ್ದಿರುವ ಬಂಡಾಯ ಶಮನಗೊಳ್ಳುವ ಸಾಧ್ಯತೆ ಕಾಣಿಸುತ್ತಿಲ್ಲ. ಕಾಂಗ್ರೆಸ್‌ನಲ್ಲಿ ಹದ್ದು ಮೀರುತ್ತಿರುವ ಈ ಅಧಿಕಾರದಾಹ ಮುಂದೆ ಅದರ ಸಂಘಟನೆಯನ್ನು ದುರ್ಬಲಗೊಳಿಸದೆ ಇರಲಾರದು.


ಕಾಂಗ್ರೆಸ್ ಒಳಗಿನ ಈ ಬೆಳವಣಿಗೆಗೆ ಇನ್ನೊಂದು ಆತಂಕಕಾರಿ ಆಯಾಮ ಇರುವುದನ್ನು ಗಮನಿಸಬೇಕಾಗಿದೆ. ಬಿಜೆಪಿ ವೈಫಲ್ಯದಿಂದ ಭ್ರಮನಿರಸನಗೊಂಡವರ ಎಲ್ಲಾ ನಕಾರಾತ್ಮಕ ಓಟುಗಳು ಕಾಂಗ್ರೆಸ್ ಪಾಲಾಗುವುದು ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಕಾಂಗ್ರೆಸ್‌ನಿಂದ ಬಿಜೆಪಿಗಿಂತ ಉತ್ತಮವಾದ ಆಡಳಿತವನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಬಿಜೆಪಿಯ ಆರ್ಥಿಕ ಧೋರಣೆಗಳಿಗೂ ಕಾಂಗ್ರೆಸ್‌ನ ಆರ್ಥಿಕ ಧೋರಣೆಗಳಿಗೂ ಯಾವುದೇ ಮೂಲಭೂತ ವ್ಯತ್ಯಾಸವಿಲ್ಲ ಎಂಬುದನ್ನು 'ಪತ್ರಿಕೆ' ಯ ಅಂಕಣಗಳಲ್ಲಿ ಹಲವಾರು ಬಾರಿ ಚರ್ಚಿಸಲಾಗಿದೆ. ಭ್ರಷ್ಟಾಚಾರದ ವಿಷಯದಲ್ಲಿಯೂ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಆಯ್ಕೆ ಇಲ್ಲ. ಕಾಂಗ್ರೆಸ್ ಭ್ರಷ್ಟಾಚಾರದ ಗಂಗೋತ್ರಿ! ಬಿಜೆಪಿಯ ಬ್ರಹ್ಮಾಂಡ ಭ್ರಷ್ಟಾಚಾರದಿಂದ ಬೇಸತ್ತು ಭ್ರಷ್ಟಾಚಾರದ ಗಂಗೋತ್ರಿಯನ್ನೇ ಆಯ್ಕೆಮಾಡಿಕೊಳ್ಳವುದು ದೊಡ್ಡ ದುರಂತವೇ ಸರಿ.

ಬಿಜೆಪಿಗೆ ಮತ್ತು ಕಾಂಗ್ರೆಸ್‌ಗೆ ಧೋರಣೆಗಳ ಆಧಾರದಲ್ಲಿ ಜನಪರ ಪರ್ಯಾಯವನ್ನು ಎಡ ಪಕ್ಷಗಳು ಮಾತ್ರ ಒದಗಿಸಬಲ್ಲವು. ಎಡಪಕ್ಷಗಳನ್ನು ಗುರುತಿಸಿ ಬಲಪಡಿಸುವ ಮೂಲಕ ಮಾತ್ರ ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯ ಹಾವಳಿಯನ್ನು ತಪ್ಪಿಸಬಹುದು.

ಪ್ರಸಕ್ತ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಫಾರ್ವರ್ಡ್‌ಬ್ಲಾಕ್ ಪಕ್ಷಗಳು ಒಟ್ಟು 27 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿವೆ. ಎಡಪಕ್ಷಗಳೊಂದಿಗೆ ಕೈಜೋಡಿಸಿ ಕೆಲಸ ಮಾಡಲು ಮುಂದೆ ಬಂದಿರುವ ಲೋಕಸತ್ತಾ ಮತ್ತು ಸರ್ವೋದಯ ಕರ್ನಾಟಕ ಪಕ್ಷಗಳು ಸುಮಾರು 30 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡುತ್ತಿವೆ. ಎಡಪಕ್ಷಗಳ ಅಭ್ಯರ್ಥಿಗಳನ್ನು ಮತ್ತು ಎಡಪಕ್ಷಗಳೊಂದಿಗೆ ನಿಂತಿರುವ ಪ್ರಗತಿಪರ ಪಕ್ಷಗಳ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಗೆ ಒಂದು ಜನಪರ ಪರ್ಯಾಯವನ್ನು ಬಲಪಡಿಸಲು ಸಾಧ್ಯವಿದೆ. ಮತದಾರರು ಇದನ್ನು ಗಂಭೀರವಾಗಿ ಪರಿಗಣಿಸುವಂತಾಗಬೇಕು ಮತ್ತು ಆ ಮೂಲಕ ರಾಜಕಾರಣವನ್ನು 'ದುಡ್ಡು ಮಾಡುವ ದಂಧೆ'ಯನ್ನಾಗಿಸಿದವರನ್ನು ಹಿಮ್ಮೆಟ್ಟಿಸಬೇಕು

ಬಿಜೆಪಿ ವಿರುದ್ಧದ ನಕಾರಾತ್ಮಕ ಓಟುಗಳು ಕಾಂಗ್ರೆಸಿಗೆ ಹರಿದು ಹೋಗುವಂತಾದರೆ ಕಾಂಗ್ರೆಸ್ ಏಕಾಧಿಪತ್ಯಕ್ಕೆ ಆಹ್ವಾನ ನೀಡಿದಂತೆ! ಉದಾರೀಕರಣ ನೀತಿಗಳ ಜಾರಿಯ ವೇಗ ತೀವ್ರಗೊಳ್ಳುವುದು. ಆಗ, ಮತ್ತೇ ಬಿಜೆಪಿ ಬೇಕು, ಕಾಂಗ್ರೆಸ್ ಬೇಡ ಎನ್ನುವ ಪರಿಸ್ಥಿತಿ ನಿರ್ಮಾಣವಾಗುವುದು. ಹೀಗೆ ರಾಜ್ಯದ ಜನ ಕಾಂಗ್ರೆಸ್-ಬಿಜೆಪಿ ಎಂಬ ವಿಷವರ್ತುಲಕ್ಕೆ ಸಿಕ್ಕಿಹಾಕಿಕೊಂಡು ನಿರಂತರ ನಲುಗಬೇಕಾಗುತ್ತದೆ. ಈ ವಿಷ ವರ್ತುಲವನ್ನು ಒಡೆದು ಹಾಕಲು ಈ ಚುನಾವಣೆ ಇನ್ನೊಂದು ಅವಕಾಶವನ್ನು ಮತದಾರರ ಮನೆಬಾಗಿಲಿಗೆ ತಂದಿದೆ. ಬಿಜೆಪಿಯನ್ನು ಸೋಲಿಸಬೇಕು ಮತ್ತು ಕಾಂಗ್ರೆಸ್ ಬಹುಮತ ಪಡೆದು ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬರುವುದನ್ನು ತಡೆಯಬೇಕು. ಎಡಪಕ್ಷಗಳ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ, ಜನಪರವಾದ ರಾಜಕೀಯ ಗುಂಪುಗಳನ್ನು ಬೆಂಬಲಿಸುವ ಮೂಲಕ, ಬಿಜೆಪಿಯನ್ನೂ ಕಾಂಗ್ರೆಸನ್ನೂ ಚುನಾವಣೆಯ ನಂತರವೂ ವಿರೋಧಿಸಲು ಬದ್ಧವಾಗಿರುವ ಸ್ವತಂತ್ರ ಅಭ್ಯರ್ಥಿಗಳನ್ನು ಜಯಶೀಲರನ್ನಾಗಿ ಮಾಡುವ ಮೂಲಕ ಬಿಜೆಪಿಯನ್ನೂ ಕಾಂಗ್ರೆಸನ್ನೂ ಸೋಲಿಸಲು ಸಾಧ್ಯವಿದೆ. ಕರ್ನಾಟಕದ ಜನತೆಯ ಹಿತವನ್ನು ಕಾಪಾಡಲು ಸಾಧ್ಯವಿದೆ.

ಈ ಭಯೋತ್ಪಾದಕರು ಬಂದದ್ದಾದರೂ ಎಲ್ಲಿಂದ?



ಈ ಬುಧವಾರ ಬೆಂಗಳೂರಿನ ಕಾಡು ಮಲ್ಲೇಶ್ವರದಲ್ಲಿ ಆದ ಬಾಂಬ್ ಸ್ಫೋಟ ದಿಗ್ಭ್ರಮೆ ಹುಟ್ಟಿಸುವ ಘಟನೆ. ಹಾಡು ಹಗಲೇ ಅಂದಿನ ಬೆಳಿಗ್ಗೆ ನಡೆದ ಈ ಘಟನೆಯಲ್ಲಿ 15 ಕೆ.ಎಸ್.ಆರ್.ಪಿ. ಯ ಪೇದೆಗಳು, ಕೆಲವು ನಾಗರೀಕರು ಗಾಯಗೊಂಡು ಆಸ್ಪತ್ರೆ ಸೇರಿದ್ದಾರೆ. ಬಾಂಬ್ ಇಡಲಾಗಿತ್ತೆನ್ನಲಾದ ಬೈಕ್ ಸಂಪೂರ್ಣ ಛಿದ್ರವಾಗಿದೆ. ಎರಡು ಕಾರುಗಳು ಸುಟ್ಟು ಕರಕಲಾಗಿವೆ. ಎರಡು ಬೈಕ್‌ಗಳು ನಾಶವಾಗಿವೆ. ಜನತೆಯ ಮನಸ್ಸಿನ ಮೇಲಾದ ಗಾಯಗಳೂ ಗಂಭೀರ. ಮೂರು ವರುಷದ ಬಳಿಕ ಅದೇ ದಿನ ಕಾಕತಾಳೀಯವೆಂಬಂತೆ ಇಂತಹದ್ದೊಂದು ಸಂಭವಿಸಿದೆ!

ನಿಷ್ಪಕ್ಷಪಾತದ ಸಮಗ್ರ ತನಿಖೆ ಅಗತ್ಯ

'ಭಯೋತ್ಪಾದಕರು' (ಅವರೆ ಆಗಿದ್ದರೆ) ಯಾರೇ ಇರಲಿ, ಅವರ ಉದ್ದೇಶವೇನೇ ಇರಲಿ ಆ ಕೃತ್ಯ ಬೀರಬಹುದಾದ ಪರಿಣಾಮ ಅತ್ಯಂತ ದೀರ್ಘ ಹಾಗೂ ಘೋರ. ಆದ್ದರಿಂದ ಈ ಖಂಡನಾರ್ಹ ದುಷ್ಕೃತ್ಯದ ಕುರಿತು ಆಳವಾದ ತನಿಖೆ ಆಗಬೇಕು. ಸತ್ಯ ಸಂಗತಿಗಳು ಹೊರ ಬಂದು ನಿಷ್ಠುರ ಕ್ರಮ ಜರುಗಿಸಬೇಕು. ಇದು ಚುನಾವಣೆಯ ಸಂದರ್ಭ, ಹಾಗಾಗಿ ಹಲವು ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ಆಯಾಮಗಳ ಸಾಧ್ಯತೆಯಿರಬಹುದಾದ ಈ ಘಟನೆಯ ತನಿಖೆಯ ಬಗ್ಗೆ ಇನ್ನಷ್ಟು ಹೆಚ್ಚಿನ ಜಾಗರೂಕತೆ ಅಗತ್ಯ, ಕೇವಲ ರಾಜ್ಯ ಸರಕಾರದ ಏಜನ್ಸಿಗಳು ಮಾತ್ರವಲ್ಲ ಅಗತ್ಯ ಬಿದ್ದಲ್ಲಿ ಕೇಂದ್ರದ ನೆರವು ಪಡೆಯುವುದೂ ಅಗತ್ಯ.

ಇಲ್ಲಿ ನೆನಪಿಡಬೇಕಾದ ಒಂದು ಸಂಗತಿಯೆಂದರೆ ಹಿಂದಿನ ಘಟನೆಗಳ ಬಗ್ಗೆ ಆದಂತೆ ತನಿಖೆ ತೆವಳುತ್ತಲೇ ಇರಬಾರದು ಎಂಬುದು. ಅದಕ್ಕೂ ಹೆಚ್ಚಿನದೆಂದರೆ ಅತೀ ಸುಲಭವಾಗಿ ಪೂರ್ವಗ್ರಹ ಪೀಡಿತರಾಗಿ ನಿಗದಿತ ಯಾವುದೋ ಸಂಘಟನೆ, ಜನಾಂಗದ ಅಥವಾ ಯಾರದೋ ತಲೆಗೆ ಕಟ್ಟಿ ಕೈಗೆ ಸಿಕ್ಕವರನ್ನು ಜೈಲಿಗೆ ತಳ್ಳಿ ಸಾಗ ಹಾಕಬಾರದು.

ಯಾಕೀ ಅವಸರ?

ಆದರೆ ನಮ್ಮ ಸರಕಾರದ ಗೃಹ ಸಚಿವ ಅಶೋಕರವರನ್ನೂ ಒಳಗೊಂಡು ಕೆಲವು ಮಂತ್ರಿ ಮಹೋದಯರು, ಜೋಷಿ-ರಾಜನಾಥ್ ಸಿಂಗ್‌ರಂತಹ ರಾಜ್ಯ-ರಾಷ್ಟ್ರ ನಾಯಕರಿಗೆ ತಾಳ್ಮೆಯೇ ಇದ್ದಂತಿಲ್ಲ. ಇನ್ನೂ ತನಿಖಾದಳಗಳು ಅಲ್ಲಿಗೆ ಅದೇ ತಾನೇ ತಲುಪಿ, ಕುರುಹುಗಳು, ಬಳಸಲಾದ ವಸ್ತುಗಳನ್ನು ಸಂಗ್ರಹಿಸುತ್ತಿರುವಾಗಲೇ ತೀರ್ಮನೀಡಲು ಸಿದ್ಧರಾಗಿ ಕುಳಿತವರಂತೆ, ಸ್ಪರ್ಧೆಗೆ ಬಿದ್ದವರಂತೆ ಇಂಡಿಯನ್ ಮುಜಾಹಿದ್ದೀನರ ಕೃತ್ಯವೆಂದೂ, ಬಿಜೆಪಿ ನಾಯಕರ ಹತ್ಯೆಯ ಗುರಿ ಇತ್ತೆಂದೆಲ್ಲಾ ಬಡಬಡಿಸಿದ್ದು ಎಂತಹ ವಿಪರ್ಯಾಸ! ಇದನ್ನೇ ಪರಮ ಆದೇಶವೆಂದು ಪರಿಗಣಿಸಿ ಜನಶ್ರೀ, ಸಮಯ, ಸುವರ್ಣದಂತಹ ಕನ್ನಡವೂ ಒಳಗೊಂಡು ಕೆಲವು ಛಾನೆಲ್‌ಗಳೂ ತುತ್ತೂರಿ ಊದಿದ್ದಾದರೂ ಎಂತಹ ಹೊಣೆಗಾರಿಕೆ? ಏನಿದರ ಅರ್ಥ?

ಮರೆಯಬಾರದ ಘಟನೆಗಳು

ಪುಟ 4 ಕ್ಕೆ



ಬೆಂಗಳೂರು ಬಾಂಬ್ ಸ್ಫೋಟ : ಸಿಪಿಐ(ಎಂ) ಖಂಡನೆ – ತುರ್ತು ತನಿಖೆಗೆ ಆಗ್ರಹ

ಇಂದು ಬೆಂಗಳೂರು ಬಿಜೆಪಿ ಕಛೇರಿ ಬಳಿ ಸಂಭವಿಸಿದ ಬಾಂಬ್ ಸ್ಫೋಟದ ಬಗ್ಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ತೀವ್ರ ದಿಗ್ಭ್ರಮೆಯನ್ನು ವ್ಯಕ್ತಪಡಿಸಿದೆ. ಸಿಆರ್‌ಪಿಎಫ್ ಪೋಲಿಸರೂ ಸೇರಿದಂತೆ ಹತ್ತಾರು ಜನರನ್ನು ಗಾಯಗೊಳಿಸಿದ ಈ ಭಯೋತ್ಪಾದನಾ ಕೃತ್ಯವನ್ನು ಬಲವಾಗಿ ಖಂಡಿಸಿರುವ ಸಿಪಿಐ(ಎಂ), ಘಟನೆಯನ್ನು ತುರ್ತು ತನಿಖೆಗೆ ಒಳಪಡಿಸಿ ಅಮಾಯಕರ ಪ್ರಾಣಹಾನಿಗೆ ಕಾರಣವಾಗಬಹುದಾಗಿದ್ದ ಈ ದುಷ್ಕೃತ್ಯದ ಹಿಂದೆ ಇರುವ ಸಮಾಜ ಘಾತಕ ಶಕ್ತಿಗಳನ್ನು ಪತ್ತೆ ಹಚ್ಚಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದೆ. ಇಂತಹ ಭಯೋತ್ಪಾದಕ ಕೃತ್ಯಗಳು ಸಂಭವಿಸಿದಾಗ ಯಾರೂ ಜನರನ್ನು ಭಾವೋದ್ರೇಕಕ್ಕೆ ಒಳಪಡಿಸಬಾರದೆಂದು ಮನವಿ ಮಾಡಿರುವ ಸಿಪಿಐ(ಎಂ) ಕಾನೂನು ಮತ್ತು ವ್ಯವಸ್ಥೆಯ ಜವಾಬ್ದಾರಿ ಹೊತ್ತಿರುವ ರಾಜ್ಯ ಸರ್ಕಾರ ಈ ದುಷ್ಕೃತ್ಯದ ಹಿಂದೆ ಇರುವ ಶಕ್ತಿಗಳನ್ನು ಪತ್ತೆ ಹಚ್ಚಲು ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಆಗ್ರಹಿಸಿದೆ.

ಚುನಾವಣೆಗಳು ಸಮೀಪಿಸುತ್ತಿರುವಾಗ ಸಂಭವಿಸಿರುವ ಈ ಬಾಂಬ್ ಸ್ಫೋಟ ಹಲವು ಸಂಶಯಗಳಿಗೆ ಕಾರಣವಾಗಿದೆ. ಚುನಾವಣೆಯಲ್ಲಿ ಸಾರ್ವಜನಿಕ ಅನುಕಂಪಗಳಿಸುವ, ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರುವ ಉದ್ದೇಶದಿಂದ ಈ ದುಷ್ಕೃತ್ಯವೆಸಗಿರಬಹುದೆಂಬ ಅನುಮಾನ ಸಹಜವಾಗಿ ಉಂಟಾಗುತ್ತದೆ. ಇಂತಹ ಎಲ್ಲಾ ಅನುಮಾನ ಆತಂಕಗಳಿಗೆ ತೆರೆ ಬೀಳುವಂತಾಗಲು ವ್ಯಾಪಕವಾದ ನಿಷ್ಪಕ್ಷಪಾತದ ತನಿಖೆಗೆ ಸರ್ಕಾರದ ಮುಂದಾಗಬೇಕಾಗಿದೆ. ಘಟನೆಯಲ್ಲಿ ಗಾಯಗೊಂಡವರಿಗೆ ಅಗತ್ಯ ಚಿಕಿತ್ಸೆ ಹಾಗೂ ಗರಿಷ್ಠ ಪರಿಹಾರವನ್ನು ನೀಡಬೇಕೆಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ಈ ಭಯೋತ್ಪಾದಕರು ಬಂದದ್ದಾದರೂ ಎಲ್ಲಿಂದ?

ಪುಟ 3 ರಿಂದ

ಬಿಜೆಪಿ ಕಛೇರಿ ಬಳಿ ಸಂಭವಿಸಿದ ಈ ಸ್ಫೋಟದ ಘಟನೆಯ ಹಿಂದಿರುವ ಉದ್ದೇಶಗಳ ಬಗ್ಗೆ ಅನುಮಾನ ಪಡಲು ಸಾಕಷ್ಟು ಕಾರಣಗಳೂ ಇವೆ. ಹಿಂದೆ 2008 ರಲ್ಲಿನ ವಿಧಾನಸಭಾ ಚುನಾವಣಾ ಪ್ರಕ್ರಿಯೆಗಳು ನಡೆದಿರುವಾಗಲೇ ಅಂದರೆ 2ನೇ ಸುತ್ತಿನ ಮತದಾನಕ್ಕೆ ಕೇವಲ ಆರು ದಿನಗಳು ಬಾಕಿ ಇದ್ದಾಗ, ಹುಬ್ಬಳ್ಳಿ ಕೋರ್ಟ್‌ನಲ್ಲಿ ಬಾಂಬ್ ಸ್ಫೋಟಿಸಿತ್ತು. ಕೂಡಲೇ ಅದನ್ನು (ತನಿಖೆ ಪೂರ್ಣಗೊಳ್ಳುವ ಮೊದಲೇ) 'ಮುಸ್ಲಿಂ ಉಗ್ರಗಾಮಿಗಳ' ತಲೆಗೆ ಕಟ್ಟಲಾಗಿತ್ತು. ಆ ಘಟನೆಯಿಂದ ಜನರಲ್ಲಿ ಮೂಡಿದ ಆತಂಕ, ಭಯವನ್ನು ಬಿಜೆಪಿ ಚೆನ್ನಾಗಿಯೇ ಬಳಸಿಕೊಂಡಿತು, ಈ 'ಭಯೋತ್ಪಾದನಾ ಕೃತ್ಯ'ವು ಬಿಜೆಪಿಗೆ ಒಳ್ಳೇ ಫಲಿತಾಂಶವನ್ನೂ ತಂದಿತು. ವಿಚಾರಣೆ ಜಾಡು ಹಿಡಿದು ಜಾಲಾಡಿದ ತನಿಖಾ ಸಂಸ್ಥೆಗಳು ಪತ್ತೆಹಚ್ಚಿದ್ದು ಯಾವುದೇ ಭಯೋತ್ಪಾದನಾ ಸಂಘಟನೆಗೆ ಸಂಬಂಧವಿಲ್ಲವರ ಸ್ಫೋಟದ ಸಂಚನ್ನು. ಕೊನೆಗೆ ಸಿಕ್ಕಿಬಿದ್ದದ್ದು ಪ್ರಮೋದ್ ಮುತಾಲಿಕನ ಶ್ರೀರಾಮ ಸೇನೆಯ, ಬಜರಂಗದಳದ ನಂಟಿನ ಕಾರ್ಯಕರ್ತರು. ಇದರಲ್ಲಿ ನಾಗರಾಜ ಜಂಬಲಗಿ ಎನ್ನುವಾತ ಪ್ರಮುಖನೆಂಬುದು ಪತ್ತೆಯಾಯಿತು. ಆದ-ರೆ ವಿಚಾರಣೆ ಮುಗಿಯುವ ಒಳಗೇ ಆತ ಜೈಲಿನಲ್ಲೇ ನಿಗೂಢವಾಗಿ ಕಗ್ಗೊಲೆಯಾಗಿ ಹೋದ ! ಹೀಗಾಗಿ ಇನ್ನೂ ಬಾಕಿ ಇದ್ದ ಹತ್ತಾರು ಸತ್ಯಗಳು ಆತನೊಂದಿಗೆ ಹತ್ಯೆಯಾದವು. ಪೂರ್ಣ ಸತ್ಯ ಹೊರ ಬರಲೇ ಇಲ್ಲ ! 'ಸಿಮಿ' ಸಂಘಟನೆಗೆ ಸೇರಿದವರರೆನ್ನಲಾದ ಸಫೂದ್ ನಾಗೋರಿ ಮತ್ತು ಸಹಚರರು ಕೋರ್ಟ್‌ಗೆ ವಿಚಾರಣೆ ಬರುವರೆಂದೇ ನಡೆಸಿದ ಸ್ಫೋಟವೆಂದು ನಂತರ ಪೋಲೀಸರ ತನಿಖೆಯಲ್ಲಿ ತಿಳಿದು ಬಂದ ಸಂಗತಿ. ಸಂಘಪರಿವಾರದಿಂದಲೇ ಹೊರ ಹಾಕಲಾಗಿದೆಯೆಂದೆಲ್ಲಾ ಹೇಳುತ್ತಿದ್ದ ಈ ಮುತಾಲಿಕ ಈಗ ಬಿಜೆಪಿಯಲ್ಲಿದ್ದಾನೆ, ಟಿಕೇಟ್ ಆಕಾಂಕ್ಷಿಯಾಗಿದ್ದ ಎನ್ನುವುದೂ ಗಮನಾರ್ಹ!

ಅದೇ ವರುಷದಲ್ಲಿ, ಬಿಜೆಪಿ ಅಧಿಕಾರಕ್ಕೆ ಬಂದು ಕರ್ನಾಟಕವನ್ನು ಮೋದಿಯ ಗುಜರಾತನ್ನಾಗಿಸುವುದಾಗಿ 'ಗುಜರಾತ್ ಮಾದರಿ' ಬಗ್ಗೆ ಅಬ್ಬರಿಸುತ್ತಿದ್ದ ಅವಧಿಯಲ್ಲೇ ಬೆಂಗಳೂರಿನಲ್ಲಿ ಹತ್ತು ಕಡೆಗಳಲ್ಲಿ ಲಘು ಬಾಂಬ್ ಸ್ಫೋಟಗಳು ನಡೆದವು. ಒಬ್ಬ ಮಹಿಳೆ ಬಲಿಯಾಗಬೇಕಾಯ್ತು. ಅದು ಕೋಮುತ್ವೇಷ ಉಲ್ಬಣಿಸಿದ್ದ ಸನ್ನಿವೇಶವೂ ಆಗಿತ್ತು. ಹಿಂದುತ್ವದ ಶಕ್ತಿಗಳು ಅಲ್ಪಸಂಖ್ಯಾತರ ಮೇಲೆ ನಡೆಸುತ್ತಿದ್ದ ಆಕ್ರಮಣಗಳಿಗೆ ಪ್ರತಿಕ್ರಿಯೆಯಾಗಿತ್ತು ಎಂಬ ಅಂಶವೂ ಈ ಘಟನೆಯಲ್ಲಿ ಧ್ವನಿಸಿತ್ತು. ಈ ಮೂಲಕ ಕರ್ನಾಟಕ ಭಯೋತ್ಪಾದನಾ ಶಕ್ತಿಗಳಿಗೆ ನೆಲೆಯಾಗುತ್ತಿರುವುದರ ಸೂಚನೆಯಾಗಿತ್ತು. ಈ ಘಟನೆಗಳ ಪೂರ್ಣ ತನಿಖೆಯ ವರದಿ ಬರಬೇಕಷ್ಟೇ. ಆ ಬಳಿಕ 2009 ರಲ್ಲಿ ಕ್ರಿಕೆಟ್ ಸ್ಟೇಡಿಯಂ ಬಳಿಯ ಲಘು ಸ್ಫೋಟಗಳು ಇನ್ನೆಂತಹುದೋ ಕಥೆಗಳನ್ನು ಹೇಳುತ್ತವೆ.

ಇನ್ನು ಮಾಲೆಗಾಂವ್ ಸ್ಫೋಟದ ಘಟನೆಗೂ ಅದರ ರುವಾರಿಗಳಾದ ಪ್ರಗ್ನಾಸಿಂಗ್, ಜ.ಪುರೋಹಿತ್ ಮುಂತಾದವರ ಕರ್ನಾಟಕದ ನಂಟು ಕುಖ್ಯಾತವೇ.

ಹಲವು ಪ್ರಶ್ನೆಗಳು

ಇಂತಹ ಹಿನ್ನೆಲೆಗಳಿಂದಾಗಿಯೇ ಮಲ್ಲೇಶ್ವರಂನಲ್ಲಿನ ಸ್ಫೋಟದ ಘಟನೆಯನ್ನು ಹಲವು ಅನುಮಾನಗಳಿಂದ, ಆಯಾಮಗಳಿಂದ ಪರಿಶೀಲಿಸಬೇಕಾಗುತ್ತದೆ. ಈ ಹಿನ್ನೆಲೆಯಿಂದಾಗಿಯೇ 'ಭಯೋತ್ಪಾದಕ'ರಿಗೆ ಬಿಜೆಪಿ ಕಛೇರಿಯೇ ಗುರಿಯಾಗಿದ್ದಲ್ಲಿ ಪಾರ್ಕಿಂಗ್ ಬಳಿ ಯಾಕೆ ಬಾಂಬ್ ಇರಿಸಿದ್ದು, ಅದೂ ಪೋಲೀಸರು ದಿನವಿಡೀ ಇರುವಾಗ ಹೇಗೆ ಇರಿಸಿದ್ದು, ಗಾಡಿ ಬಿಟ್ಟಿದ್ದು, ಬುಧವಾರ ಯಾವ ನಾಯಕರೂ ಕಛೇರಿಗೆ ಬರುವುದಿಲ್ಲ ಎಂದು ಗೊತ್ತಿರುವಾಗ ಬಿಜೆಪಿ ನಾಯಕರು ಹೇಳುವಂತೆ ಅವರನ್ನು ಟಾರ್ಗೆಟ್ ಹೇಗೆ ಮಾಡುವರು, ತನಿಖೆ ಆರಂಭಗೊಳ್ಳುವ ಮೊದಲೇ ಇಂಥವರೇ, ಇಂಥಾ ಉದ್ದೇಶ ಎಂದು ಆ ನಾಯಕರು ಹೇಳುವುದಾದರೂ ಹೇಗೆ ಎಂಬೆಲ್ಲಾ ಪ್ರಶ್ನೆಗಳನ್ನು ರಾಜಕೀಯ, ಸಾಮಾಜಿಕ ಪ್ರತಿನಿಧಿಗಳು ಮಾತ್ರವಲ್ಲ ಕೆಲವು ಪತ್ರಿಕೆ ಮಾಧ್ಯಮಗಳು ಎತ್ತಿರುವುದು ಗಮನಿಸಬೇಕಾದ ವಿಷಯ. ಬಿಜೆಪಿ ಇದನ್ನು ಬಳಸಿಕೊಳ್ಳಲು ತೋರಿದ ಅವಸರವೂ ಪ್ರಶ್ನಾರ್ಹ.

ಇಲ್ಲಿ ತನಿಖೆಗೆ ಒಂದು ಸಹಾಯಕ ಅಂಶವಿರುವುದು ಹುಬ್ಬಳ್ಳಿ ನ್ಯಾಯಾಲಯದ ಸ್ಫೋಟದ ಪ್ರಕರಣವನ್ನು ಭೇದಿಸಿದ ಪೋಲೀಸ್ ಅಧಿಕಾರಿ ರಾಘವೇಂದ್ರ ಔರಾದಕರ್ ಈಗ ಬೆಂಗಳೂರಿನ ಪೋಲೀಸ್ ಕಮಿಷನರ್. ಸ್ಟೇಡಿಯಂ ಸ್ಫೋಟದ ತನಿಖೆ ಅಧಿಕಾರಿಗಳಾದ ನ್ಯಾಮೇಗೌಡ ಮುಂತಾದವರೂ ಇಲ್ಲಿದ್ದಾರೆ. ಅಂತಹ ಅಧಿಕಾರಿಗಳ ಸೇವೆಯನ್ನು ಪಡೆದು ಮುಕ್ತವಾದ ತನಿಖೆ ನಡೆಸಲು ರಾಜ್ಯ ಸರಕಾರ ಅವಕಾಶ ಕೊಡಬೇಕು. ಹಸ್ತಕ್ಷೇಪ ಕೂಡದು.

ರಾಜಕೀಯ ಬೇಡ ಎನ್ನುವ ರಾಜಕೀಯ

'ಈ ಘಟನೆಯನ್ನು ಯಾರೂ ರಾಜಕೀಯಕ್ಕೆ ಬಳಸಿಕೊಳ್ಳಬಾರದು' ಅಂತಾ ಬಿಜೆಪಿ, ಕಾಂಗ್ರೆಸ್ ಮುಂ. ವಿವಿಧ ಪಕ್ಷಗಳ ನಾಯಕರೇನೋ ಹೇಳುತ್ತಿದ್ದಾರೆ. ಆದ-ರೆ ಹಾಗೆ ಹೇಳುತ್ತಲೇ ತಮ್ಮ ರಾಜಕೀಯ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ತಮಗೆ ಮಾತ್ರ ಅವಕಾಶವಿರಬೇಕೆಂದೂ , ಅದಕ್ಕೆ ಬೇರೆಯವರು ಪ್ರತ್ಯುತ್ತರ ನೀಡಬಾರದೆಂದು ಬಯಸುತ್ತಾರೆ. ಅದರಲ್ಲಿ ಬಿಜೆಪಿ ಅಗ್ರಗಣ್ಯ. ಈಗಾಗಲೇ ಒಂದು ಹಂತದಲ್ಲಿ ಸೋಲನ್ನು ಒಪ್ಪಿಕೊಂಡು , ಜನತೆಯಿಂದ ತಿರಸ್ಕಾರಕ್ಕೆ ಒಳಗಾಗುವ, ಸೋಲುವ, ಹತಾಶೆ, ಆತಂಕದಲ್ಲಿರುವ ಬಿಜೆಪಿಯು ಈ ಘಟನೆಯಿಂದ ಹುತಾತ್ಮ ಫಲವನ್ನು ಅಪೇಕ್ಷಿಸುತ್ತಿದೆ. ಈ ಸಂಘಪರಿವಾರಿಗಳಿಗೆ ಮತಗಳ ಮಾವಿನಕಾಯಿ ಉದುರಿಸಿಕೊಳ್ಳಲು ಇರುವ ಮಂತ್ರವೆಂದರೆ ಅದು ಭಯೋತ್ಪಾದನೆ, ಕೋಮುವಾದದ ದ್ವೇಷ. ಝುಣ. ಝುಣ ಕಾಂಚಾಣ , ಜಾತಿವಾದ. ತಾವು ಸೋಲುವಲ್ಲಿ ಇವು ಗೆಲುವು ತರುವ ದಿವ್ಯೌಷಧಿ ಎಂಬುದು ಈ ಪರಿವಾರದ ಲೆಕ್ಕಾಚಾರ.

ಹೀಗೆ ಸಂಘಪರಿವಾರದ ಉದ್ದೇಶಗಳನ್ನು ಪ್ರಶ್ನಿಸುವಾಗಲೇ ಅಲ್ಪಸಂಖ್ಯಾತರ ನಡುವಿನ ಮೂಲಭೂತವಾದಿಗಳ ಕನಸನ್ನೂ, ಕಾರ್ಯಾಚರಣೆಗಳನ್ನೂ ನಿರ್ಲಕ್ಷಿಸಬೇಕಿಲ್ಲ. ಹಿಂದುತ್ವದ ಶಕ್ತಿಗಳು ಮತ್ತು ಮತೀಯ ಮೂಲಭೂತವಾದಿಗಳು ಒಂದು ಇನ್ನೊಂದನ್ನು ಪೋಷಿಸುವ, ಬೆಳೆಸುವ ಶಕ್ತಿಗಳು ಎಂಬುದು ಅನೇಕ ಸಂದರ್ಭಗಳಲ್ಲಿ ಸಾಬೀತಾಗಿದೆ.

ತಾಳ್ಮೆ ಇರಲಿ

ಆದ್ದರಿಂದ ಯಾವುದೇ ಒಂದು ಅಭಿಪ್ರಾಯಕ್ಕೆ ಬರುವ ಮೊದಲು ಸಮಗ್ರವಾಗಿಯೇ ಪರಿಶೀಲಿಸಿ ನಿರ್ಣಯ-ಕ್ಕೆ ಬರಬೇಕಾಗುತ್ತದೆ. ಜನತೆಯ ತಾಳ್ಮೆ, ಸಂಯಮ ಕಾಯ್ದು ಕೊಳ್ಳುವುದಕ್ಕೆ ಮಹತ್ವವಿರುವುದು ಈಗಲೇ. ಅಂತೂ, ಈ ಸಂದರ್ಭದಲ್ಲಿ ವ್ಯಕ್ತವಾದ ಜನತೆಯ ಪ್ರಕ್ರಿಯೆಯೂ ಸ್ವಾಗತಾರ್ಹವಾಗಿದೆ. ಅವರು ಹಿಂದಿನ ಕೆಲ ಸಂದರ್ಭಗಳಂತೆ ಭಾವೋದ್ರೇಕಕ್ಕೆ ಒಳಗಾಗದೇ ಒಂದು ಮಟ್ಟಿನ ಪರಿಶೀಲನಾ ಪ್ರಶ್ನೆಗಳಿಂದ ಪ್ರತಿಕ್ರಿಯಿಸಿದ್ದಾರೆ.

ಒಂದಂತೂ ನಿಜ, ಪೂರ್ಣ ತನಿಖೆ ನಡೆದು ಸತ್ಯ ಹೊರ ಬರಲೇಬೇಕು. ನಿಷ್ಠುರ, ಕಠಿಣ ಕ್ರಮವೂ ಜರುಗಲೇಬೇಕು. ಒಂದು ಜನಾಂಗವನ್ನು ಅನುಮಾನದಿಂದ ನೋಡುವಂತೆ ಯಾರೂ ನಡೆದುಕೊಳ್ಳಬಾರದು. ಸಾಮರಸ್ಯ ಕದಡಬಾರದು. ಹಾಗೆ ಮಾಡಿದಲ್ಲಿ ಅಂತಹವರ ಮೇಲೆ ಚುನಾವಣಾ ಆಯೋಗವು ಕ್ರಮ ಜರುಗಿಸಬೇಕು. ಅಲ್ಲದೇ ಇದನ್ನು ರಾಜಕೀಯ ದುರ್ಲಾಭ, ಸಂಕುಚಿತ ಹಿತಾಸಕ್ತಿಗೆ ಬಳಸುವುದನ್ನು ಒಕ್ಕೊರಲಿನಿಂದ ವಿರೋಧಿಸಬೇಕು.

ಹಾಗೇ ಈಗಿರುವ ಹಾಲಿ ಸರಕಾರ-ಕ್ಕೆ ಒಂದು ಜವಾಬ್ದಾರಿಯೂ ಇದೆ. ಘಟನೆ ನಡೆಯದಂತೆ ತಡೆಯುವಲ್ಲಿ ತಾನು ವಹಿಸಿದ ಪಾತ್ರವೂ ಒಳಗೊಂಡು ಈಗ ಎದ್ದಿರುವ ಎಲ್ಲಾ ಅನುಮಾನಗಳಿಗೆ ಸಮರ್ಪಕ ಉತ್ತರ ನೀಡಬೇಕು.


ಜನಶಕ್ತಿ
ಕನ್ನಡ ವಾರಪತ್ರಿಕೆ

ಎಡ ಪಕ್ಷಗಳ ಅಭ್ಯರ್ಥಿಗಳನ್ನು ಗೆಲ್ಲಿಸಿ

-ವಿ.ಜೆ.ಕೆ. ನಾಯರ್.

ಸಾರ್ವತ್ರಿಕ ಚುನಾವಣೆಗಳಿಗೆ ಇನ್ನೊಂದು …ರ್ಷ ಇರುವಾಗಲೇ ಕರ್ನಾಟಕ ವಿಧಾನ ಸಭಾ ಚುನಾವಣೆಗಳು ನಡೆಯುತ್ತಿವೆ. 2004 ರಲ್ಲಿ ಲೋಕಸಭಾ ಚುನಾವಣೆಗೆಳು ನಡೆದಾಗಲೇ ರಾಜ್ಯ ವಿಧಾನ ಸಭಾ ಚುನಾವಣೆಗಳು ನಡೆದಿದ್ದವು. ಆಗ ಎಡಪಕ್ಷಗಳ ಬೆಂಬಲದಿಂದ





ಬಾಗೇಪಲ್ಲಿ
ಜಿ.ವಿ.ಶ್ರೀರಾಮರೆಡ್ಡಿ

ಕೇಂದ್ರದಲ್ಲಿ ಮೊದಲ ಯುಪಿಎ ಸರ್ಕಾರ ರಚನೆಯಾಗಿತ್ತು. ಸರಿಸುಮಾರು ಅದೇ ರೀತಿಯಲ್ಲಿ ಅಂದು ಕರ್ನಾಟಕದಲ್ಲಿಯೂ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದು ಧರಂ ಸಿಂಗ್ ಮುಖ್ಯ ಮಂತ್ರಿಯಾಗಿಯೂ ಸಿದ್ದಾಮಯ್ಯ ಉಪ ಮುಖ್ಯ ಮಂತ್ರಿಯಾಗಿಯೂ ಅಧಿಕಾರ ಹಂಚಿಕೊಂಡಿದ್ದರು. ಆದರೆ, ಗಣಿ ಮಾಫಿಯಾ, ಭೂ ಮಾಫಿಯಾ ಮತ್ತು ಆಳುವ ವರ್ಗಗಳ ಇತರ ಲಾಭಿಗಳ ಮಸಲತ್ತುಗಳಿಂದಾಗಿ ಮಧ್ಯದಲ್ಲೇ ಈ ಮಂತ್ರಿಮಂಡಲವನ್ನು ಕೆಳಗಿಳಿಸಲಾಯಿತ್ತು. ಅನಂತರ ದೇವೇಗೌಡರ ಕುಟುಂಬದ ರಾಜಕುಮಾರ ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ನಡುವೆ ಕುಖ್ಯಾತ 20-20 ರ ಒಪ್ಪಂದ ಏರ್ಪಟ್ಟಿತು. ಈ ಒಪ್ಪಂದಕ್ಕೆ ಬಳ್ಳಾರಿಯ ಗಣಿ ಲಾಭಿಯ ಪರವಾಗಿ 'ಲಾಡ್ ಸಹೋದರರು' ಮತ್ತು 'ರೆಡ್ಡಿ ಸಹೋದರರ' ಅನುಗ್ರಹವಿತ್ತು.

ಆರಂಭದಲ್ಲಿ ದೇವೇಗೌಡರು ಜಾತ್ಯಾತೀತ ಜನತಾದಳ ಮತ್ತು ಕೋಮುವಾದಿ ಬಿಜೆಪಿ ನಡುವಿನ ಅಪವಿತ್ರ ಮೈತ್ರಿಯಿಂದ ದೂರ ಉಳಿದಿದ್ದರೂ ಮತ್ತು ಜನರು ಅಂದುಕೊಂಡಂತೆ ಈ ಮೈತ್ರಿಯನ್ನು ವಿರೋಧಿಸಿತ್ತಿದ್ದಂತೆ ನಟಿಸಿದರೂ ಕುಮಾರಸ್ವಾಮಿ ಮತ್ತು ಯೆಡಿಯೂರಪ್ಪ ಜಂಟಿಯಾಗಿ 20 ತಿಂಗಳು ಕರ್ನಾಟಕವನ್ನು ಆಳಿದರು. ಆ ದಿನಗಳಲ್ಲಿ "ಕೋಮುವಾದ ಎಂದರೇನು?" ಎಂದು ಕುಮಾರಸ್ವಾಮಿ ಪ್ರಶ್ನೆ ಮಾಡಿದರು. ಆದರೆ ಅವರ ಅಪ್ಪನ ಪಕ್ಷಕ್ಕೆ ಜೋಡಿಸಲಾದ 'ಜಾತ್ಯಾತೀತ' ಎಂಬ ಪದದ ಅರ್ಥವೇನು ಎಂದು ಯಾರೂ ಕುಮಾರಸ್ವಾಮಿಯನ್ನು ಕೇಳಲಿಲ್ಲ.

ಮುಂದಿನ 20 ತಿಂಗಳಿಗೆ ಯಡಿಯೂರಪ್ಪನನ್ನು ಮುಖ್ಯ ಮಂತ್ರಿ ಮಾಡಬೇಕಾಗಿದ್ದ ಕುಮಾರಸ್ವಾಮಿ ಹಿಂದಕ್ಕೆ ಸರಿದರು. ಯೆಡಿಯೂರಪ್ಪ ಕುಮಾರಸ್ವಾಮಿ ಮೇಲೆ 'ವಚನಭ್ರಷ್ಟ' ಎಂಬ ಆರೋಪವನ್ನು ಹೊರೆಸಿ ವ್ಯಾಪಕ ಪ್ರಚಾರ ನಡೆಸಿದರು. ಇದರಿಂದ ಕುಮಾರಸ್ವಾಮಿಯನ್ನು ಕೆಳಗಿಳಿಸಲು ಯಡಿಯೂರಪ್ಪಗೆ ಸಾಧ್ಯವಾಯಿತು ಮತ್ತು ಒಂದು ಸಣ್ಣ ಅವಧಿಗೆ ಮುಖ್ಯ ಮಂತ್ರಿಯಾಗಲೂ ಸಾಧ್ಯವಾಯಿತು. ನಂತರ ಅದೂ ತಪ್ಪಿಹೋಯಿತು. ರಾಷ್ಟ್ರಪತಿ ಆಳ್ವಿಕೆ ಜಾರಿಗೆ



ಬಂತು. ರಾಷ್ಟಪತಿ ಪರವಾಗಿ ರಾಜ್ಯಪಾಲರ ಆಡಳಿತದಲ್ಲಿ ಕಾಂಗ್ರೆಸ್ ಲಾಭ ಪಡೆಯಿತು. 2008 ರ ಚುನಾವಣೆಗಳೊಂದಿಗೆ ರಾಷ್ಟಪತಿ ಆಳ್ವಿಕೆ ಕೊನೆಗೊಂಡು ಯಡಿಯೂರಪ್ಪನನ್ನು ಮತ್ತೆ ಅಧಿಕಾರಕ್ಕೆ ತಂದಿತು. ಹೀಗಾಗಿ, ರಾಮಕೃಷ್ಣ ಹೆಗಡೆ ಕಾಲದಿಂದ ವಿಧಾನ ಸಭಾ ಚುನಾವಣೆಗಳು ಲೋಕಸಭಾ ಚುನಾವಣೆಯೊಂದಿಗೆ ಒಟ್ಟಿಗೆ ನಡೆಯುತಾ ಬಂದದ್ದು, ಬದಲಾಗುವಂತಾಯಿತು. 1985 ರಲ್ಲಿ ಲೋಕಸಭ ಚುನಾವಣೆಗಳಲ್ಲಿ ಕಾಂಗ್ರೆಸ್ ಗೆದ್ದಾಗ ರಾಮಕೃಷ್ಣ ಹೆಗಡೆ ಅವರು ವಿಧಾನ ಸಭೆಯನ್ನು ವಿಸರ್ಜಿಸಿದರು. ಅಲ್ಲಿಂದ ಮುಂದೆ 1989 ರ ವರೆಗೆ 4 ವರ್ಷಗಳಿಗೂ ಹೆಚ್ಚು ಕಾಲ ರಾಮಕೃಷ್ಣ ಹೆಗಡೆ ಮತ್ತು ಒಂದು ಸಣ್ಣ ಅವಧಿಗೆ ಎಸ್.ಆರ್. ಬೊಮ್ಮಾಯಿ ಮುಖ್ಯ ಮಂತ್ರಿಯಾಗಿದ್ದರು. ಅಂದಿನಿಂದ ಒಟ್ಟಿಗೆ ನಡೆಯುತ್ತಿದ್ದ ಎರಡೂ ಚುನಾವಣೆಗಳು 2008 ರಿಂದ ಪ್ರತ್ಯೇಕವಾಗಿ ನಡೆಯುವಂತಾದವು.


ಆಳುವ ವರ್ಗಗಳ ಮಸಲತ್ತುಗಳಿಂದಾಗಿ ಮಾತ್ರ ಜನರ ಮೇಲೆ ಚುನಾವಣೆಗಳು ಪ್ರತಿವರ್ಷ ಎಂಬಂತೆ ಹೇರಲ್ಪಡುತ್ತವೆ.

1989 ರಲ್ಲಿ, 6 ವರ್ಷಗಳ ಕಾಲ ಅಧಿಕಾರದಿಂದ ಹೊರಗಿದ್ದ ಕಾಂಗ್ರೆಸ್ ಅಧಿಕಾರಕ್ಕೆ ಬಂತು. 1948 ರಿಂದ 1983 ರ ವರೆಗೆ ರಾಜ್ಯದಲ್ಲಿ ಕಾಂಗ್ರೆಸ್ ನಿರಂತರವಾಗಿ ಅಧಿಕಾರವನ್ನು ಅನುಭವಿಸಿತ್ತು. 1977 ರಲ್ಲಿ ಉತ್ತರ ಭಾರತದಲ್ಲೆಲ್ಲಾ ಜನತಾ ಪಾರ್ಟಿ ಅಧಿಕಾರಕ್ಕೆ ಬಂದರೂ, 1977-79ರ ಜನತಾ



ಪ್ರಯೋಗ ಕನಾಟಕದಲ್ಲಿ ವಿಫಲವಾಯಿತು. ಇಂದಿರಾಗಾಂಧಿಯವರ ಸರ್ವಾಧಿಕಾರ 1997 ರಲ್ಲಿ ಅಂತ್ಯವಾಯಿತು. 1980 ರಲ್ಲಿ ಅವರು ಮರಳಿ ಅಧಿಕಾರಕ್ಕೆ ಬಂದಾಗ, ಕರ್ನಾಟಕದಲ್ಲಿ ಸಂಜಯ್ ಪಡೆಯ ಪರವಾಗಿ ಆಳುತ್ತಿದ್ದ ಗುಂಡುರಾವ್‌ರವರ ಸರ್ವಾಧಿಕಾರ ಆಳ್ವಿಕೆ ಜಾರಿಯಲ್ಲಿತ್ತು. ಕಾಂಗ್ರೆಸ್ ಆಳ್ವಿಕೆಯನ್ನು ಕೆಳಗಿಳಿಸಲು ಸಾಧ್ಯವಾದದ್ದು ಎಡಪಕ್ಷಗಳಿಂದ, ಬೆಂಗಳೂರಿನಲ್ಲಿ ವಿಶೇಷವಾಗಿ ಮತ್ತು ರಾಜ್ಯದ ಇತರ ಭಾಗಗಳಲ್ಲಿ ನಡೆಸಲಾದ ಅಭೂತಪೂರ್ವ ಕಾರ್ಮಿಕ ವರ್ಗದ ಹೋರಾಟ ಮತ್ತು ಚಾರಿತ್ರಿಕವಾದ ಮಲಪ್ರಭ


ಪುಟ 13 ಕ್ಕೆ



ಗುಲ್ಬರ್ಗಾ ಗ್ರಾಮೀಣ
ಮಾರುತಿ ಮಾನ್ಪಡೆ




ಬೈಂದೂರು
ಕೆ. ಶಂಕರ್




ಮಂಗಳೂರು ದಕ್ಷಿಣ
ವಸಂತ ಆಚಾರಿ



ಕೆ.ಆರ್.ಪುರಂ
ಗೌರಮ್ಮ



ಮಂಗಳೂರು
ಕೃಷ್ಣಪ್ಪ ಸಾಲಿಯಾನ್



ಗೌರಿಬಿದನೂರು
ಸಿ.ಸಿ ಅಶ್ವತ್ಥಪ್ಪ




ಬೆಳ್ತಂಗಡಿ
ಬಿ.ಎಂ. ಭಟ್



ಹೊಸಪೇಟೆ
ಆರ್. ಭಾಸ್ಕರ ರೆಡ್ಡಿ



ಆನೇಕಲ್
ಡಿ. ಮಹದೇಶ್



ಕೆ.ಜಿ.ಎಫ್
ಪಿ. ತಂಗರಾಜ್

ಚುನಾವಣಾ ಆಯೋಗದೊಂದಿಗೆ ಸಿಪಿಐ(ಎಂ) ರಾಜ್ಯ ನಿಯೋಗದ ಚರ್ಚೆ
ರಾಜಕೀಯ ಪಕ್ಷಗಳ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗೆ ಆಗ್ರಹ

ಕರ್ನಾಟಕದ ವಿಧಾನಸಭಾ ಚುನಾವಣೆಯ ಪ್ರಕ್ರಿಯೆ ಆರಂಭಗೊಂಡಿರುವ ಹಿನ್ನೆಲೆಯಲ್ಲಿ ಭಾರತ ಚುನಾವಣಾ ಆಯೋಗವು ರಾಜಕಿಯ ಪಕ್ಷಗಳೊಂದಿಗೆ ಇದೇ ಏಪ್ರೀಲ್ 8ರಂದು ಸಭೆಯೊಂದನ್ನು ನಡೆಸಿತು. ಇಂತಹುದೇ ಸಭೆಯೊಂದು ಮಾರ್ಚ್1ರಂದು ನಡೆದಿತ್ತು. ಈಗ ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಮುಖ್ಯ ಚುನಾವಣಾ ಆಯುಕ್ತರಾದ ಶ್ರೀ ಸಂಪತ್ ರವರೂ ಒಳಗೊಂಡು ಎಲ್ಲಾ ಆಯುಕ್ತರೂ ಹಾಜರಿದ್ದರು.

ಸಿಪಿಐ(ಎಂ) ಪಕ್ಷದ ನಿಯೋಗವು ಕೆಲವು ಮುಖ್ಯ ಪ್ರಶ್ನೆಗಳನ್ನು ಆಯೋಗದ ಗಮನಕ್ಕೆ ತಂದಿತು. ಈ ಪ್ರಕ್ರಿಯೆಯಲ್ಲಿ ಕೆಲವು ಅಭ್ಯರ್ಥಿಗಳು ಮತದಾರರಿಗೆ ಹಂಚಲೆಂದು ಇರಿಸಿದ್ದ ಹಣ., ಹೆಂಡ, ಮುಂತಾದವುಗಳನ್ನು ವಶಪಡಿಸಿಕೊಂಡಿದ್ದನ್ನು ಹಾಗೂ ಎಸಗಲಾದ ಅಕ್ರಮಗಳನ್ನು ಸ್ಥಳೀಯವಾಗಿ ಮಾತ್ರ ಮಾಧ್ಯಮಗಳಿಗೆ ಮಾಹಿತಿ ಬಹಿರಂಗಪಡಿಸುವಾಗಲೇ ಅದನ್ನು ರಾಜ್ಯ ಮಟ್ಟದಲ್ಲಿಯೂ ಪ್ರತಿದಿನ ಕ್ರೋಢೀಕರಿಸಿ ಪ್ರಕಟಿಸಬೇಕೆಂದು ಸೂಚಿಸಲಾಯಿತು. ಅಲ್ಲದೇ ಅಂತಹ ಪ್ರಕರಣಗಳಲ್ಲಿ ಕ್ಷಿಪ್ರ ಕ್ರಮವಹಿಸಬೇಕೆಂದು ಆಗ್ರಹಿಸಿತು. ಈ ಸಲಹೆಯನ್ನು ಸ್ವಾಗತಿಸಿದ ಆಯೋಗವು ಕ್ರಮ ವಹಿಸುವುದಾಗಿ ತಿಳಿಸಿತು.

ಆಯೋಗವು ಹಣ ಮತ್ತು ತೋಳ್ಬಲದ ಬಳಕೆಯನ್ನು ನಿಯಂತ್ರಿಸಲು ವಹಿಸಿರುವ ಕ್ರಮಗಳನ್ನು ಸ್ವಾಗತಿಸಿದ ಸಿಪಿಐ(ಎಂ) ನಿಯೋಗವು ಅದೇ ಹೊತ್ತಿನಲ್ಲಿ ರಾಜಕೀಯ ಪಕ್ಷಗಳು ಮತದಾರರಿಗೆ ಜಾಗೃತಿ ಮಾಡುವ ಪ್ರಚಾರಕ್ಕಾಗಿ ಬಹಿರಂಗ ಸಭೆಗಳನ್ನು ಏರ್ಪಡಿಸಲು,ಬ್ಯಾನರ್ಸ್,ಕರಪತ್ರ ಬಳಸಲು ಮತ್ತು ಅದರಲ್ಲಿರಬೇಕಾದ ಅಂಶಗಳನ್ನು ಪೂರ್ವ ಒಪ್ಪಿಗೆ ಪಡೆಯಬೇಕೆಂಬಂತಹ ಯಾವುದೇ ನಿರ್ಬಂಧಗಳನ್ನು ವಿಧಿಸುವುದನ್ನು ದೃಢವಾಗಿ ವಿರೋಧಿಸಿತು. ಪಕ್ಷದ ಸ್ಪರ್ದೆ ಇಲ್ಲದ ಕಡೆಗೂ ಪ್ರಚಾರಿಸುವ ಹಕ್ಕನ್ನು ಪ್ರತಿಪಾದಿಸಿತು.ಅಲ್ಲದೇ ಸಭೆಗಳಿಗೆ ಸಭಾಂಗಣ, ಛತ್ರಗಳ ಬಳಕೆಗೂ ನಿರ್ಬಂಧವಿರುವುದನ್ನು ಗಮನಕ್ಕೆ ತಂದಿತು. ಚಿಕ್ಕಬಳ್ಳಾಪುರ ಮತ್ತಿತರೆಡೆಯ ನಿರ್ದಿಷ್ಟ ಪ್ರಕರಣಗಳನ್ನು ಆಲಿಸಿದ ಆಯೋಗವು ಅವುಗಳನ್ನು ಪರಿಹರಿಸುವುದಾಗಿಯೂ ನಿರ್ಬಂಧಗಳನ್ನು ಮಾಡುವುದಿಲ್ಲವೆಂದು ಭರವಸೆ ನೀಡಿತು. ಹಿಂದಿನ ಸಭೆಯಲ್ಲಿಯೂ ಇಂತಹುದೇ ವಿಷಯಗಳನ್ನು, ಪ್ರಚಾರದ ಅವಧಿ ಹೆಚ್ಚಳ ಅಭ್ಯರ್ಥಿಗಳಿಗೆ ರಕ್ಷಣೆ, ದೂರು ವಿಭಾಗ, ಸಮಾಲೋಚನೆಗಳಂತಹ ಅಂಶಗಳನ್ನು ಗಮನಕ್ಕೆ ತರಲಾಗಿತ್ತು.

ಅಲ್ಲದೇ ಪಕ್ಷವು ಸ್ಪರ್ಧಿಸದೇ ಇರುವ ಕಡೆಗಳಲ್ಲಿಯೂ ರಾಜ್ಯದ ಚುನಾವಣಾ ವೆಚ್ಚಗಳಿಗೆ ಸಾರ್ವಜನಿಕವಾಗಿ ನಿಧಿ ಸಂಗ್ರಹಿಸುವುದನ್ನು ತಡೆಯುತ್ತಿರುವ ಆಯೋಗದ ಕ್ರಮಗಳನ್ನು ವಿರೋಧಿಸಿ ಅದನ್ನು ಕೂಡಲೇ ತಡೆಯಬೇಕೆಂದು ನಮ್ಮ ಪಕ್ಷವು ಯಾವುದೇ ಕಾರ್ಪೋರೇ[illegible] ಕಂಪನಿಗಳು, ಸ್ಥಾಪಿತ ಹಿತಾಸಕ್ತಿಗ[illegible] ಮುಂತಾದವರಿಂದ ದೇಣಿ[illegible] ಪಡೆಯುತ್ತಿಲ್ಲವಾದ್ದರಿಂದ ಜನಸಮೂಹ[illegible] ಕೊಡುಗೆಯನ್ನೇ ಅವಲಂಭಿಸಿರುವುದನ[illegible] ಪ್ರಸ್ತಾಪಿಸಲಾಯಿತು. ಮತದಾರರ ಪಟ್ಟಿಯ[illegible] ಅಸಂಖ್ಯಾತ ದೋಷಗಳಿರುವುದನ್ನು ಗಮನ[illegible] ತರಲಾಯಿತು. ಹಾಗೂ ಮತದಾನದ ದಿ[illegible] ಸಾಲಿನಲ್ಲಿ ನಿಂತಿರುವಾಗಲೇ ಹಣ ಹಂಚಿ[illegible] ಮಾಡಿದ ಪ್ರಕರಣಗಳು ಮರು ಕಳಿಸದಂ[illegible] ತಡೆಯಲು, ಮತಗಟ್ಟೆಯಲ್ಲಿ ಮತ ಹಾಕು[illegible] ಪ್ರದೇಶ ಮತ್ತು ಬಾಕ್ಸ್ ನ ಮುಂದಿ[illegible] ತೆರೆಯನ್ನು ಎತ್ತರಿಸಲು ಸೂಚಿಸಲಾಯಿತು. ಇವುಗಳನ್ನು ಆಯೋಗವು ಒಪ್ಪಿಕೊಂಡಿತು.

ಆಯೋಗವನ್ನು ಭೇಟಿ ಮಾಡಿ[illegible] ನಿಯೋಗದಲ್ಲಿ ಸಿಪಿಐ(ಎಂ) ರಾ[illegible] ಕಾರ್ಯದರ್ಶಿ ಮಂಡಲಿ ಸದಸ್ಯರಾ[illegible] ಜಿ.ಎನ್.ನಾಗರಾಜ್, ರಾಜ್ಯ ಸಮಿ[illegible] ಸದಸ್ಯರಾದ ಎಸ್,ವೈ.ಗುರುಶಾಂತ್ ಮತ[illegible] ಅರ್ಪುದರಾಜನ್ ಇದ್ದರು.

ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಎಡಪಕ್ಷಗಳ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವ ಕುರಿತು ಸಿಪಿಐ(ಎಂ), ಸಿಪಿಐ ಮತ್ತು ಫಾರ್ವರ್ಡ್‌ಬ್ಲಾಕ್ ಪಕ್ಷಗಳು ನೀಡಿರುವ ಜಂಟಿ ಹೇಳಿಕೆ

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 3 ಎಡಪಕ್ಷಗಳು ಆಗಾಗ ಸಭೆ ಸೇರಿ, ಜನತೆಯನ್ನು ಕಾಡುತ್ತಿರುವ ತೀವ್ರ ಬೆಲೆಏರಿಕೆ, ಕಾರ್ಮಿಕರ ವೇತನ, ನಿವೇಶನರಹಿತರ ವಸತಿ ಸಮಸ್ಯೆ, ಕನಿಷ್ಠ ನಾಗರೀಕ ಸೌಲಭ್ಯಗಳ ಕೊರತೆ, ಸಾರ್ವಜನಿಕ ಪಡಿತರ ವ್ಯವಸ್ಥೆಯ ಕೊರತೆಗಳು ಮುಂತಾದವುಗಳನ್ನು ಎತ್ತಿಕೊಂಡು ಹೋರಾಟಗಳನ್ನು ಮಾಡುತ್ತಾ ಬಂದಿವೆ. 5 ವರ್ಷಗಳ ಹಿಂದೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಜನತೆಗೆ ಯಾವುದೇ ಪರಿಹಾರವನ್ನು ಒದಗಿಸಲಿಲ್ಲ. ಜನತೆಯು ಅನುಭವಿಸುತ್ತಿರುವ ಕೆಲವು ಮೂಲಭೂತ ಸಮಸ್ಯೆಗಳಿಗೆ ಕೇಂದ್ರದ ನೇತೃತ್ವದ ಯುಪಿಎ ಸರ್ಕಾರದ ನೀತಿಗಳೂ ಕಾರಣವಾಗಿದ್ದವು.

ಎಡಪಕ್ಷಗಳು, ಇದರ ಜತೆಯಲ್ಲೇ ಬಿಜೆಪಿ ಮತ್ತು ಕಾಂಗ್ರೆಸಿಗೆ ಒಂದು ಧೋರಣಾತ್ಮಕ ಪರ್ಯಾಯವನ್ನು ಜನತೆಯ ಮುಂದಿಡಲು ಪ್ರಯತ್ನಿಸುತ್ತಾ ಬಂದಿವೆ. ಕಳೆದ ಜನವರಿ 9ರಂದು ಬೆಂಗಳೂರಿನಲ್ಲಿ ಒಂದು ಜಂಟಿ ಪತ್ರಿಕಾಗೋಷ್ಠಿ ನಡೆಸಿ ಎಡಪಕ್ಷಗಳು ರಾಜ್ಯದಲ್ಲಿ ಸುಮಾರು 27 ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧೆಮಾಡಿ ರಾಜ್ಯದಲ್ಲಿ ಒಂದು ಬಿಜೆಪಿಯೇತರ ಹಾಗೂ ಕಾಂಗ್ರೇಸೇತರ ಪರ್ಯಾಯವನ್ನು ರೂಪಿಸಲು ಪ್ರಯತ್ನಿಸಲಾಗುವುದು ಎಂದು ಪ್ರಕಟಿಸಲಾಗಿತ್ತು. ಎಡಪಕ್ಷಗಳು ಪರಸ್ಪರ ವಿರುದ್ಧವಾಗಿ ಸ್ಪರ್ಧಿಸದಿರಲು ಮತ್ತು ಇತರ ಸಮಾನ ಮನಸ್ಕ ಪಕ್ಷಗಳನ್ನು ಒಂದು ವೇದಿಕೆಗೆ ಸೇರಿಸುವ ಸಾಧ್ಯತೆಯನ್ನು ಪರಿಶೀಲಿಸಲು ನಿರ್ಧರಿಸಲಾಗಿತ್ತು.

ಆನಂತರ ನಡೆದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಫಲಿತಾಂಶವನ್ನು ಗಮನಿಸಿದರೆ ವಿಧಾನಸಭಾ ಚುನಾವಣೆಗಳಲ್ಲಿಯೂ ಯಾವುದೇ ಒಂದು ಪಕ್ಷಕ್ಕೆ ಕನಿಷ್ಠ ಬಹುಮತ ಸಿಗುವ ಸಾಧ್ಯತೆ ಇಲ್ಲ. ಪ್ರಮುಖ ರಾಜಕೀಯ ಪಕ್ಷಗಳ ಬಗ್ಗೆ ಜನ ಭ್ರಮನಿರಸನಗೊಂಡಿದ್ದಾರೆ.

ಎಡಪಕ್ಷಗಳು, ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸುವಂತೆ ಮತದಾರರಲ್ಲಿ ಮನವಿ ಮಾಡುತ್ತವೆ. ಅದೇ ಸಮಯದಲ್ಲಿ ರಾಜ್ಯದಲ್ಲಿ ಬಿಜೆಪಿಯಾಗಲಿ, ಆದರಿಂದ ಬೇರ್ಪಟ್ಟ ಕೆಜೆಪಿ, ಬಿಎಸ್‌ಆರ್ ಕಾಂಗ್ರೆಸ್ ಪಕ್ಷವಾಗಲಿ ಹಾಗೂ ಕಾಂಗ್ರೆಸ್ ಪಕ್ಷವಾಗಲಿ ತಮ್ಮ ಸ್ವಂತ ಬಲದ ಮೇಲೆ ರಾಜ್ಯದಲ್ಲಿ ಅಧಿಕಾರಕ್ಕೆ ಬರುವುದನ್ನು ತಡೆಯಲು ಪ್ರಯತ್ನ ಪಡಲಿವೆ.

ಜೆಡಿ(ಎಸ್) ಈ ಸಲ ಏಕಾಂಗಿಯಾಗಿ ಸ್ಪರ್ಧಿಸಲು ಉದ್ದೇಶಿಸಿದ್ದರಿಂದ ಅದರೊಂದಿಗೆ ಎಡಪಕ್ಷಗಳ ಹೊಂದಾಣಿಕೆ ಇರುವುದಿಲ್ಲ.

ಎಡಪಕ್ಷಗಳು ಸುಮಾರು 27 ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಇಳಿಯುವ ಜೊತೆಯಲ್ಲಿ ಲೋಕಸತ್ತಾ ಪಕ್ಷ ಹಾಗೂ ಸರ್ವೋದಯ ಕರ್ನಾಟಕ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಿವೆ. ಹೀಗೊಂದು ಸಮಾನ ಮನಸ್ಕ ಜನಪರ ಪಕ್ಷಗಳ ವೇದಿಕೆಯನ್ನು ರಚಿಸಿಕೊಂಡು ರಾಜ್ಯದಲ್ಲಿ ಬಿಜೆಪಿಯನ್ನು ಮತ್ತು ಕಾಂಗ್ರೆಸ್ ಪಕ್ಷಗಳನ್ನು ಮತದಾರರು ತಿರಸ್ಕರಿಸುವಂತೆ ಪ್ರಯತ್ನಿಸಲಾಗುವುದು. ಎಡಪಕ್ಷಗಳೊಂದಿಗೆ ಕೈಜೋಡಿಸಿಕೊಂಡು ಕೆಲಸ ಮಾಡಲು ಸಿದ್ಧವಿರುವ ಇತರ ರಾಜಕೀಯ ಗುಂಪುಗಳನ್ನು ಹಾಗೂ ಸ್ವತಂತ್ರ ಅಭ್ಯರ್ಥಿಗಳನ್ನು ಸೇರಿಸಿಕೊಳ್ಳುವ ಪ್ರಯತ್ನ ಮುಂದುವರೆಸಲಾಗುವುದು.

ಎಡಪಕ್ಷಗಳು ಈ ಕೆಳಗಿನಂತೆ ತಮ್ಮ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ನಿರ್ಧರಿಸಿವೆ.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) –ಒಟ್ಟು 16 ಕ್ಷೇತ್ರಗಳು
(ಕ್ಷೇತ್ರ ಮತ್ತು ಸ್ಪರ್ಧಿಗಳ ವಿವರವನ್ನು ಪತ್ರಿಕೆಯಲ್ಲಿ ಈಗಾಗಲೇ ಪ್ರಕಟಿಸಲಾಗಿದೆ)

ಭಾರತ ಕಮ್ಯೂನಿಸ್ಟ್ ಪಕ್ಷ

ಕ್ರ.ಸಂ	ವಿಧಾನಸಭಾ ಕ್ಷೇತ್ರ	ಅಭ್ಯರ್ಥಿಯ ಹೆಸರು
1.	ಮೂಡಿಗೆರೆ	ಸಾತಿ ಸುಂದರೇಶ್
2.	ಮುಳಬಾಗಿಲು	ಎನ್. ಅಂಬರೀಶ್
3.	ಮೊಳಕಾಲ್ಮೂರು	ಪಟೇಲ್ ಜಿ. ಪ ನಾಯಕ್
4.	ಸಿಂಧನೂರು	ಬಾಶುಮಿಯಾ
5.	ಬೀದರ್ ದಕ್ಷಿಣ	ಬಾಬು ರಾವ್ ಹೊನ್ನ
6.	ಬಳ್ಳಾರಿ ನಗರ	ಕೆ. ನಾಗಭೂಷಣ ರಾವ್
7.	ಜೇವರ್ಗಿ	ಮಹೇಶ್‌ಕುಮಾರ್ ರಾಥೋಡ್
8.	ಸಂಡೂರು	ಹನುಮಂತಪ್ಪ

ಅಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್

ಕ್ರ.ಸಂ	ವಿಧಾನಸಭಾ ಕ್ಷೇತ್ರ	ಅಭ್ಯರ್ಥಿಯ ಹೆಸರು	ಪಕ್ಷದಲ್ಲಿ ಹೊಂದಿರುವ ಸ್ಥಾನ
1.	ಆಳಂದ	ಭೀಮ್ ಸಿಂಗ್ ರಾಥೋಡ್	ರಾಜ್ಯ ಸಮಿತಿ ಸದಸ್ಯರು
2.	ಚಿತ್ತಾಪುರ	ವಿಜಯ್ ಕುಮಾರ್ ಆರುಡಿ	ರಾಜ್ಯ ಸಮಿತಿ ಸದಸ್ಯರು
3.	ಸೇಡಂ	ನಾಗೇಂದ್ರಪ್ಪ ಗುರುಡಿ	ರಾಜ್ಯ ಸಮಿತಿ ಸದಸ್ಯರು

ರಾಜ್ಯದಲ್ಲಿ ಒಂದು ಎಡ ಪ್ರಜಾಸತ್ತಾತ್ಮಕ ಪರ್ಯಾಯವನ್ನು ಕಟ್ಟಿಬೆಳೆಸುವ ಅಂಗವಾ[illegible] ಈ ಚುನಾವಣೆಯಲ್ಲಿ ಎಡಪಕ್ಷಗಳ ಅಭ್ಯರ್ಥಿಗಳನ್ನು ಗೆಲ್ಲಿಸಬೇಕೆಂದು ಮತದಾರರಲ್ಲಿ ಮನ[illegible] ಮಾಡುತ್ತೇವೆ.

(ವಿ.ಜಿ.ಕೆ. ನಾಯರ್)
ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು
ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)

(ಪಿ.ವಿ. ಲೋಕೇಶ್)
ರಾಜ್ಯ ಕಾರ್ಯದರ್ಶಿ
ಭಾರತ ಕಮ್ಯೂನಿಸ್ಟ್ ಪಕ್ಷ

(ಜಿ.ಆರ್. ಶಿವಶಂಕರ್)
ರಾಜ್ಯ ಅಧ್ಯಕ್ಷರು
ಅಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್

ನರೇಂದ್ರ ಮೋದಿಯವರ ವಿಚಾರಣೆ ನಡೆಯಬೇಕಾಗಿದೆ


2002ರ ಗುಜರಾತ್ ಕೋಮು ದಳ್ಳುರಿಯಲ್ಲಿ ಅಲ್ಲಿನ ಸರಕಾರದ ಶಾಮೀಲಿನ ಸ್ಪಷ್ಟ ಸಾಕ್ಷ್ಯಗಳಿರುವುದು ಬೆಳಕಿಗೆ ಬಂದಿದೆ. ಮುಖ್ಯಮಂತ್ರಿಗಳು ಮತ್ತಿತರರ ವಿರುದ್ಧ ಮೊಕದ್ದಮೆಯನ್ನು ಮುಚ್ಚಿದ ಎಸ್‌ಐಟಿ ಕ್ರಮದ ವಿರುದ್ಧ ಹೊಸ ಅರ್ಜಿಗಳು, ಪ್ರತಿಭಟನಾ ಅರ್ಜಿ ಈಗ ನ್ಯಾಯಾಂಗದ ಮುಂದೆ ಬಂದಿವೆ. ಈ ಸಂದರ್ಭದಲ್ಲಿ, ನೈತಿಕತೆಯ ಯಾವುದೇ ಮಾನದಂಡದ ಪ್ರಕಾರವೂ ಮುಖ್ಯಮಂತ್ರಿಗಳು ತಕ್ಷಣವೇ ರಾಜಿನಾಮೆ ನೀಡಬೇಕಾಗಿತ್ತು. ಆದರೆ ಇವು ಯಾವುದರ ಪರಿವೆಯೂ ಇಲ್ಲದೆ ಆತ ತನ್ನನ್ನು ಭಾರತದ ಭವಿಷ್ಯದ ಪ್ರಧಾನ ಮಂತ್ರಿ ಎಂದು ಬಿಂಬಿಸುವ ಭರದಲ್ಲಿದ್ದಾರೆ. ಇದಕ್ಕೆ ಅವರ ಎನ್‌ಡಿಎ ಮಿತ್ರರಿಂದಲೇ ಸಂಪೂರ್ಣ ಅಸಮ್ಮತಿ ವ್ಯಕ್ತವಾಗಿದ್ದರೂ, ಕಾರ್ಪೊರೇಟ್ ವಲಯದ ಬೆಂಬಲ ಸಿಕ್ಕಿದೆ. ಏಕೆಂದರೆ, ಅದಕ್ಕೆ ಮಾನವ ಹಕ್ಕುಗಳನ್ನು ಬಲಿಗೊಟ್ಟಾದರೂ ತಮ್ಮ ಹಿತ ಸಾಧಿಸಬಲ್ಲ ಒಬ್ಬ 'ಬಲಿಷ್ಟ ನಾಯಕ', ಇಂತಹುದೇ ಒಬ್ಬ 'ಉದ್ಧಾರಕ' ಬೇಕಾಗಿದ್ದಾನೆ. ಫ್ಯಾಸಿಸಂನ ಬೆಳವಣಿಗೆಯಲ್ಲಿ ಆಗಿನ ಕಾರ್ಪೊರೇಟ್ ದೈತ್ಯರ ಪಾತ್ರ ಮಹತ್ವದ್ದು ಎಂಬುದನ್ನು ಮರೆಯಲಾಗದು.

ಸೀತಾರಾಮ್ ಯೆಚೂರಿ

ಬೆಂಗಳೂರಿನಲ್ಲಿ ಮತ್ತೊಂದು ಬಾಂಬ್ ಸ್ಫೋಟ ಸಂಭವಿಸಿದೆ. ಭಯೋತ್ಪಾದನೆಯನ್ನು, ಅದು ಯಾವ ಬಣ್ಣದ್ದೇ ಆಗಿರಲಿ, ಒಪ್ಪಲು ಸಾಧ್ಯವಿಲ್ಲ ಎಂದು ಈ ಅಂಕಣದಲ್ಲಿ ಹಲವು ಬಾರಿ ಗಮನಿಸಿದ್ದೇವೆ. ಭಯೋತ್ಪಾದನೆ ಸ್ಪಷ್ಟವಾಗಿ ರಾಷ್ಟ್ರ-ವಿರೋಧಿ, ಅದನ್ನು ಸರಕಾರವಾಗಲೀ, ಸಮಾಜವಾಗಲೀ ಎಳ್ಳಷ್ಟೂ ಸಹಿಸಿಕೊಳ್ಳಬಾರದು.

ದುರದೃಷ್ಟವಶಾತ್, ಇಂತಹ ಪ್ರತಿಯೊಂದು ಘಟನೆ ನಡೆದ ಕೂಡಲೇ ಅದನ್ನುಯಾರುಮಾಡಿದ್ದಾರೆ ಎಂಬ ತೀರ್ಮಾನಕ್ಕೆ ಬರಲಾಗುತ್ತದೆ. ಇದು ನಿಜವಾದ ಅಪರಾಧಿಗಳನ್ನು ಗುರುತಿಸುವ ಬದಲು ಗಮನವನ್ನು ಬೇ-ರೆಡೆಗೆ ತಿರುಗಿಸುವ ಸಂಭವವೇ ಹೆಚ್ಚು. ಬಹಳಷ್ಟು ಸಂದರ್ಭಗಳಲ್ಲಿ ಇದನ್ನು ಕ್ಷುದ್ರ ರಾಜಕೀಯ ಪ್ರಯೋಜನಕ್ಕೆ ಬಳಸಲಾಗುತ್ತದೆ. ಇಂತಹ ಹಲವು ದುರದೃಷ್ಟಕರ ಅನುಭವಗಳು ಈ ಹಿಂದೆ ದೇಶಕ್ಕೆ ಆಗಿದೆ. ಅಜ್ಮೇರ್ ಶರೀಫ್, ಹೈದರಾಬಾದ್ ಮೆಕ್ಕಾಮಸೀದಿ,ಮಲೇಗಾಂವ್ ಮುಂತಾದೆಡೆಗಳಲ್ಲಿ ನಡೆದ ಬಾಂಬ್ ಸ್ಫೋಟಗಳು ಮುಸ್ಲಿಂ ಮೂಲಭೂತವಾದಿ ಸಂಘಟನೆಗಳು ನಡೆಸಿದ್ದೆಂದು ಮೊದಲು ಶಂಕಿಸಲಾಗಿತ್ತು. ಆದರೆ ಅವು ಕೆಲವು ಹಿಂದುತ್ವ ಸಂಘಟನೆಗಳ ಕೃತ್ಯಗಳು ಎಂದು ಸಾಬೀತಾಗಿದೆ. ಅದೇನೇ ಇರಲಿ, ಬೆಂಗಳೂರು ಸ್ಫೋಟಗಳನ್ನು ನಡೆಸಿದವರನ್ನು ಗುರುತಿಸಿ ಶಿಕ್ಷಿಸಲು ಸರಿಯಾದ ತನಿಖೆಯನ್ನು ತುರ್ತಾಗಿ ಮಾಡಬೇಕಾಗಿದೆ.

ಈ ಸ್ಫೋಟಗಳು ರಾಜ್ಯ ವಿಧಾನಸಭೆಗೆ ಮೇ 5ರಂದು ಚುನಾವಣೆ ನಡೆಸುವ ಪ್ರಕಟಣೆಯ ನಂತರ ಸಂಭವಿಸಿದೆ. ಇದನ್ನು ಚುನಾವಣಾ ಲಾಭ ಗಿಟ್ಟಿಸಲಿಕ್ಕಾಗಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸಲು ಬಳಸುವ ಪ್ರವೃತ್ತಿ ಕಾಣುತ್ತಿದೆ. ಇದಕ್ಕೆ ಅವಕಾಶ ನೀಡಬಾರದು.



ಕೋಮುಧ್ರುವೀಕರಣದ ತಂತ್ರ

ಆದರೆ ಮುಂಬರುವ ದಿನಗಳಲ್ಲಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದೇ ಬಿಜೆಪಿಯ ಚುನಾವಣಾ ಕಾರ್ಯತಂತ್ರದ ಬೆನ್ನೆಲುಬಾಗಿದೆ ಎಂಬ ಸಂಕೇತಗಳು ಬಲವಾಗಿವೆ. ಬಿಜೆಪಿಯಲ್ಲಿನ ವಿಭಾಗಗಳು ಗುಜರಾತಿನ ಮುಖ್ಯಮಂತ್ರಿಯನ್ನು ತಮ್ಮ ಭವಿಷ್ಯದ ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಬಿಂಬಿಸುವ ಹಟ ತೊಟ್ಟಿವೆ.


ಗುಜರಾತ್‌ನ 2002ರ ಕೋಮುವಾದಿ ಹತ್ಯಾಕಾಂಡದಲ್ಲಿ ಈ ಮುಖ್ಯಮಂತ್ರಿಯ ನೇತೃತ್ವದಲ್ಲಿದ್ದ ರಾಜ್ಯ ಸರಕಾರದ ಶಾಮೀಲನ್ನು ತೋರಿಸುವ ಸಾಕ್ಷ್ಯಗಳು ಇತ್ತೀಚೆಗೆ ಬಯಲಿಗೆ ಬಂದಿವೆ. ದುರದೃಷ್ಟಕರ ಗೋಧ್ರ ರೈಲು ದುರಂತದ ನಂತರ ಈ ಸರಕಾರಕ್ಕೆ ಒಂದು ಕೋಮುವಾದಿ ದಳ್ಳುರಿಯ ಸನ್ನಿವೇಶ ಉಂಟಾಗುತ್ತಿದೆ ಎಂದು ಸೂಚಿಸುವ ಗುಪ್ತಚರ ವರದಿಗಳ ನಿರಂತರ ಪ್ರವಾಹವೇ ಹರಿದು ಬರುತ್ತಿದ್ದರೂ, ಅವನ್ನು ರಾಜ್ಯದ ಆಡಳಿತ ಗಣನೆಗೇ ತಗೊಳ್ಳಲಿಲ್ಲ ಎಂಬುದು ಸ್ಪಷ್ಟವಾಗಿ ಇದರಲ್ಲಿ ಕಂಡಿದೆ. ವಿಚಿತ್ರವೆಂದರೆ, ಈ ಎಲ್ಲ ಮಾಹಿತಿಗಳನ್ನು ವಿಶೇಷ ತನಿಖಾ ದಳ(ಎಸ್‌ಐಟಿ)ಕ್ಕೆ ಅದು ತನ್ನ ಅಂತಿಮ ವರದಿ ಸಲ್ಲಿಸುವ ಮೂರೂವರೆ ತಿಂಗಳ ಮೊದಲೇ ಸಲ್ಲಿಸಲಾಗಿತ್ತು. ಈಗ, ಈ ಎಸ್‌ಐಟಿ ಆಗಿನ ಅಪರಾಧಗಳನ್ನು ಮುಚ್ಚಿ ಹಾಕಲು ನಿರ್ಧರಿಸಿತು, ನ್ಯಾಯಾಲಯವನ್ನು ತಪ್ಪು ದಾರಿಗೆಳೆಯಲು ವಿಶೇಷ ಪ್ರಯತ್ನ ನಡೆಸಿ, ಆಪಾದಿತರೆಲ್ಲ ಶುದ್ಧಹಸ್ತರು ಎಂದು ಹೇಳಿ ಮೊಕದ್ದಮೆಯನ್ನು ಮುಗಿಸಿದೆ ಎಂಬ ಹೊಸ ಅರ್ಜಿಗಳನ್ನು ನ್ಯಾಯಾಂಗದ ಎದುರು ಸಲ್ಲಿಸಲಾಗಿದೆ. ಹೇಗೆ ರಾಜ್ಯ ಆಡಳಿತ ಬೇ-ಕೆಂದೇ ರಾಜ್ಯ ಗುಪ್ತಚರ ಇಲಾಖೆಯ ಎಚ್ಚರಿಕೆಗಳನ್ನು ಉಪೇಕ್ಷಿಸಿ, ಸುಮಾರಾಗಿ ತಾನೇ ಕೋಮುವಾದಿ ಹತ್ಯಾಕಾಂಡದ ರೂವಾರಿ ಆಗಿತ್ತು ಎಂದು ದಾಖಲೆಗಳು ತೋರಿಸುತ್ತವೆ ಎಂಬ ಸಂಗತಿಯನ್ನು ನ್ಯಾಯಾಂಗ ಪರಿಗಣನೆಗೆ ತಗೊಳ್ಳಬೇಕು.

ಇಂತಹ ಸಂದರ್ಭದಲ್ಲಿ, ನೈತಿಕತೆಯ ಯಾವುದೇ ಮಾನದಂಡದ ಪ್ರಕಾರವೂ ಗುಜರಾತದ ಮುಖ್ಯಮಂತ್ರಿ ತಕ್ಷಣವೇ ರಾಜಿನಾಮೆ ನೀಡಬೇಕಾಗಿತ್ತು.

ಇಷ್ಟೇ ಅಲ್ಲ, ಈ ಹಿನ್ನೆಲೆಯಲ್ಲಿ ಈ ಗಲಭೆಗಳಲ್ಲಿ ಅಮಾನುಷವಾಗಿ ಸಾಯಿಸಲ್ಪಟ್ಟ ಮಾಜಿ ಸಂಸತ್ ಸದಸ್ಯ ಎಹ್ಸಾನ್ ಜಾಫ್ರಿಯವರ ಪತ್ನಿ ಶ್ರೀಮತಿ ಝಕಿಯಾ ಜಾಫ್ರಿ ಎಸ್‌ಐಟಿಯ ಅಂತಿಮ ವರದಿಯನ್ನು ತಿರಸ್ಕರಿಸಬೇಕು, ಶ್ರೀಯುತ ಮೋದಿಯಿಂದ ಆರಂಭಿಸಿ 59 ಆಪಾದಿತರ ಮೇಲೆ ಚಾರ್ಜ್‌ಶೀಟ್ ಹಾಕಬೇಕು ಎಂದು ಕೇಳಿ ಸಲ್ಲಿಸಿರುವ ಪ್ರತಿಭಟನಾ ಅರ್ಜಿಯನ್ನು ಶ್ರದ್ಧೆಯಿಂದ ಪರಿಶೀಲಿಸಬೇಕಾಗಿದೆ. ನ್ಯಾಯಾಂಗ ನ್ಯಾಯತೀರ್ಮಾನದ ಪ್ರಕ್ರಿಯೆಯನ್ನು ಅಕ್ರಮಗೊಳಿಸದಂತಾಗಲೀ, ವಿಳಂಬಗೊಳಿಸದಂತಾಗಲೀ ಖಾತ್ರಿಪಡಿಸಬೇಕು. ನ್ಯಾಯ ನೀಡಿಕೆಯಲ್ಲಿ ವಿಳಂಬವೆಂದರೆ ನ್ಯಾಯನಿರಾಕರಣೆಯೇ ಎಂಬ ನಾಣ್ಣುಡಿ ಇದ್ದೇ ಇದೆಯಲ್ಲ.

ಇವು ಯಾವುದರ ಪರಿವೆಯೂ ಇಲ್ಲದೆ ಗುಜರಾತದ ಮುಖ್ಯಮಂತ್ರಿ ತನ್ನನ್ನು ಭಾರತದ ಭವಿಷ್ಯದ ಪ್ರಧಾನ ಮಂತಿ ಎಂದು ಬಿಂಬಿಸುವ ಕೆಲಸವನ್ನು ಭರದಿಂದ ನಡೆಸುತ್ತಿದ್ದಾರೆ. ಆದರೆ, ಬಿಹಾರದ ಮುಖ್ಯಮಂತಿಗಳು, ಅವರ ಒಬ್ಬ ಮಹತ್ವದ ಎನ್‌ಡಿಎ ಮಿತ್ರ, ತನ್ನ ಸಂಪೂರ್ಣ ಅಸಮ್ಮತಿಯನ್ನು ನಿಸ್ಸಂದಿಗ್ಧವಾಗಿ ವ್ಯಕ್ತಗೊಳಿಸಿದ್ದಾರೆ. ಹೀಗೆ ಬಿಜೆಪಿ ನೇತೃತ್ವದ ಯಾವುದೇ ಮೈತ್ರಿಕೂಟವನ್ನು ಪೀಡಿಸುವ ಸರಿಹೊಂದಿಸಲಾಗದ ವೈರುದ್ಧ ಮುಂಚೂಣಿಗೆ ಬಂದಿದೆ. ಈ ವೈರುಧ್ಯವೆಂದರೆ: ಮೈತ್ರಿಕೂಟ ಬಹುಮತದ ಸಂಖ್ಯೆ ಪಡೆಯುವಷ್ಟು ಬಲಿಷ್ಟವಾಗಬೇಕಾದರೆ, ಬಿಜೆಪಿ ತನ್ನ ಮೂಲ ಕೋಮುವಾದಿ ಅಜೆಂಡಾವನ್ನು ಬದಿಗೊತ್ತಬೇಕಾಗುತ್ತದೆ. ಇನ್ನೊಂದೆಡೆಯಲ್ಲಿ, ಆ ಕೋಮುವಾದಿ ಅಜೆಂಡಾವನ್ನು ಆರೆಸ್ಸೆಸ್ ನಿರ್ದೇಶನದಂತೆ ಅನುಸರಿಸದಿದ್ದರೆ, ಬಿಜೆಪಿಗೆ ತನ್ನ ಸ್ವಂತ ರಾಜಕೀಯ ನೆಲೆಯನ್ನು ಕ್ರೋಡೀಕರಿಸುವುದಾಗಲೀ, ವಿಸ್ತರಿಸುವುದಾಗಲೀ ಸಾಧ್ಯವಾಗುವುದಿಲ್ಲ.

ಪಿ ಮಹಮ್ಮದ್



'ಉದ್ಧಾರಕ'ನ ನಿರೀಕ್ಷೆಯಲ್ಲಿ

ಆದರೀಗ ಆರೆಸ್ಸೆಸ್/ಬಿಜೆಪಿಗೆ ಹೊಸದೊಂದು ಬೆಂಬಲ ನೆಲೆ ಕಾಣಿಸುತ್ತಿದೆ-ಕಾರ್ಪೊರೇಟ್ ಭಾರತದಲ್ಲಿ. ಇದರಲ್ಲಿ ಆಶ್ಚರ್ಯವೇನಿಲ್ಲ. ತೀವ್ರ ಆರ್ಥಿಕ ಬಿಕ್ಕಟ್ಟುಗಳ ಅವಧಿಗಳಲ್ಲಿ ಗರಿಷ್ಟ ಲಾಭ ಮಾಡಿಕೊಳ್ಳುವ ಕಾರ್ಪೊರೇಟ್ ಜಗತ್ತಿನ ಕೂಗು ತಾರಕ-ಕ್ಕೆ ಏರುತ್ತದೆ. ಅವರಿಗೆ ತಮ್ಮ ಹಿತಗಳ ಈಡೇರಿಕೆಗೆ ಅನುಕೂಲ ಮಾಡಿಕೊಡುವ ಕ್ರಮಗಳನ್ನು ತರುವಷ್ಟು 'ನಿರ್ಣಾಯಕ' ಸಾಮರ್ಥ್ಯವಿರುವ ಒಬ್ಬ 'ಬಲಿಷ್ಟ' ನಾಯಕ ಬೇಕು-ಅದಕ್ಕೆ ಆತ ಪ್ರಜಾಪ್ರಭುತ್ವ, ಮಾನವ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ಬಲಿಗೊಟ್ಟರೂ ಸರಿಯೇ. ಪ್ರಖ್ಯಾತ ಇತಿಹಾಸಕಾರ ಎರಿಕ್ ಹೊಬ್ಸ್‌ಬಾವ್ಮ್ ತನ್ನ 'ಏಜ್ ಆಫ್ ಎಕ್ಸ್ಟ್ರೀಮ್ಸ್'(ಅತಿಗಳ ಯುಗ)ದಲ್ಲಿ ದೊಡ್ಡ ವ್ಯವಹಾರಸ್ಥರ

ಪುಟ 10 ಕ್ಕೆ

ಪರ್ಯಾಯವನ್ನು ನಿರೀಕ್ಷಿಸುತ್ತಿರುವ ಬೈಂದೂರು ಜನತೆ

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿರುವ, ಶಿವಮೊಗ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿನ ಪರಿಸ್ಥಿತಿ ಏನು. ಒಂದು ಕಾಲದಲ್ಲಿ ಪ್ರಭಾವಶಾಲಿ ಭೂ ಸುಧಾರಣಾ ಚಳುವಳಿಯನ್ನು ಕಂಡ ಈ ಪ್ರದೇಶದಲ್ಲಿ ಈಗಿನ ರಾಜಕೀಯ ಬೆಳವಣಿಗೆಗಳೇನು ? ಓದಿ.

ಇದೀಗ ಕರಾವಳಿ ಜಿಲ್ಲೆಯಲ್ಲಿ ಧಾರ್ಮಿಕ ಆಚರಣೆಗಳು, ರಥೋತ್ಸವ, ನೇಮೋತ್ಸವ, ಕೋಲ, ನಾಗಮಂಡಲ, 'ಪ್ರತಿಷ್ಠಾಪನೆ'ಯ ಆಚರಣೆ, ಪ್ರತಿದಿನವೆಂಬಂತೆ ನಡೆಯುತ್ತಲೇ ಇವೆ. ಉಡುಪಿ ಜಿಲ್ಲೆಯ ಉತ್ತರದಲ್ಲಿರುವ ಬೈಂದೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಶ್ರೀ ಕೊಲ್ಲೂರು ಮೂಕಾಂಬಿಕಾ ದೇವಳದ ಉತ್ಸವ ಮಾರ್ಚ್ 30 ರಿಂದ ಏಪ್ರಿಲ್ 4ರ ತನಕ ವಿಜೃಂಭಣೆಯಿಂದ ನಡೆಯಿತು. ನೆರೆಯ ರಾಜ್ಯ ಕೇರಳ, ತಮಿಳುನಾಡು ಸೇರಿದಂತೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತ ಜನಸಾಗರ ಬಂದು ಸೇರಿತ್ತು.

ಉಡುಪಿ ಜಿಲ್ಲೆಯ ಉತ್ತರ ಗಡಿಗೆ ತಾಗಿ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ, ಪಶ್ಚಿಮದಲ್ಲಿ ಕಡಲತೀರ, ಪೂರ್ವದಲ್ಲಿ ಶಿವಮೊಗ್ಗದ ಘಟ್ಟಪ್ರದೇಶ, ದಕ್ಷಿಣದಲ್ಲಿ ಕುಂದಾಪುರ ತಾಲೂಕಿನ ಹಾಲಾಡಿ ಮತ್ತು ವರಾಹಿ ನದಿಗಳ ನಡುವೆ ಬೈಂದೂರು ವಿಧಾನಸಭಾ ಕ್ಷೇತ್ರ ಹರಡಿಕೊಂಡಿದೆ. ಹೆಸರಾಂತ ಪ್ರವಾಸಿ ತಾಣ ಕಡಲತೀರ ಮರವಂತೆ, ಗಂಗೊಳ್ಳಿ ಮೀನುಗಾರಿಕಾ ಬಂದರು ಮೊದಲಾದ ಪ್ರದೇಶಗಳೂ ಬೈಂದೂರು ವ್ಯಾಪ್ತಿಗೆ ಬರುತ್ತವೆ.

ಇದೀಗ ಬೈಂದೂರು ಪ್ರತ್ಯೇಕ ತಾಲೂಕು ರಚನೆಗೆ ಸರಕಾರದ ಘೋಷಣೆಯಾಗಿದ್ದರೂ ಇದರ ಆಡಳಿತ ವ್ಯಾಪ್ತಿ ಬಗ್ಗೆ ಇನ್ನೂ ಚರ್ಚೆ ಮುಂದುವರಿಯುತ್ತಿದೆ. ಬೈಂದೂರು ವಿಧಾನಸಭಾ ಕ್ಷೇತ್ರ ಉಡುಪಿ ಜಿಲ್ಲೆಯಲ್ಲಿದ್ದರೂ ಇದು ಶಿವಮೊಗ್ಗ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೊಳಪಟ್ಟಿದೆ.

ಕುಂದಾಪುರ ತಾಲೂಕಿನಲ್ಲಿರುವ 14 ಹಂಚು ಕಾರ್ಖಾನೆಗಳ ಪೈಕಿ 9 ಕಾರ್ಖಾನೆಗಳು ಬೈಂದೂರು ಕ್ಷೇತ್ರದಲ್ಲಿವೆ. ಬಹುತೇಕ ಕಾರ್ಮಿಕರ ವಾಸ ಬೈಂದೂರು ಕ್ಷೇತ್ರದಲ್ಲಿದ್ದರೆ, ಅಭಿವೃದ್ಧಿ ಹೊಂದಿರುವ ಕುಂದಾಪುರ ನಗರ ವ್ಯಾಪ್ತಿಯಲ್ಲಿ ಮಾಲಿಕರ ವಾಸವಿದೆ. ಹಂಚು, ಗೇರು ಸಂಸ್ಕರಣೆ, ಇಟ್ಟಿಗೆ ಕಾರ್ಖಾನೆಗಳೂ ಇಲ್ಲಿವೆ. ಬಾಕ್ಸೈಟ್ ಅದಿರು ಗಣಿಗಾರಿಕೆ ಬೈಂದೂರು ಕ್ಷೇತ್ರದಲ್ಲಿದೆ. ಆದರೆ ಕಾರ್ಮಿಕರ ಸಂಖ್ಯೆ ಕಡಿಮೆ ಇದೆ. ಇಲ್ಲಿನ ಆರ್ಥಿಕ ಚಟುವಟಿಕೆಯ ಇನ್ನೊಂದು ಮೂಲ ಮೀನುಗಾರಿಕೆ. ಗಂಗೊಳ್ಳಿ, ಕೊಡೇರಿ ಸಮುದ್ರ ತೀರದಲ್ಲಿ ಮೀನುಗಾರಿಕೆ ಬೋಟುಗಳ ಕಲರವ ಕಾಣಿಸುತ್ತದೆ. ಸುಮಾರು 1,000 ಕುಟುಂಬಗಳ ಜೀವನ ಮೀನುಗಾರಿಕೆಯ ಮೇಲೆ ಅವಲಂಭಿತವಾಗಿದೆ.

ಕೊಡಚಾದ್ರಿ ಬೆಟ್ಟದ ಕಾಡು ಮಗ್ಗಲಿನಲ್ಲಿ ರಬ್ಬರ್, ಲವಂಚ, ಸಿಸಿರಿಲ ಇತ್ಯಾದಿ ತೋಟಗಳು ಇವೆ. ಇಲ್ಲಿಗೆ ವಲಸೆ ಬಂದ ಕೇರಳದ ಮಲಯಾಳಿಗಳು ಕೃಷಿ ಕ್ಷೇತ್ರದಲ್ಲಿ ಶ್ರಮವಹಿಸಿ ದುಡಿದು ಸಂಪತ್ತುಗಳಿಸಿರುವುದನ್ನು ಕಂಡ ಸ್ಥಳೀಯ ನಾಗರಿಕರೂ ರಬ್ಬರ್ ಬೆಳೆಗೆ ಗಮನ ನೀಡುತ್ತಿದ್ದಾರೆ. ತೆಂಗು, ಅಡಿಕೆ, ಭತ್ತ, ಗೇರು ತೋಟ ಮೊದಲಾದ ಕೃಷಿಯಲ್ಲಿ ಮೊದಲಿನಿಂದಲೂ ಸಾಕಷ್ಟು ಜನರು ತೊಡಗಿಸಿಕೊಂಡಿದ್ದಾರೆ. ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ತೋರುತ್ತಿದೆ. ಸುಮಾರು 10,000ಕ್ಕೂ ಹೆಚ್ಚು ಕಟ್ಟಡ ಕಾರ್ಮಿಕರು ಬೈಂದೂರಿನಲ್ಲಿ ನಿರ್ಮಾಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ.


ನಿವೇಶನ ಹೋರಾಟಕ್ಕೆ ನೆರೆದ ಜನ

ಬೈಂದೂರು ಕ್ಷೇತ್ರದಲ್ಲಿ 1,95,000 ಮತದಾರರಿದ್ದಾರೆ. ಇದರಲ್ಲಿ ಸಿಪಿಐ(ಎಂ) ಮುಖಂಡರು ನೇತೃತ್ವ ನೀಡುತ್ತಿರುವ ಕಾರ್ಮಿಕರ ಸಂಘಟನೆಯಲ್ಲಿ ಸದಸ್ಯರಾಗಿರುವ ದುಡಿಯುವ ಜನ ಸುಮಾರು 6,000 ಎಂದು ಅಂದಾಜಿಸಲಾಗಿದೆ. ಹಂಚು, ಕಟ್ಟಡ ನಿರ್ಮಾಣ, ಬೀಡಿ, ಗೇರುಬೀಜ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕೆಲಸಗಾರರು, ಮನೆ ನಿವೇಶನರಹಿತರು, ಅಂಗನವಾಡಿ, ಅಕ್ಷರದಾಸೋಹ, ಆಶಾ, ಗ್ರಾಮ ಪಂಚಾಯತ್ ನೌಕರರು ಈ ಸಂಘಟನೆಗಳ ನೇತೃತ್ವದಲ್ಲಿ ಸಂಘಟಿತರಾಗಿದ್ದಾರೆ. ಅಸಂಘಟಿತ ವಲಯದ ಈ ಕಾರ್ಮಿಕ-ನೌಕರರ ಎಲ್ಲಾ ಹೋರಾಟಗಳಿಗೆ ಸಿಪಿಐ(ಎಂ) ನಿರಂತರ ಬೆಂಬಲ ನೀಡುತ್ತಾ ಬಂದಿದೆ.

ಬಾಲಕೃಷ್ಣ ಶೆಟ್ಟಿ

ರಾಜಕೀಯ ಪರಿಸ್ಥಿತಿ :

1957ರಲ್ಲಿ ರಚನೆಗೊಂಡ ಬೈಂದೂರು ವಿಧಾನಸಭಾ ಕ್ಷೇತ್ರ ಬಹುತೇಕ ಅವಧಿಯಲ್ಲಿ ಕಾಂಗ್ರೆಸ್‌ನ್ನು ಚುನಾಯಿಸಿದೆ. ಪ್ರತಿಸ್ಪರ್ಧಿಯಾಗಿ ಪಿ.ಎಸ್.ಪಿ., ಜನತಾ ಪಕ್ಷ, ಜನತಾದಳ ಮತ್ತು ಬಿ.ಜೆ.ಪಿ. ಪಕ್ಷಗಳು ವಿವಿಧ ಸಂದರ್ಭದಲ್ಲಿ ಪೈಪೋಟಿ ನೀಡಿದ್ದವು. ಕಳೆದ ಚುನಾವಣೆಯಲ್ಲಿ ಗೆದ್ದ ಬಿ.ಜೆ.ಪಿ. ಪಕ್ಷದ ಲಕ್ಷ್ಮೀನಾರಾಯಣ ಶಾಸಕರಾಗಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಯಾವುದೇ ಪ್ರಗತಿ ಸಾಧಿಸದೆ ಜನಪ್ರಿಯತೆ ಕಳೆದುಕೊಂಡಿದ್ದಾರೆ. ಇತ್ತೀಚೆಗೆ ಕೆ.ಜೆ.ಪಿ.ಯೊಂದಿಗೂ ಗುರುತಿಸಿಕೊಂಡಿರುವುದರಿಂದ ಈ ಬಾರಿ ಬಿ.ಜೆ.ಪಿ.ಅಭ್ಯರ್ಥಿಯಾಗಿ ಎರಡು ತಿಂಗಳವರೆಗೂ ಕಾಂಗ್ರೆಸ್‌ನಲ್ಲಿದ್ದ ಬಿ.ಎಂ. ಸುಕುಮಾರ ಶೆಟ್ಟಿ ಪಕ್ಷಾಂತರ ಮಾಡಿ ಬಿಜೆಪಿಯ ಸೀಟು ಗಳಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಮಗ ಬಿಜೆಪಿಯಿಂದ ಅವಮಾನಿತಗೊಂಡಿರುವ ರಾಘವೇಂದ್ರ ಇಲ್ಲಿನ ಸಂಸತ್ ಸದಸ್ಯ.

1999 ಮತ್ತು 2004 ರ ಅವಧಿಯಲ್ಲಿ ಶಾಸಕರಾಗಿದ್ದು, 2008ರಲ್ಲಿ ಸೋಲನ್ನು ಅನುಭವಿಸಿದ್ದ ಕಾಂಗ್ರೆಸ್ ಪಕ್ಷದ ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ ಇದೀಗ ಮತ್ತೊಮ್ಮೆ ಸ್ಪರ್ಧಾ ಕಣಕ್ಕಿಳಿಯಲಿದ್ದಾರೆ. ಬೆಂಗಳೂರಿನಲ್ಲಿ ಹೋಟೆಲ್ ಉದ್ಯಮ ನಡೆಸಿ ಗ್ರಾಹಕರಿಂದ ದುಬಾರಿ ಬೆಲೆ ವಸೂಲಿ ಮಾಡಿ, ಕಾರ್ಮಿಕರಿಗೆ ಸೂಕ್ತ ವೇತನ ನೀಡದೆ ಗಳಿಸಿದ ಲಾಭದ ಹಣ, ಸಂಪತ್ತು ಹೊಂದಿದ್ದಾರೆ. ಉಡುಪಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ.

1996ರಿಂದ 2001ರ ಅವಧಿಯಲ್ಲಿ ಕುಂದಾಪುರ ಪುರಸಭೆಯಲ್ಲಿ ಸಿಪಿಐ(ಎಂ) ಅಧಿಕಾರ ಚುಕ್ಕಾಣಿ ಹಿಡಿದ ಸಂದರ್ಭದಲ್ಲಿ ಆಡಳಿತ ಜನ ಮೆಚ್ಚುಗೆ ಪಡೆದಿತ್ತು. ನಮ್ಮ ಪ್ರಮುಖ ಅಭ್ಯರ್ಥಿಗಳನ್ನು ಕಳೆದ ಪುರಸಭಾ ಚುನಾವಣೆಯಲ್ಲಿ ಸೋಲಿಸಲು ಟೊಂಕ ಕಟ್ಟಿ ನಿಂತಿದ್ದ ಕಾಂಗ್ರೆಸ್‌ನ ಗೋಪಾಲ ಪೂಜಾರಿಯವರು ಈ ಭಾಗದಲ್ಲಿ ಸಿಪಿಐ(ಎಂ) ಪಕ್ಷ ಬೆಳೆಯದಂತೆ ಅಡ್ಡಕಾಲು ಹಾಕಿದ್ದ ಭೂಪರು.

ಕಾಗೋಡು ರೈತ ಸತ್ಯಾಗ್ರಹದ ಬೆನ್ನಲ್ಲೇ ಶಾಂತವೇರಿ ಗೋಪಾಲ ಗೌಡರ ನೇತೃತ್ವದ ಸೋಷಿಯಲಿಸ್ಟ್ ಪಕ್ಷ ಉಚ್ಛಾಯ ಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ಬೈಂದೂರು ಕ್ಷೇತ್ರದಿಂದ ಪಿ.ಎಸ್.ಪಿ. ಅಭ್ಯರ್ಥಿ ಹಲ್ಸನಾಡು ಸುಬ್ಬರಾವ್ 1976 ರ ಅವಧಿಯಲ್ಲಿ ಬೈಂದೂರು ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಕಾಗೋಡು ಸತ್ಯಾಗ್ರಹದಲ್ಲಿ ಪ್ರಮುಖ ಪಾತ್ರ ವಹಿಸಿದ ಈಡಿಗ (ಉಡುಪಿ ಜಿಲ್ಲೆಯಲ್ಲಿ ಬಿಲ್ಲವ, ಪೂಜಾರಿ) ಸಮುದಾಯಕ್ಕೆ ಸೇರಿದವರು ಬೈಂದೂರು ಕ್ಷೇತ್ರದಲ್ಲಿ ಗಣನೀಯ ಸಂಖ್ಯೆಯಲ್ಲಿದ್ದಾರೆ. ಅವರ ಬೆಂಬಲ ಅಂದಿನ ಪಿಎಸ್‌ಪಿಗಿತ್ತು.

ಗಂಗೊಳ್ಳಿ ಎಂಬ ಕೋಮು ಸೂಕ್ಷ್ಮ ಪ್ರದೇಶ:

ಮೀನುಗಾರಿಕಾ ಬಂದರು ಎಂದೇ ಹೆಸರುವಾಸಿಯಾದ ಗಂಗೊಳ್ಳಿ ಪಂಚನದಿಗಳು ಸೇರುವ ಸ್ಥಳ. ಮುಸ್ಲಿಂ ಅಲ್ಪಸಂಖ್ಯಾತರು ಸಾಕಷ್ಟು ಸಂಖ್ಯೆಯಲ್ಲಿರುವ ಇಲ್ಲಿ ಸಂಘ ಪರಿವಾರ ಸಕ್ರಿಯವಾಗಿದೆ. ಮೀನುಗಾರರ ಕುಟುಂಬಗಳ ನಡುವೆ ಹಿಂದುತ್ವದ ಹೆಸರಲ್ಲಿ ತನ್ನ ಪ್ರಭಾವ ಬೀರಿದೆ. ಆದ್ದರಿಂದಲೇ ಆಗಾಗ ಕೋಮು ಗಲಭೆಗಳು ಸಂಭವಿಸುತ್ತವೆ.

ಈ ಲೇಖನ ಬರೆಯುವ ಸಂದರ್ಭದಲ್ಲಿ ಇಲ್ಲೊಂದು ಕೋಮು ಭಾವನೆ ಕೆರಳಿಸುವ ಘಟನೆ ನಡೆಯುತ್ತಿದೆ. ಮಿಸ್ಬಾ ಉಲ್ ಉಲಾಮ್ ಎಂಬ ಸಂಸ್ಥೆ ಮಸೀದಿ ಕಟ್ಟಲು ಸುಮಾರು 28 ತಿಂಗಳ ಹಿಂದೆಯೇ ಅರ್ಜಿ ಸಲ್ಲಿಸಿತ್ತು. ಆದರೆ ಬಿಜೆಪಿ ನಿಯಂತ್ರಿತ ಗಂಗೊಳ್ಳಿ ಗ್ರಾಮ ಪಂಚಾಯತ್ ಯಾವುದೇ ಉತ್ತರ ನೀಡಲಿಲ್ಲ. ಆದ್ದರಿಂದ ಆ ಸಂಸ್ಥೆಯು ಉಡುಪಿ ಜಿಲ್ಲಾಧಿಕಾರಿ ಹಾಗೂ ಕುಂದಾಪುರ ತಾಲೂಕು ಪಂಚಾಯತ್‌ನಿಂದ ಮಾರ್ಗದರ್ಶನ ಪಡೆದು ಮಸೀದಿ ಕಟ್ಟಡದ ಕಾಮಗಾರಿ ಕಾರ್ಯ ಮುಂದುವರಿಸುತ್ತಿದೆ.

ಈಗ ಹಿಂದೂ ಜಾಗರಣಾ ವೇದಿಕೆ ಅದಕ್ಕೆ ತಡೆ ಒಡ್ಡುತ್ತಿದೆ. ಚುನಾವಣೆಗೆ ಮೊದಲು ಕೋಮು ಗಲಭೆ ಸೃಷ್ಟಿಸುವ ಹುನ್ನಾರ ಇದರಲ್ಲಿ ಅಡಗಿದೆ.

ಪ್ರಭಾಕರ ಭಟ್ಟ ಭೇಟಿ :

ಈ ನಡುವೆ ಬೈಂದೂರು ಕ್ಷೇತ್ರದ ಚುನಾವಣೆಯ ನೆಪದಲ್ಲಿ ಸಂಘ ಪರಿವಾರದ ಪ್ರಮುಖ ಕಲ್ಲಡ್ಕ ಪ್ರಭಾಕರ ಭಟ್ಟ ಇಲ್ಲಿ ಬಿಜೆಪಿ ಕಾರ್ಯಕರ್ತರ ಸಭೆ ನಡೆಸಿದ್ದಾರೆ. ಮಾಧ್ಯಮ ಪ್ರತಿನಿಧಿಗಳಿಗೆ ಆಹ್ವಾನ ನೀಡಿದ್ದರೂ ಕೊನೆ ಗಳಿಗೆಯಲ್ಲಿ ಒಳಕ್ಕೆ ಬಿಡಲಿಲ್ಲ. ಇದೆಲ್ಲವನ್ನು ಗಮನಿಸಿದರೆ ಚುನಾವಣಾ ಪೂರ್ವ ಕೋಮು ಗಲಭೆ ಹುಟ್ಟು ಹಾಕಿದರೆ ಆಶ್ಚರ್ಯವೇನಿಲ್ಲ. ಇದೇ ವ್ಯಕ್ತಿಯ ನೇತೃತ್ವದಲ್ಲಿ ಸಂಘ ಪರಿವಾರವು ದ.ಕ. ಜಿಲ್ಲೆಯನ್ನು ಗಲಭೆಗ್ರಸ್ತಗೊಳಿಸಿರುವುದು ಬಹಿರಂಗ ವಿಚಾರ.

ಧಾರ್ಮಿಕ ಅಲ್ಪಸಂಖ್ಯಾತರಾದ ಮುಸ್ಲಿಂ ಮತ್ತು ಕ್ರೈಸ್ತ ಸಮುದಾಯಗಳ ಮೇಲೆ ಅವರ ಪ್ರಾರ್ಥನಾ ಸ್ಥಳಗಳ ಮೇಲೆ ಹಿಂದುತ್ವ ಶಕ್ತಿಗಳು ದಾಳಿಮಾಡುವ ಪ್ರವೃತ್ತಿಯನ್ನು ಸಿಪಿಐ(ಎಂ) ನಿರಂತರವಾಗಿ ಖಂಡಿಸುತ್ತಾ ಬಂದಿದೆ ಮಾತ್ರವಲ್ಲ ಕೋಮುಗಲಭೆಗಳನ್ನು ತಡೆಗಟ್ಟಲು ಶ್ರಮಿಸಿದೆ.

ಭೂ ಸುಧಾರಣೆಗಾಗಿ ಹೋರಾಟ:

ಬೈಂದೂರು ಕ್ಷೇತ್ರದ ಕೆಲವು ಗ್ರಾಮಗಳ

ಪುಟ 10 ಕ್ಕೆ

ದಕ್ಷಿಣ ಕನ್ನಡ ಜಿಲ್ಲೆ :

ಗರಿಗೆದರಿದ ಕೆಂಬಾವುಟ

ವರದಿ:
ವಾಸುದೇವ ಉಚ್ಚಿಲ

ಪ್ರತಿ ಚುನಾವಣಾ ಸಂದರ್ಭಗಳಲ್ಲಿ ಹೆಚ್ಚೆಚ್ಚು ವಿಧಾನ ಸಭಾ ಕ್ಷೇತ್ರಗಳಿಗೆ ಸಿಪಿಐ(ಎಂ) ಪಕ್ಷ ಸ್ಪರ್ಧಿಸುತ್ತಿರುವುದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚೆಚ್ಚು ಜನ ಸಿಪಿಐ(ಎಂ) ಕಡೆಗೆ ಆಕರ್ಷಿತರಾಗುವುದರ ಗುರುತಾಗಿದೆ. ಹತ್ತು ವರ್ಷಗಳ ಹಿಂದಿನವರೆಗೂ ಉಳ್ಳಾಲ (ಈಗಿನ 204 ಮಂಗಳೂರು) ವಿಧಾನ ಸಭಾ ಕ್ಷೇತ್ರವೊಂದಕ್ಕೆ ಮಾತ್ರವೇ ಸಿಪಿಐ(ಎಂ) ಪಕ್ಷ ಸ್ಪರ್ಧಿಸುತ್ತಿತ್ತು. ಉಳ್ಳಾಲದಲ್ಲಿ 1962 ರಲ್ಲಿ ಅಂದಿನ ಅವಿಭಜಿತ ಕಮ್ಯೂನಿಸ್ಟ್ ಪಕ್ಷದಿಂದ ಎ.ಕೃಷ್ಣ ಶೆಟ್ಟರೂ, 1983 ರಲ್ಲಿ ಸಿಪಿಐ(ಎಂ) ಪಕ್ಷದಿಂದ ಪಿ.ರಾಮಚಂದ್ರ ರಾಯರೂ ಚುನಾವಣೆಯಲ್ಲಿ ಗೆದ್ದು, ಶಾಸಕರಾಗಿ ಜನಾನುರಾಗಿಗಳಾಗಿ ಕಾರ್ಯನಿರ್ವಹಿಸಿದ್ದರು.

ಆ ಬಳಿಕದ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಪಕ್ಷ ಉಳ್ಳಾಲದಲ್ಲಿ ಗೆಲ್ಲಲಿಲ್ಲವಾದರೂ, ಜನತೆಯ ಮಧ್ಯೆ ತನ್ನ ಬೇರುಗಳನ್ನು ಉಳಿಸಿಕೊಂಡು ಬಂದಿದೆ. ಮಂಗಳೂರು ನಗರದಲ್ಲಿ ಕಾರ್ಮಿಕ ಸಂಘಗಳ ಮೂಲಕ ಅಸ್ತಿತ್ವಕ್ಕೆ ಬಂದಿದ್ದ ಪಕ್ಷ, ಇತ್ತೀಚೆಗಿನ ವರ್ಷಗಳಲ್ಲಿ ನಗರಾದ್ಯಂತ ವಿಸ್ತರಣೆ ಹೊಂದಿರುತ್ತದೆ. ಐದು ವರ್ಷಗಳ ಹಿಂದೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮಂಗಳೂರು ನಗರ ದಕ್ಷಿಣದಿಂದ ಸಿಪಿಐ(ಎಂ) ಪಕ್ಷ ಸ್ಪರ್ಧಿಸಿದ್ದು, ಇದೀಗ ಎರಡನೇ ಬಾರಿಗೆ ತನ್ನ ಅಭ್ಯರ್ಥಿಯನ್ನು ಸ್ಪರ್ಧೆಗೆ ಇಳಿಸಿದೆ.

ಬೆಳ್ತಂಗಡಿಯಲ್ಲಿ ಸಿಪಿಐ(ಎಂ) ನಾಮಪತ್ರ ಸಲ್ಲಿಕೆ :

ಬೆಳ್ತಂಗಡಿಯಲ್ಲಿ ಕಮ್ಯೂನಿಸ್ಟ್ ಚಳುವಳಿಗೆ ದೀರ್ಘಕಾಲದ ಇತಿಹಾಸವಿದೆ. ಕೆ.ವಿ.ರಾವ್ ಎಳಚಿತ್ತಾಯರು ರೈತ ಸಂಘಕ್ಕೆ ನೇತೃತ್ವ ಕೊಟ್ಟು ಭೂ ಸುಧಾರಣಾ ಚಳುವಳಿ ನಡೆಸಿದ್ದರು. 1962 ರಲ್ಲಿ ಬೆಳ್ತಂಗಡಿಯಿಂದ ವಿಧಾನಸಭೆಗೆ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ಇತ್ತೀಚೆಗಿನ ವರ್ಷಗಳಲ್ಲಿ ಎಸ್‌ಎಫ್‌ಐ, ಡಿವೈಎಫ್‌ಐ ಹಾಗೂ ವಿವಿಧ ಕಾರ್ಮಿಕ ಸಂಘಟನೆಗಳಿಂದಾಗಿ ಚಳುವಳಿ ವಿಸ್ತರಿಸುತ್ತಿದೆ.

ಸಿಪಿಐ(ಎಂ) ಬೆಳ್ತಂಗಡಿಯಲ್ಲಿ 50 ವರ್ಷಗಳ ಬಳಿಕ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದೆ. ವಿದ್ಯಾರ್ಥಿ ಚಳುವಳಿಯಿಂದ ಬೆಳೆದು ಬಂದು ಇವತ್ತು ಬೆಳ್ತಂಗಡಿ ತಾಲೂಕಿನಲ್ಲಿ ಸಿಪಿಐ(ಎಂ) ಮುಖಂಡರಾಗಿರುವ ಬಿ.ಎಂ.ಭಟ್, ಯುವಜನ ಸಂಘಟನೆ ಹಾಗೂ ಕಾರ್ಮಿಕ ಸಂಘಟನೆಗಳನ್ನು ಬೆಳ್ತಂಗಡಿ ತಾಲೂಕುಗಳಲ್ಲಿ ಕಟ್ಟುವುದರಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ. ದಕ್ಷಿಣ ಕನ್ನಡ ಸಿಪಿಐ(ಎಂ) ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿರುತ್ತಾರೆ. ಬೆಳ್ತಂಗಡಿ ವಿಧಾನಸಭಾ ಕ್ಷೇತ್ರಕ್ಕೆ ಬಿ.ಎಂ.ಭಟ್ ಅವರನ್ನು ಪಕ್ಷವು ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ.

ಏಪ್ರಿಲ್ 15 ರಂದು ಬಿ.ಎಂ.ಭಟ್ ಅವರು ಸಾವಿರಕ್ಕೂ ಮಿಕ್ಕಿ ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಸಾಗಿ ಬೆಳ್ತಂಗಡಿ ಚುನಾವಣಾಧಿಕಾರಿಗಳಿಗೆ ನಾಮಪತ್ರ ಸಲ್ಲಿಸಿದರು. ಮೆರವಣಿಗೆ ಬೆಳ್ತಂಗಡಿ ಮೂರುಕೈ ರಸ್ತೆಯಿಂದ ಸಂತೆಕಟ್ಟೆ, ಬಸ್ಸುನಿಲ್ದಾಣದಿಂದಲಾಗಿ ಸಿಪಿಐ(ಎಂ) ಕಚೇರಿ ಹಿಂಭಾಗದ ಬಂಗೇರಗುಪ್ಪೆ ಮೈದಾನದಲ್ಲಿ ಸಭೆಯಾಗಿ ಸಮಾವೇಶಗೊಂಡಿತು. ಸಭೆಯಲ್ಲಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ, ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವರಲಕ್ಷ್ಮಿ, ಪಕ್ಷದ ಮುಖಂಡರಾದ ಸುನಂದ, ಮುನೀರ್ ಕಾಟಿಪಳ್ಳ, ಅಭ್ಯರ್ಥಿ ಬಿ.ಎಂ.ಭಟ್ ಮೊದಲಾದವರು ಮಾತನಾಡಿದರು. ಸಿಪಿಐ(ಎಂ) ಬೆಳ್ತಂಗಡಿ ತಾಲೂಕು ಕಾರ್ಯದರ್ಶಿ ಶಿವ ಕುಮಾರ್, ಜಿಲ್ಲಾ ಸಮಿತಿ ಸದಸ್ಯ ಎಸ್.ಎಂ.ಹರಿದಾಸ್ ಹಾಗೂ ಪಕ್ಷದ ವಲಯ ಸಮಿತಿ ಸದಸ್ಯರು ಮೆರವಣಿಗೆಗೆ ನೇತೃತ್ವ ನೀಡಿದರು.



ಉಳ್ಳಾಲ (204ನೇ ಮಂಗಳೂರು) ದಲ್ಲಿ ಸಿಪಿಐ(ಎಂ) ಸ್ಪರ್ಧಾ ಕಣದಲ್ಲಿ :

1957ನೇ ಇಸವಿಯಿಂದಲೂ ಉಳ್ಳಾಲದಲ್ಲಿ ಕಮ್ಯೂನಿಸ್ಟ್ ಪಕ್ಷ ಸ್ಪರ್ಧಿಸುತ್ತಾ ಬಂದಿದೆ. ಆರಂಭದಲ್ಲಿ ಈ ಕ್ಷೇತ್ರಕ್ಕೆ ಮಂಗಳೂರು ಎರಡು ಎಂಬ ಹೆಸರಿದ್ದು, ಮಧ್ಯಾವಧಿಯಲ್ಲಿ ಉಳ್ಳಾಲ ಕ್ಷೇತ್ರವೆಂದು ಜನಜನಿತವಾಯಿತು. ಕಳೆದ ವಿಧಾನಸಭಾ ಚುನಾವಣೆ ಸಮಯದಲ್ಲಾದ ಕ್ಷೇತ್ರ ಮರುವಿಂಗಡನೆಯಿಂದ ಮತ್ತೆ ಮಂಗಳೂರು ಎಂಬ ಹೆಸರು ಪಡೆದಿರುವ ಈ ಕ್ಷೇತ್ರದಲ್ಲಿ ಈಗ ಅರ್ಧಾಂಶ ಗ್ರಾಮಗಳು ಬಂಟ್ವಾಳ ತಾಲೂಕಿಗೆ ಸೇರಿವೆ; ಮೊದಲು ಆ ಕ್ಷೇತ್ರದ ಭಾಗವಾಗಿದ್ದ ಮಂಗಳೂರು ನಗರದ ಕೆಲವು ವಾರ್ಡುಗಳು ಕೈಬಿಟ್ಟು ಹೋಗಿವೆ. ಕ್ಷೇತ್ರದ ಗ್ರಾಮ ಬದಲಾವಣೆಗಳು ವಿಧಾನಸಭಾ ಕ್ಷೇತ್ರದಲ್ಲಿನ ಸಿಪಿಐ(ಎಂ) ಬೆಂಬಲಿಗರ ಸಂಖ್ಯಾಬಲದ ಮೇಲೆಯೂ ಪರಿಣಾಮ ಬೀರಿದೆ. ಆದಾಗ್ಯೂ ಪಾರಂಪರಿಕವಾಗಿ ಪಕ್ಷದ ಬೆಂಬಲಿಗರ ಸಂಖ್ಯಾಬಾಹುಳ್ಯವುಳ್ಳ ಪ್ರದೇಶ ಉಳ್ಳಾಲವಾಗಿದೆ.

ಉಳ್ಳಾಲ (204ನೇ ಮಂಗಳೂರು) ವಿಧಾನಸಭಾ ಕ್ಷೇತ್ರದ ಬಂಟ್ವಾಳ ತಾಲೂಕಿನ 13 ಗ್ರಾಮಗಳಿಗೆ ಸಂಬಂಧಿಸಿದಂತೆ ಪಕ್ಷದ ಬಂಟ್ವಾಳ ತಾಲೂಕು ಸಮಿತಿ ಮತ್ತು ಮಂಗಳೂರು ತಾಲೂಕಿನ ಗ್ರಾಮಗಳಿಗೆ ಸಂಬಂಧಿಸಿದಂತೆ ಪಕ್ಷದ ಉಳ್ಳಾಲ ವಲಯ ಸಮಿತಿ ಜಂಟಿಯಾಗಿ ಕ್ಷೇತ್ರ ಚುನಾವಣಾ ಸಮಿತಿಯನ್ನು ಹಾಗೂ ಏರಿಯಾ ಸಮಿತಿಗಳನ್ನು ರಚಿಸಲಾಗಿದೆ. ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿ ಕಾರ್ಯದರ್ಶಿಯಾಗಿರುವ ಕೃಷ್ಣಪ್ಪ ಸಾಲಿಯಾನ್ 204ನೇ ಮಂಗಳೂರು ವಿಧಾನ ಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿಯಾಗಿರುತ್ತಾರೆ. ಯುವಜನ ಸಂಘಟನೆಯ ದ.ಕ.ಜಿಲ್ಲಾ ಸಮಿತಿಯಲ್ಲಿ ಹಲವಾರು ವರ್ಷ ಕ್ರಿಯಾಶೀಲರಾಗಿದ್ದ ಕೃಷ್ಣಪ್ಪ ಸಾಲಿಯಾನ್, ಕಳೆದ 30 ವರ್ಷಗಳಲ್ಲಿ ಉಳ್ಳಾಲ ವಲಯದ ಸಿಪಿಐ(ಎಂ)ನ ಪ್ರಮುಖ ಕಾರ್ಯಕರ್ತರಾಗಿ ದುಡಿಯುತ್ತಿದ್ದು, ಸದ್ಯ ವಲಯ ಸಮಿತಿ ಕಾರ್ಯದರ್ಶಿ ಹಾಗೂ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿದ್ದಾರೆ. ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷರೂ ಆಗಿದ್ದಾರೆ.

ಏಪ್ರಿಲ್ 12 ರಂದು ಮಂಗಳೂರಿನಲ್ಲಿ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ಪಕ್ಷದ ಅಭ್ಯರ್ಥಿಯಾಗಿ ಕೃಷ್ಣಪ್ಪ ಸಾಲಿಯಾನ್ ನಾಮಪತ್ರ ಸಲ್ಲಿಸಿದರು. ಆರ್‌ಟಿಒ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆಯಲ್ಲಿ ಸಾಗಿ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್.ಶ್ರೀಯಾನ್, ಪಕ್ಷದ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ಯು.ಬಿ.ಲೋಕಯ್ಯ, ಕೆ.ಯಾದವ ಶೆಟ್ಟಿ, ಜಿಲ್ಲಾ ಸಮಿತಿ ಸದಸ್ಯರಾದ ಪದ್ಮಾವತಿ ಶೆಟ್ಟಿ, ರಾಮಣ್ಣ ವಿಟ್ಲ ಮತ್ತಿತರರು ಉಪಸ್ಥಿತರಿದ್ದರು.

ಮಂಗಳೂರು ನಗರ ದಕ್ಷಿಣದಲ್ಲಿ ಮೂರನೇ ಬಾರಿಗೆ ಸ್ಪರ್ಧೆ :

1972 ರಲ್ಲಿ ಪಿ.ರಾಮಚಂದ್ರ ರಾಯರು ಸ್ಪರ್ಧಿಸಿದ ನಂತರ ಈಗ ಮಂಗಳೂರು ನಗರ ದಕ್ಷಿಣ ಎಂಬ ಹೆಸರು ಹೊಂದಿದ ಕ್ಷೇತ್ರದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲಾಗಿತ್ತು. ನಂತರದ ದಿನಗಳಲ್ಲಿ ಮಂಗಳೂರು ನಗರದಲ್ಲಿ ವ್ಯವಸ್ಥಿತವಾಗಿ ಪಕ್ಷದ ವಿಸ್ತರಣೆಗಾಗಿ ಪ್ರಯತ್ನ ನಡೆಯುತ್ತಿದೆ. ಇತ್ತೀಚೆಗೆ ನಡೆದ ಕಾರ್ಪೊರೇಶನ್ ಚುನಾವಣೆಗಳಲ್ಲಿ 14 ವಾರ್ಡುಗಳಲ್ಲಿ ಸ್ಪರ್ಧಿಸಲಾಗಿತ್ತು; ಈ 14 ರಲ್ಲಿ 11 ವಾರ್ಡುಗಳು ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರಕ್ಕೆ ಸೇರಿವೆ. ಸ್ಪರ್ಧಿಸಿದ ಈ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಪಕ್ಷಕ್ಕೆ ಲಭಿಸಿರುವ ಮತಗಳು ಕಾರ್ಯಕರ್ತರ ಸ್ಫೂರ್ತಿಗೆ ಕಾರಣವಾಗಿದೆ.

ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿರುವ ವಸಂತ ಆಚಾರಿ ಅವರುವಿದ್ಯಾರ್ಥಿ-ಯುವಜನ ಮುಖಂಡರಾಗಿ ಬೆಳೆದು ಬಂದ ಬಳಿಕ ಕಾರ್ಮಿಕ ರಂಗದಲ್ಲಿ ಹಲವು ಸಂಘಟನೆಗಳಿಗೆ ನೇತೃತ್ವ ನೀಡುತ್ತಿದ್ದು ಸಿಐಟಿಯುನ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿರುತ್ತಾರೆ.

ಏಪ್ರಿಲ್ 12 ರಂದು ಮಂಗಳೂರು ಮಹಾ ನಗರ ಪಾಲಿಕೆಯಲ್ಲಿರುವ ಚುನಾವಣಾಧಿಕಾರಿಗಳ ಕಚೇರಿಗೆ ಮುನ್ನೂರು ಮಂದಿ ಬೆಂಬಲಿಗರೊಂದಿಗೆ ಮಂಗಳೂರು ಕೇಂದ್ರ ಮೈದಾನ ಕಚೇರಿಯಿಂದ ಮೆರವಣಿಗೆಯಲ್ಲಿ ಹೋಗಿ ನಾಮಪತ್ರ ಸಲ್ಲಿಸಲಾಯಿತು. ಅಭ್ಯರ್ಥಿ ವಸಂತ ಆಚಾರಿ ಅವರೊಂದಿಗೆ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಚುನಾವಣಾ ಸಮಿತಿ ಅಧ್ಯಕ್ಷ ಕೃಷ್ಣಪ್ಪ ಕೊಂಚಾಡಿ, ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಜಯಂತಿ ಬಿ.ಶೆಟ್ಟಿ, ಮುನೀರ್ ಕಾಟಿಪಳ್ಳ, ವಾಸುದೇವ ಉಚ್ಚಿಲ, ಬಾಬು ದೇವಾಡಿಗ, ಚುನಾಯಿತ

ಪುಟ 10 ಕ್ಕೆ

ದ.ಕ. ಜಿಲ್ಲೆಯಲ್ಲಿ ಚುನಾವಣೆಗೆ....

ಪುಟ 9 ರಿಂದ

ಕಾರ್ಪೊರೇಟರ್ ದಯಾನಂದ ಶೆಟ್ಟಿ ಮತ್ತಿತರರು ಭಾಗವಹಿಸಿದ್ದರು.

ಚುನಾವಣಾ ಪ್ರಚಾರದಲ್ಲಿ ಹೊಸತನ :

ಮಂಗಳೂರು ನಗರ ದಕ್ಷಿಣ ಚುನಾವಣಾ ಕ್ಷೇತ್ರದಲ್ಲಿ ಸಿಪಿಐ(ಎಂ) ಚುನಾವಣಾ ಸಮಿತಿ ಕೆಲವು ಹೊಸತನಗಳನ್ನು ರೂಢಿಸಿದೆ. ಮಂಗಳೂರು ಮಹಾನಗರ ಪಾಲಿಕೆಯ 38 ವಾರ್ಡುಗಳು ಈ ಕ್ಷೇತ್ರಕ್ಕೆ ಬರುತ್ತಿದ್ದು, ಕೇವಲ 11 ವಾರ್ಡುಗಳಲ್ಲಿ ಹಿಂದಿನ ಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಲಾಗಿತ್ತು. ಈ ಬಾರಿ ಉಳಿದ ವಾರ್ಡುಗಳಿಗೆ ಸಂಬಂಧಿಸಿಯೂ ಏರಿಯಾ ಚುನಾವಣಾ ಸಮಿತಿಗಳನ್ನು ರಚಿಸಲಾಗಿದೆ. ಎಪ್ರಿಲ್ 14ರ ಭಾನುವಾರ ಏಕಕಾಲದಲ್ಲಿ ಪ್ರಚಾರ ಆರಂಭ ಮಾಡಲು ಚುನಾವಣಾ ಸಮಿತಿ ಕರೆಕೊಟ್ಟ ಮೇರೆಗೆ 22 ವಾರ್ಡುಗಳಲ್ಲಿ ತಂಡಗಳು ನಗರದಲ್ಲಿ ಆ ದಿನ ಮನೆಮನೆ ಪ್ರಚಾರ ಆರಂಭಿಸಿದವು. ಮನೆಮನೆ ಪ್ರಚಾರ ಕಾರ್ಯ ಮುಂದುವರಿದಿದೆ.

ಮಂಗಳೂರು ಪಾಲಿಕೆ ಚುನಾವಣೆ ವೇಳೆಗೆ ಪಾಲಿಕೆ ಆಡಳಿತದ ವೈಫಲ್ಯವನ್ನು ಬಿಂಬಿಸುವ ಹಾಡುಗಳ ಸಿ.ಡಿ.ಯನ್ನು ಮೈಕ್ ಪ್ರಚಾರದ ವೇಳೆ ಬಳಸಿಕೊಂಡಿದ್ದು ಬಹಳ ಪರಿಣಾಮಕಾರಿಯಾಗಿತ್ತು. ಅದೇ ಸಾಹಿತಿ ಹಾಡುಗಾರರು ಸಿದ್ಧಪಡಿಸಿದ ಪ್ರಚಾರ ಹಾಡುಗಳ ಹೊಸ ಸಿ.ಡಿ.ಯನ್ನು ಬಿಡುಗಡೆ ಮಾಡುವ ಕಾರ್ಯಕ್ರಮವನ್ನು ಏಪ್ರಿಲ್ 15 ರಂದು ಚುನಾವಣಾ ಕಚೇರಿ (ಪಕ್ಷದ ಮೈದಾನ ಕಚೇರಿ)ಯಲ್ಲಿ ಇರಿಸಿಕೊಳ್ಳಲಾಗಿತ್ತು. ಸಿಪಿಐ(ಎಂ)ನ ಮಂಜೇಶ್ವರದ ಬ್ಲಾಕ್ ಕಮಿಟಿ ಕಾರ್ಯದರ್ಶಿ ಕೆ.ಆರ್.ಜಯಾನಂದ ಸಿ.ಡಿ. ಬಿಡುಗಡೆಗೊಳಿಸಿ ಮಾತನಾಡಿದರು.

ಅಲ್ಪಸಂಖ್ಯಾತ ವಿಭಾಗದ ಯುವಜನರು ಸಿಪಿಐ(ಎಂ) ಅಭ್ಯರ್ಥಿ ಪರವಾಗಿ ಪ್ರಚಾರ ಕೆಲಸ ಮಾಡಲು ಮುಂದೆ ಬಂದಿರುವುದು ಹೊಸ ಬದಲಾವಣೆಯಾಗಿದೆ. ಮಂಗಳೂರು ಕಡಲ ತೀರದ ಬೆಂಗರೆಯ ಮುಸ್ಲಿಂ ಯುವಕರು ಏಪ್ರಿಲ್ 14 ರಂದು ಡಿವೈಎಫ್ಐ ಜಿಲ್ಲಾ ಕಾರ್‍ಯದರ್ಶಿ ಹಾಗೂ ಚುನಾಯಿತ ಕಾರ್ಪರೇಟರ್ ದಯಾನಂದ ಶೆಟ್ಟಿ ಅವರ ಸಮ್ಮುಖ ಡಿವೈಎಫ್ಐ ಸದಸ್ಯತ್ವ ಸ್ವೀಕರಿಸಿದರು. ಮಾತ್ರವಲ್ಲದೆ ಸಿಪಿಐ(ಎಂ) ಅಭ್ಯರ್ಥಿಯ ಗೆಲುವಿಗಾಗಿ ಕೆಲಸ ಮಾಡಲು ತೀರ್ಮಾನಿಸಿದರು. ■

ಪರ್ಯಾಯವನ್ನು ನಿರೀಕ್ಷಿಸುತ್ತಿರುವ...

ಪುಟ 8 ರಿಂದ

ಭೂ ಸುಧಾರಣೆ ಕಾಯಿದೆ ಜಾರಿಗೆ, ಬಿಟ್ಟಿ ಚಾಕರಿ ವಿರುದ್ಧ ಭೂ ಮಾಲಕರ ಎದುರು 1970–80ರ ದಶಕದಲ್ಲಿ ಹಲವಾರು ದಿಟ್ಟ ಹೋರಾಟಗಳು ನಡೆದಿವೆ. ಹಕ್ಲಾಡಿ, ಕೆರಾಡಿ, ಬೆಳ್ಳಾಲ, ಸಿದ್ಧಾಪುರ, ಆಜ್ರಿ ಮೊದಲಾದ ಗ್ರಾಮಗಳಲ್ಲಿ ಭೂ ಮಸೂದೆ ಕಾಯಿದೆ ಜಾರಿ ಮಾಡಲು ಭೂಮಿ ಹಕ್ಕಿಗಾಗಿ ಗಂಭೀರ ಸ್ವರೂಪದ ಹೋರಾಟ ಚಳುವಳಿಗಳು ನಡೆದಿವೆ. ಪರಿಣಾಮವಾಗಿ ಹಲವಾರು ಬಡ ಗೇಣಿದಾರ ರೈತ ಕುಟುಂಬಗಳಿಗೆ ಭೂಮಿ ದೊರಕಿದೆ. ಇದರಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ಹಂಚಿನ ಕಾರ್ಮಿಕರು ಮಹತ್ತರ ಪಾತ್ರ ವಹಿಸಿದ್ದರು. ಕಾರ್ಮಿಕರ ಕೆಚ್ಚೆದೆಯ ಧೀರ ಹೋರಾಟ ನೆನಪಿನಲ್ಲಿಡಬೇಕಾದುದು ಅಗತ್ಯ.

ಜನರ ಬವಣೆಗಳು:

ವರಾಹಿ ಜಲವಿದ್ಯುತ್ ನೀರಾವರಿ ಯೋಜನೆ ಬೈಂದೂರು ಕ್ಷೇತ್ರದ ಜನತೆಗೆ ವರದಾನವಾಗಿದ್ದರೂ ಬೈಂದೂರು ವಿದ್ಯುತ್ ಕ್ಷಾಮದಿಂದ ಬಳಲುತ್ತಿದೆ. ದಿನಕ್ಕೆ 4–5 ಗಂಟೆ ವಿದ್ಯುತ್ ಕಡಿತ ಆಗುತ್ತಿದೆ. ವರಾಹಿ ನದಿಯಲ್ಲಿ ಹರಿಯುವ ನೀರನ್ನು ಕುಡಿಯಲು ಒದಗಿಸಬೇಕೆಂಬ ಯೋಜನೆ ಇನ್ನೂ ಕಾರ್ಯಗತವಾಗಿಲ್ಲ. ಸುಂದರ ಕಡಲತೀರ, ರಮಣೀಯ ಸ್ಥಳ ಮರವಂತೆ ಪ್ರವಾಸೋದ್ಯಮ ಅಭಿವೃದ್ಧಿ ಕಾಣದೇ ಸೊರಗಿದೆ. ಅನಧಿಕೃತವಾಗಿ ಅತಿಕ್ರಮಿಸಿಕೊಂಡು ಅಕ್ರಮ–ಸಕ್ರಮೀಕರಣದನ್ವಯ ಸರಕಾರಕ್ಕೆ ಅರ್ಜಿ ಸಲ್ಲಿಸಿದ ಸಹಸ್ರಾರು ಸಾಗುವಳಿದಾರ ಬಡ ರೈತರಿಗೆ ಇನ್ನೂ ಭೂಮಿ ಹಕ್ಕು ಸಿಕ್ಕಿರುವುದಿಲ್ಲ. ನಕಲಿ ರೇಶನ್ ಕಾರ್ಡು ತನಿಖಾ ನೆಪದಲ್ಲಿ ಉಡುಪಿ ಜಿಲ್ಲೆಯೊಂದರಲ್ಲೆ ಸುಮಾರು 26,000ಕ್ಕೂ ಹೆಚ್ಚು ಪಡಿತರ ಚೀಟಿಗಳನ್ನು ಏಕಾಏಕೀ ರದ್ದುಪಡಿಸಲಾಗಿದೆ. ಬೈಂದೂರು ಕ್ಷೇತ್ರದಲ್ಲಿ ಅತೀ ಹೆಚ್ಚು ರೇಶನ್ ಕಾರ್ಡು ರದ್ದುಗೊಳಿಸಿರುವುದು ತೀರಾ ಅನ್ಯಾಯವಾಗಿದೆ. ಬಡ ನಿವೇಶನರಹಿತರು ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಭೂಮಿ ಹಕ್ಕಿಗಾಗಿ ನಡೆಸಿದ ನಿರಂತರ ಹೋರಾಟದ ಫಲವಾಗಿ ಸರಕಾರ ನಿವೇಶನ ಸ್ಥಳ ಗುರುತಿಸುವ ಕಾರ್ಯ ಆರಂಭ ಮಾಡಿದರೂ ನಿವೇಶನರಹಿತರ ಅಂತಿಮ ಪಟ್ಟಿಯನ್ನು ತಯಾರಿಸದಿರುವುದು ಖಂಡನಾರ್ಹವಾಗಿದೆ.

ಭ್ರಷ್ಟ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳ ಜನವಿರೋಧಿ ನೀತಿಗಳ ವಿರುದ್ಧ ಪ್ರಬಲ ಸ್ಪರ್ಧೆ ನೀಡಬೇಕು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ, ಉಡುಪಿ ಜಿಲ್ಲಾ ಕಾರ್ಯದರ್ಶಿ ಕೆ. ಶಂಕರ್ ಅವರನ್ನು ಬೈಂದೂರು ವಿಧಾನಸಭಾ ಕ್ಷೇತ್ರಕ್ಕೆ ಸಿಪಿಐ(ಎಂ) ಸ್ಪರ್ಧೆಯ ಕಣಕ್ಕಿಳಿಸಿದೆ. ವಿದ್ಯಾರ್ಥಿ ಚಳುವಳಿ ಮೂಲಕ, ನಂತರ ಕಾರ್ಮಿಕ ಸಂಘಟನೆಯ ನೇತಾರರಾಗಿ ಕಮ್ಯೂನಿಸ್ಟ್ ಚಳುವಳಿಗೆ ಧುಮುಕಿದ ಕೆ. ಶಂಕರ್ 40 ವರ್ಷಗಳಿಂದಲೂ ಸಿಪಿಐ(ಎಂ) ಪಕ್ಷದಲ್ಲಿದ್ದು, ಕಾರ್ಮಿಕ ಸಂಘಟನೆಯಲ್ಲಿ ತೊಡಗಿದ್ದಾರೆ. ರೈತ, ಕಾರ್ಮಿಕ, ಕೃಷಿಕೂಲಿಕಾರರ ನೆಚ್ಚಿನ ಮುಖಂಡರಾದ ಸಿಪಿಐ(ಎಂ) ಅಭ್ಯರ್ಥಿ ಕೆ. ಶಂಕರ್‌ರವರನ್ನು ಬಹುಮತದಿಂದ ಗೆಲ್ಲಿಸಬೇಕಾಗಿದೆ.

ಮೋದಿಯವರ ವಿಚಾರಣೆ.......

ಪುಟ 7 ರಿಂದ

ಸಂಗತಿಯೆಂದರೆ "ಅವರು ವಾಸ್ತವವಾಗಿ ತಮ್ಮಿಂದ ಏನನ್ನೂ ಕಿತ್ತುಕೊಳ್ಳದ ಯಾವುದೇ ಆಳ್ವಿಕೆಯೊಂದಿಗೆ ರಾಜಿ ಮಾಡಿಕೊಳ್ಳ ಬಲ್ಲರು ಮತ್ತು ಅವರೊಂದಿಗೆ ರಾಜಿ ಮಾಡಿಕೊಳ್ಳುವ ಯಾವುದೇ ಆಳ್ವಿಕೆ.....ಫ್ಯಾಸಿಸಂನಲ್ಲಿ ಅವರಿಗೆ ಇತರ ಆಳ್ವಿಕೆಗಳಿಗೆ ಹೋಲಿಸಿದರೆ ಕೆಲವು ಪ್ರಮುಖ ಅನುಕೂಲತೆಗಳಿವೆ" ಎಂದು ಹೇಳುತ್ತಾರೆ. ಹೊಬ್ಸ್‌ಬಾವ್ಮ್ ಈ ವಿವಿಧ ಅನುಕೂಲತೆಗಳ ಪಟ್ಟಿ ಮಾಡುತ್ತಾರೆ– ಅವುಗಳಲ್ಲಿ ಕಾರ್ಮಿಕ ಸಂಘಗಳನ್ನು



ತೊಲಗಿಸುವುದು, ಎಡಪಂಥೀಯರನ್ನು ದುರ್ಬಲಗೊಳಿಸುವುದು, ಸೋಲಿಸುವುದು ಸೇರಿದೆ. ಅದರಿಂದಾಗಿ ದೊಡ್ಡ ಬಂಡವಾಳಿಗರಿಗೆ 1930ರ ದಶಕದ 'ಮಹಾ ಕುಸಿತ'ದಿಂದ ಒಂದು ಸಲ್ಲದ ಅನುಕೂಲ ಸನ್ನಿವೇಶ ದಕ್ಕುವಂತಾಯಿತು.

ನಮ್ಮ ಪ್ರಸಕ್ತ ಆಂತರಿಕ ಆರ್ಥಿಕ ನಿಧಾನಗತಿಯನ್ನು ತಪ್ಪಿಸುವ ಸಂಕೇತಗಳೇನೂ ಇರದಿರುವಾಗ, ಮತ್ತು ಜಾಗತಿಕ ಆರ್ಥಿಕ ಮುಗ್ಗರಿಸುತ್ತಲೇ ಇರುವಾಗ, ಲಾಭವನ್ನು ಗರಿಷ್ಟ ಮಟ್ಟಕ್ಕೇರಿಸಿಕೊಳ್ಳುವ ಭಾರತದ ಕಾರ್ಪೊರೇಟ್ ವಲಯದ ಹಂಬಲದ ಈಡೇರಿಕೆಗೆ ಇಂತಹುದೇ ಒಬ್ಬ 'ಉದ್ಧಾರಕ' ಬೇಕಾಗುತ್ತಾನೆ. ಫ್ಯಾಸಿಸಂನ ಉದಯದಲ್ಲಿ ಜಾಗತಿಕ ಮಟ್ಟದ ದೊಡ್ಡ ವ್ಯವಹಾರಸ್ಥರು, ವಿಶೇಷವಾಗಿ ಅಮೆರಿಕನ್ ಕಾರ್ಪೊರೇಟ್ ದೈತ್ಯರು ಒಂದು ಮಹತ್ವದ ಪಾತ್ರ ವಹಿಸಿದ್ದರು ಎಂದು ತೋರಿಸಲು ಬಹಳಷ್ಟು ಚಾರಿತ್ರಿಕ ಸಾಕ್ಷ್ಯಗಳಿವೆ.

ಮೈನಡುಗಿಸುವ ಸಾಮ್ಯ!

ಆದರೆ ನಮ್ಮ ದೇಶದಲ್ಲಿ ಇಂದು ಇರುವ ಸನ್ನಿವೇಶ ಜರ್ಮನಿಯಲ್ಲಿ ಫ್ಯಾಸಿಸಂನ ಉದಯಕ್ಕೆ ದಾರಿ ಮಾಡಿಕೊಟ್ಟ ಸಂದರ್ಭದಂತಿಲ್ಲ. ಆದರೂ, ಅತ್ಯಂತ ಪ್ರತಿಗಾಮಿ ವಿಭಾಗಗಳು ಫ್ಯಾಸಿಸ್ಟ್ ಮಾದರಿಯ ವಿಧಾನಗಳನ್ನು ಬಳಸಿ ಪ್ರಭುತ್ವ ಶಕ್ತಿಯ ಮೇಲೆ ಹತೋಟಿ ಪಡೆಯಲು ನಡೆಸಿರುವ ಪ್ರಯತ್ನಗಳಲ್ಲಿ ಗಮನಾರ್ಹ ಸಾಮ್ಯತೆಗಳಿವೆ. ಜಾರ್ಜಿ ದಿಮಿತ್ರೊವ್, ತನ್ನ 'ಯುನೈಟೆಡ್ ಫ್ರಂಟ್'(ಸಂಯುಕ್ತ ರಂಗ) ಕೃತಿಯಲ್ಲಿ ಜರ್ಮನಿಯಲ್ಲಿ ಫ್ಯಾಸಿಸಂನ ಸ್ವರೂಪ ಮತ್ತು ಅದರ ಉದಯದ ವೈಜ್ಞಾನಿಕ ವಿಶ್ಲೇಷಣೆ ನೀಡಿದ್ದಾರೆ. "ಫ್ಯಾಸಿಸಂ ಉಗ್ರ ಸಾಮ್ರಾಜ್ಯಶಾಹಿಗಳ ಹಿತದೃಷ್ಟಿಯಿಂದ ಕ್ರಿಯೆ ನಡೆಸುತ್ತದೆ, ಆದರೆ ಜನಸಮೂಹಗಳ ಎದುರು ಅದು ಒಂದು ಕೆಟ್ಟದಾಗಿ ನಡೆಸಿಕೊಂಡ ದೇಶದ ಪ್ರತಿಪಾದಕನ ವೇಷ ತೊಟ್ಟು ನಿಲ್ಲುತ್ತದೆ ಮತ್ತು ಅಪಮಾನಿ[illegible] ರಾಷ್ಟ್ರೀಯ ಭಾವನೆಗಳನ್ನು ಕೆರಳಿಸುತ್ತದೆ ಎನ್ನುತ್ತಾರೆ ಅವರು. ಮುಂದುವರೆದ[illegible] "ಫ್ಯಾಸಿಸಂ ಜನಗಳನ್ನು ಅತ್ಯಂತ ಭ್ರ[illegible] ಮತ್ತು ಲಂಚಕೋರ ವ್ಯಕ್ತಿಗಳ ಮರ್ಜಿ[illegible] ಒಳಪಡಿಸುತ್ತದೆ, ಆದರೆ ಜನಗಳ ಎದುರ[illegible] ಬಂದು ಒಂದು ಪ್ರಾಮಾಣಿಕ ಮತ್[illegible] ಭ್ರಷ್ಟಗೊಳಿಸಲಾಗದ ಸರಕಾರ ಬೇಕಾಗಿ[illegible] ಎನ್ನುತ್ತದೆ. ಜನಸಮೂಹಗಳ ಆಳವಾ[illegible] ಭ್ರಮನಿರಸನಗಳನ್ನು ಊಹಿಸಿಕೊಂಡ[illegible] ಫ್ಯಾಸಿಸಂ ತನ್ನ ಪುಢಾರಿಕೆಯನ[illegible] ಆಯಾಯ ಸನ್ನಿವೇಶದ ವಿಲಕ್ಷಣತೆಗೆ ಹೊಂದಿಸಿಕೊಳ್ಳುತ್ತದೆ" ಎಂದು ಅವರು ಹೇಳುತ್ತಾರೆ.


ದಿಮಿತ್ರೊವ್ ಇಲ್ಲಿ ಆರೆಸ್ಸೆಸ್/ಬಿಜೆಪಿಯ ಪ್ರಸಕ್ತ ಪ್ರಚಾರದ ಬಗ್ಗೆಯೇ ಹೇಳುತ್ತಿರುವಂತಿದೆ. ಬಿಜೆಪಿ ಬಹಿರಂಗವಾಗಿಯೇ ನವ-ಉದಾರವಾದಿ ಆರ್ಥಿಕ ಸುಧಾರಣೆಗ[illegible] ಅಜೆಂಡಾವನ್ನು ಈಡೇರಿಸಬೇಕೆಂ[illegible] ಪ್ರತಿಪಾದಿಸುತ್ತದೆ. ಈ ಚೌಕಾಶಿಯಲ್ಲಿ ಅದು ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ಮಂಜೂರಾತಿಯನ್ನು ಪಡೆಯುತ್ತದೆ. ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಮುಂತಾದ ಕೆಲವು ಸುಧಾರಣೆಗಳನ್ನು ವಿರೋಧಿಸಿದರೂ(ಈ ಹಿಂದೆ ಎನ್‌ಡಿಎ ಸರಕಾರದ ನೇತೃತ್ವ ವಹಿಸಿದ್ದಾಗ ಅದಕ್ಕೂ ಅವಕಾಶ ಕೊಡಲು ಮುಂದಾಗಿತ್ತು), ಈಗಾಗಲೇ ಅದು ಎಫ್‌ಡಿಐ ಪ್ರವೇಶದ ಕ್ಷೇತ್ರಗಳ ವಿಸ್ತರಣೆಯಾಗಬೇಕು ಎಂದು ಪ್ರತಿಪಾದಿಸಲಾರಂಭಿಸಿದೆ. ಹೀಗೆ ಅದು ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಸಾಧನೆಗಾಗಿ ಕೆಲಸ ಮಾಡುತ್ತಿದೆ. ಹಿಂದುತ್ವದ ಮೂಲ ಅಜೆಂಡಾದ ಮೇಲೆ ಅದರ ನಿರಂತರ ಪ್ರಚಾರ "ಅಪಮಾನಿತ ರಾಷ್ಟ್ರೀಯ(ಹಿಂದೂ ಎಂದು ಓದಿಕೊಳ್ಳಿ) ಭಾವನೆಗಳನ್ನು" ಸರಿಪಡಿಸುವ ಹೆಸರಿನಲ್ಲಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುತ್ತಲೇ ಇದೆ. ಫ್ಯಾಸಿಸ್ಟ್ ವಿಧಾನಗಳೊಂದಿಗೆ ಎಂತಹ ಮೈನಡುಗಿಸು[illegible] ಸಾಮ್ಯ!

ಆಧುನಿಕ ಭಾರತೀಯ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯನ್ನು ಬುಡಮೇಲು ಮಾಡುವ ಇಂತಹ ಒಂದು ಪ್ರಯತ್ನ ಸಫಲಗೊಳ್ಳಲು ಬಿಡಬಾರದು. ಇಂತಹ ಒಂದು ಅಜೆಂಡಾವನ್ನು ಸೋಲಿಸಲು ಕೆಲಸ ಮಾಡುವಾಗಲೇ, ಭಾರತೀಯ ಜನತೆ[illegible] ನಮ್ಮ ಬಹಳಷ್ಟು ಜನಗಳ ಬದುಕಿನ ಮೇಲೆ ಅಭೂತಪೂರ್ವ ಹೊರೆಗಳನ್ನು ಹೇರುತ್ತಲೇ ಇರುವ ನವ–ಉದಾರವಾದಿ ಆರ್ಥಿಕ ಧೋರಣೆಗಳ ವಿರುದ್ಧ ಹೋರಾಟಗಳನ್ನು ಬಲಪಡಿಸಬೇಕಾದ ಅಗತ್ಯವೂ ಇದೆ. ದೇಶಕ್[illegible] ಇಂದು ಒಂದು ಪರ್ಯಾಯ ಧೋರಣೆಗ[illegible] ದಿಕ್ಕು ಬೇಕಾಗಿದೆ ಎಂಬುದು ಸ್ಪಷ್ಟ. [illegible] ಪರ್ಯಾಯ ಧೋರಣೆಯ ದಿಕ್ಕನ್ನು ಇತ್ತೀಚೆ[illegible] ನಡೆದ ಸಿಪಿಐ(ಎಂ)ನ ಸಂಘರ್ಷ ಸಂದೇ[illegible] ಜಾಥಾ ಎತ್ತಿ ತೋರಿದೆ. ಒಂದು ಉತ್ತ[illegible] ಭಾರತವನ್ನು ನಿರ್ಮಿಸಲು ಈ ದಿಕ್ಕಿನ[illegible] ಹೋರಾಟಗಳನ್ನು ಬಲಪಡಿಸಬೇಕಾಗಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

"ನವ ಉದಾರವಾದಿ ಸುಧಾರಣೆಗಳು ಬಿಕ್ಕಟ್ಟಿಗೆ ಇಂಬು ಕೊಡುತ್ತಿವೆ" "ಜನ ಸಮುದಾಯದ ಗಳಿಕೆಯನ್ನು ಬೆರಳೆಣಿಕೆಯಷ್ಟು ಕಾರ್ಪೊರೇಟ್ ಸಂಸ್ಥೆಗಳಿಗೆ ವರ್ಗಾಯಿಸುತ್ತಿವೆ." -ತಪನ್ ಸೇನ್-

ಸಿಐಟಿಯು ಸಂಘಟನೆಯ 14 ನೇ ಅಖಿಲ ಭಾರತ ಸಮ್ಮೇಳನ 2013 ಏಪ್ರಿಲ್ 4 ರಿಂದ 8 ರವರೆಗೆ ದುಡಿಯುವ ವರ್ಗದ ಚಳುವಳಿಯ ಸ್ಫೂರ್ತಿಕೇಂದ್ರ- ತ್ಯಾಗ ಬಲಿದಾನಗಳ ನಾಡು ಕೇರಳದ ಕಣ್ಣೂರಿನಲ್ಲಿ ನಡೆಯಿತು. "ನೀತಿಗಳನ್ನು ಬದಲಿಸುವ ನಿಟ್ಟಿನಲ್ಲಿ ವರ್ಗಹೋರಾಟವನ್ನು ತೀವ್ರಗೊಳಿಸೋಣ" ಎಂಬ ಘೋಷಣೆಯ ಅಡಿಯಲ್ಲಿ ಕಾಂ. ಎಂ.ಕೆ. ಪಂಧೆ ನಗರದಲ್ಲಿ ನಡೆದ ಸಮ್ಮೇಳನದ ವರದಿ ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿಯಾಗಿ ಪುನರಾಯ್ಕೆಯಾಗಿರುವ ಕಾಂ. ಎಸ್. ವರಲಕ್ಷ್ಮಿಯವರಿಂದ.



ನವ ಉದಾರವಾದಿ ನೀತಿಗಳು ಬಿಕ್ಕಟ್ಟಿಗೆ ಇಂಬು ಕೊಡುತ್ತಿವೆ- ಜನ ಸಮುದಾಯದ ಗಳಿಕೆಯನ್ನು ಬೆರಳೆಣಿಕೆಯಷ್ಟು ಕಾರ್ಪೊರೇಟ್ ಸಂಸ್ಥೆಗಳಿಗೆ ವರ್ಗಾಯಿಸುತ್ತಿವೆ. ಇದರ ವಿರುದ್ಧ ಕಾರ್ಮಿಕ ವರ್ಗದ ಐಕ್ಯ ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಸಿಐಟಿಯು 14 ನೇ ಅಖಿಲ ಭಾರತ ಸಮ್ಮೇಳನ ದೇಶದ ದುಡಿಯುವ ವರ್ಗಕ್ಕೆ ಕರೆ ಕೊಟ್ಟಿದೆ.

ಸಿಐಟಿಯು ಧ್ವಜವನ್ನು ಆರೋಹಣಮಾಡಿ ಅಖಿಲ ಭಾರತ ಸಮ್ಮೇಳನವನ್ನು ಉದ್ಘಾಟಿಸಿದ ಸಿಐಟಿಯು ಅಧ್ಯಕ್ಷರಾದ ಕಾಂ. ಎ.ಕೆ. ಪದ್ಮನಾಭನ್‌ರವರು ಮಾತನಾಡಿ ಸರ್ಕಾರದ ಬಲಪಂಥೀಯ ನೀತಿಗಳ ಚಲನೆಯು ಸ್ಪಷ್ಟವಾಗಿ ಗೋಚರಿಸುತ್ತಿದೆ. ಪಾಶ್ಚಿಮಾತ್ಯ ಆರ್ಥಿಕ ವ್ಯವಸ್ಥೆಯಲ್ಲಿ ಆರ್ಥಿಕ ಬಿಕ್ಕಟ್ಟು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಮುಂದುವರಿದ ದೇಶಗಳು ಈ ಬಿಕ್ಕಟ್ಟಿನಿಂದ ಹೊರ ಬರಲು ಅವರಿಗೆ ಅನುಕೂಲವಾಗುವಂತಹ ನೀತಿಗಳನ್ನು ಕೈಗೊಳ್ಳುವಂತೆ ನಮ್ಮಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೇಲೆ ಒತ್ತಡವನ್ನು ಹೆಚ್ಚಿಸುತ್ತಿವೆ. ಇಂತಹ ಸಾಮ್ರಾಜ್ಯಶಾಹಿ ಒತ್ತಡದಿಂದಾಗಿ ಯಾವುದೇ ಕಾಳಜಿಯಿಲ್ಲದೆ, ರಾಷ್ಟ್ರೀಯ ಹಿತಾಸಕ್ತಿಗಳನ್ನು ಬಲಿಕೊಟ್ಟಾದರೂ ಭಾರತದ ಆಳುವ ವರ್ಗಗಳು ಅಮೆರಿಕಾ ಆಡಳಿತದ ವ್ಯೂಹಾತ್ಮಕ ಹಿತಾಸಕ್ತಿಗಳಿಗೆ ಸ್ಪಂದಿಸಲು ಹೇಗೆ ಮುಂದಾಗಿವೆ ಎಂಬುದನ್ನು ವಿವರಿಸಿದರು.



ದೇಶದ ಕಾರ್ಮಿಕ ಚಳುವಳಿಯಲ್ಲಿ ಸಾಧಿಸಲಾದ ಐಕ್ಯತೆಯನ್ನು ಬಲಪಡಿಸುವ ಮತ್ತು ವಿಸ್ತರಿಸುವುದರ ಮಹತ್ವವನ್ನು ಪ್ರಸ್ತಾಪಿಸಿದ ಅವರು ಕೇವಲ ಶೇ. 0.01 ರಷ್ಟು ಜನರ ಅನುಕೂಲತೆಗಾಗಿ ಜಾರಿಯಾಗುತ್ತಿರುವ ನೀತಿಗಳನ್ನು ಬದಲಾಯಿಸಿ ಶೇ. 99.99 ರಷ್ಟು ಜನರ ಒಳಿತಿಗಾಗಿ ಬೇಕಾಗುವ ನೀತಿಗಳನ್ನು ಪಡೆಯಲು ಸಾಧ್ಯ ಎಂದರು. ಸಿಐಟಿಯು ತನ್ನ ಎಲ್ಲಾ ಶಕ್ತಿಯನ್ನು ಕಾರ್ಮಿಕ ವರ್ಗದ ಐಕ್ಯ ಹೋರಾಟಗಳನ್ನು ಬಲಪಡಿಸಲು ಬಳಸಲಿದೆ ಎಂಬ ಭರವಸೆಯನ್ನು ನೀಡಿದರು.

ನವಉದಾರೀಕರಣದ ಧೋರಣೆಗಳಿಂದ ವಿಶ್ವದ ಬೇರೆ ದೇಶಗಳ ಕಾರ್ಮಿಕ ವಿಭಾಗಗಳ ಮೇಲೆ ಆಗುತ್ತಿರುವ ದಾಳಿಗಳ ವಿರುದ್ಧ ಬೆಳೆದು ಬರುತ್ತಿರುವ ಚಳುವಳಿಗಳತ್ತ ಗಮನ ಸೆಳೆದ ಅವರು ಆಯಾ ದೇಶಗಳ ಸರ್ಕಾರಗಳು ಕಾರ್ಮಿಕರ ಕಾನೂನು ಬದ್ಧ ಸೌಲಭ್ಯಗಳನ್ನು ಕಡಿತ ಮಾಡಲು ನಡೆಸುತ್ತಿರುವ ಪ್ರಯತ್ನಗಳನ್ನು ಕಾರ್ಮಿಕರು ದೃಢವಾಗಿ ವಿರೋಧಿಸುತ್ತಿದ್ದಾರೆ ಎಂದು ಹೇಳಿದರು. ಲ್ಯಾಟಿನ್ ಅಮೇರಿಕದ ವೆನೆಜುವೆಲಾ, ಬೊಲಿವಿಯ, ಇಕ್ವೆಡೋರ್ ಮುಂತಾದ ದೇಶಗಳ ಎಡ ಮತ್ತು ಪ್ರಗತಿಪರ ಸರ್ಕಾರಗಳು ಕೈಗೊಳ್ಳುತ್ತಿರುವ ಜನಪರ ಧೋರಣೆಗಳನ್ನು ಕುರಿತು ಪ್ರಸ್ತಾಪಿಸಿದ ಅವರು ಒಂದು ಬಂಡವಾಳಶಾಹಿ ವ್ಯವಸ್ಥೆಯ ಅಡಿಯಲ್ಲಿಯೂ ಸರ್ಕಾರಗಳಿಗೆ ರಾಜಕೀಯ ಇಚ್ಛಾಶಕ್ತಿ ಇದ್ದರೆ, ಜನಪರವಾದ ಪರ್ಯಾಯ ಧೋರಣೆಗಳನ್ನು ಜಾರಿಗೆ ತರಲು ಸಾಧ್ಯವಿದೆ ಎಂದು ಆ ಕೆಲವು ದೇಶಗಳು ತೋರಿಸಿಕೊಟ್ಟಿವೆ ಎಂದರು. ಯುಪಿಎ ಸರ್ಕಾರ ಹೆಚ್ಚೆಚ್ಚು ಅಮೇರಿಕನ್ ಸಾಮ್ರಾಜ್ಯಶಾಹಿಯ ಒತ್ತಡಗಳಿಗೆ ಮಣಿದು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕಾರ್ಪೊರೇಟ್ ಕಂಪನಿಗಳಿಗೆ ಶರಣಾಗುವ ನೀತಿಯನ್ನು ಅನುಸರಿಸುತ್ತಿದೆ ಎಂದು ಟೀಕಿಸಿದರು. ಇಂತಹ ನೀತಿಗಳ ವಿರುದ್ಧ ಹೋರಾಡಲು ಕಾರ್ಮಿಕರನ್ನು ಮಾತ್ರವಲ್ಲ ಎಲ್ಲಾ ಜನವಿಭಾಗಗಳನ್ನೂ ಒಂದುಗೂಡಿಸಬೇಕೆಂದು ಸಮ್ಮೇಳನದ ಪ್ರತಿನಿಧಿಗಳಿಗೆ ಅವರು ಕರೆ ನೀಡಿದರು.

ಕಾರ್ಮಿಕ ವರ್ಗವನ್ನು ಜಾತಿ, ಮತಧರ್ಮ, ಪ್ರಾದೇಶಿಕತೆಯ ಹೆಸರಿನಲ್ಲಿ ಒಡೆಯುವ ಪ್ರಯತ್ನದ ಅಪಾಯವನ್ನು ಪ್ರಸ್ತಾಪಿಸಿದ ಕಾಂ. ಎ.ಕೆ.ಪಿ. ಅವರು ಕಾರ್ಮಿಕ ವರ್ಗವನ್ನು ಒಂದುಗೂಡಿಸುವುದಕ್ಕಾಗಿ ಸಾಮಾಜಿಕವಾಗಿ ದಮನಕ್ಕೆ ಒಳಗಾದ ದಲಿತ, ಆದಿವಾಸಿ, ಮಹಿಳಾ ಮತ್ತು ವಲಸೆ ಕಾರ್ಮಿಕರ ಪ್ರಶ್ನೆಗಳನ್ನು ಎತ್ತಿಕೊಳ್ಳಲು ವಿಶೇಷ ಗಮನ ನೀಡಬೇಕು ಎಂದರು.

ಸೌಹಾರ್ದ ಬೆಂಬಲ-ಐಕ್ಯತೆಯ ಘೋಷಣೆ

ಸಮ್ಮೇಳನಕ್ಕೆ ಕಾರ್ಮಿಕ ವರ್ಗದ ಐಕ್ಯತೆಯ ಪ್ರತೀಕವಾಗಿ ಎಐಟಿಯುಸಿ, ಬಿಎಮ್‌ಎಸ್, ಐಎನ್‌ಟಿಯುಸಿ, ಟಿಯುಸಿಸಿ, ಎಐಯುಟಿಯುಸಿ, ಮುಂತಾದ ಕೇಂದ್ರ ಕಾರ್ಮಿಕ ಸಂಘಟನೆಗಳಿಂದ ಸೌಹಾರ್ದ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿತ್ತು. ಈ ಸಂಘಟನೆಗಳ ಪ್ರತಿನಿಧಿಗಳು ಶುಭಕೋರಿ ಕಾರ್ಮಿಕರ ಐಕ್ಯ ಚಳುವಳಿಯ ಮಹತ್ವವನ್ನು ಪ್ರತಿಪಾದಿಸಿದರು. ವಿಶ್ವ ಕಾರ್ಮಿಕ ಸಂಘಟನೆಗಳ ಒಕ್ಕೂಟ (ಡಬ್ಲ್ಯುಎಫ್‌ಟಿಯು)ದ ಅಲೆಗ್ಸಾಂಡ್ರಿಯಾ ಲಿಂಬೇರಿ, ಐಎಲ್‌ಓನ ಏರಿಯಲ್ ಕ್ಯಾಸ್ಟ್ರೋ ರವರು ಸ್ಫೂರ್ತಿದಾಯಕವಾಗಿ ಮಾತಾನಾಡಿದರು. ದೇಶದ 26 ರಾಜ್ಯಗಳ ನಾನಾ ಕೈಗಾರಿಕೆಗಳನ್ನು ಪ್ರತಿನಿಧಿಸಿ 1817 ಪ್ರತಿನಿಧಿಗಳು ಹಾಜರಿದ್ದರು. ಅವರಲ್ಲಿ 300 ಮಹಿಳಾ ಪ್ರತಿನಿಧಿಗಳು. ಚೀನಾ, ಕ್ಯೂಬಾ, ವಿಯೆಟ್ನಾಂ, ಗ್ರೀಸ್, ಜಪಾನ್, ಪೋರ್ಚುಗಲ್, ದಕ್ಷಿಣ ಆಫ್ರಿಕಾ, ಮತ್ತು ನೆರೆಯ ದೇಶಗಳಾದ ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಶ್ರೀಲಂಕಾ ದೇಶಗಳನ್ನು ಒಳಗೊಂಡಂತೆ ಒಟ್ಟು 27 ದೇಶಗಳ ಒಟ್ಟು 34 ಸಹೋದರ ಕಾರ್ಮಿಕ ಸಂಘಗಳಿಂದ ಸಮ್ಮೇಳನಕ್ಕೆ ಶುಭಕೋರುವ ಸಂದೇಶಗಳು ಬಂದಿದ್ದವು.

ಕಾರ್ಮಿಕ ವರ್ಗದ ಜವಾಬ್ದಾರಿ :

ಪ್ರತಿನಿಧಿಗಳ ಅಧಿವೇಶನ ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸುವ ನಿರ್ಣಯವನ್ನು ಅಂಗೀಕರಿಸಿ ಮೌನ ಆಚರಿಸುವುದರೊಂದಿಗೆ ಆರಂಭವಾಯಿತು. ಅನಂತರ ಸಿಐಟಿಯು ಪ್ರಧಾನ ಕಾರ್ಯದರ್ಶಿ ಕಾಂ. ತಪನ್‌ಸೇನ್ ಎರಡು ಭಾಗಗಳಲ್ಲಿ ಪ್ರಧಾನ ಕಾರ್ಯದರ್ಶಿ ವರದಿಯನ್ನು ಮಂಡಿಸಿದರು.

ವರದಿಯ ಮೊದಲ ಭಾಗದಲ್ಲಿ ದೇಶದ ರಾಜಕೀಯ ಹಾಗೂ ಆರ್ಥಿಕ ಪರಿಸ್ಥಿತಿ ಮತ್ತು

ಪುಟ 15 ಕ್ಕೆ




ಜನಶಕ್ತಿ
ಕನ್ನಡ ವಾರಪತ್ರಿಕೆ


ಎಡ ಪಕ್ಷಗಳ ಅಭ್ಯರ್ಥಿಗಳನ್ನು ಗೆಲ್ಲಿಸಿ


ಪುಟ 5 ರಿಂದ

ರೈತರ ಹೋರಾಟಗಳ ಮೂಲಕ, ಸಿಪಿಐ, ಸಿಪಿಐ(ಎಂ), ಕಾಂಗ್ರೆಸ್(ಯು) ಮತ್ತು ಬಂಗಾರಪ್ಪನವರ ಕರ್ನಾಟಕ ಕ್ರಾಂತಿ ದಳವನ್ನು ಒಳಗೊಂಡ ವೇದಿಕೆಯ ಅಡಿಯಲ್ಲಿ ಎಡಪಕ್ಷಗಳು ಮಧ್ಯಪ್ರವೇಶ ಮಾಡಿದವು. 1980-81 ರ ಹೋರಾಟಗಳಲ್ಲಿ ಜನತಾ ಪಕ್ಷ ಇರಲೇ ಇಲ್ಲ. ಆದರೆ ಜನ ಜನತಾ ಪಕ್ಷವನ್ನು ಕಾಂಗ್ರೆಸಿಗೆ ಪರ್ಯಾಯವಾಗಿ ಗುರುತಿಸಿದರು. ಜನತಾ ಪಕ್ಷವು ಸಿಪಿಐ(ಎಂ) ಮತ್ತು ಸಿಪಿಐನ 5 ಜನ ಶಾಸಕರ ಮತ್ತು ಬಿಜೆಪಿಯ ಕೆಲವು ಶಾಸಕರ ಬೆಂಬಲದೊಂದಿಗೆ 1983 ರಿಂದ 1989 ರ ವರೆಗೆ ಸರ್ಕಾರವನ್ನು ನಡೆಸಿತು.

ಹೀಗೆ 6 ವರ್ಷಗಳ ಕಾಲ ಅಧಿಕಾರದಿಂದ ಹೊರಗುಳಿದ ಕಾಂಗ್ರೆಸ್ ಮತ್ತೆ 1989 ಅಧಿಕಾರಕ್ಕೆ ಬಂತು. 1989 ರಿಂದ 1994 ಅ ಅವಧಿಯಲ್ಲಿ ಕಾಂಗ್ರೆಸಿನ 3 ಜನ ಮುಖ್ಯಮಂತ್ರಿಗಳಾದ್ದರು. ವಿರೇಂದ್ರ ಪಾಟೀಲ್, ಬಂಗಾರಪ್ಪ ಮತ್ತು ವೀರಪ್ಪಮೊಯ್ಲಿ. ಈ ಅವಧಿಯಲ್ಲಿ ಕಾಂಗ್ರೆಸ್ ಒಂದು ಜನಪರವಾದ ಆಡಳಿತವನ್ನು ಒದಗಿಸಲಿಲ್ಲ.







ಗುಂಡೂರಾವ್

1994 ಮತ್ತೊಮ್ಮೆ ಜನತಾ ಪಕ್ಷವನ್ನು ಅಧಿಕಾರಕ್ಕೆ ತರಲಾಯಿತು. ದೇವೆಗೌಡರು ಮುಖ್ಯಮಂತ್ರಿಯಾಗುವಲ್ಲಿ ಯಶಸ್ವಿಯಾದರು. ಆದರೆ ಮುಂದೆ ಬಹುಬೇಗನೆ ಪ್ರಧಾನಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. 1999 ರವರೆಗೆ ಜೆ.ಎಚ್. ಪಟೇಲರು ಮುಖ್ಯಮಂತ್ರಿಯಾಗಿದ್ದರು. ಆನಂತರ ಕಾಂಗ್ರೆಸ್ ಮರಳಿ ಅಧಿಕಾರಕ್ಕೆ ಬಂತು. ಅದರ ವೈಫಲ್ಯವೇ 2004 ರಲ್ಲಿ ತ್ರಿಶಂಕು ಶಾಸನ ಸಭೆಗೆ ಕಾರಣವಾಗಿ, ಧರ್ಮಸಿಂಗ್ ಮುಖ್ಯ ಮಂತ್ರಿಯಾಗಿ ಸಿದ್ಧಾಮಯ್ಯ ಉಪಮುಖ್ಯಮಂತ್ರಿಯಾಗಿ ಕಾಂಗ್ರೆಸ್-ಜನತಾದಳ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬರಲು ಕಾರಣವಾಯಿತು.

ಈ ನಡುವೆ ಜನತಾದಳ ಬೆಂಬಲ ಹಿಂತೆಗೆದುಕೊಂಡಾಗ ಧರ್ಮಸಿಂಗ್ ರಾಜೀನಾಮೆ ಕೊಡಬೇಕಾಯಿತು. ಅನಂತರ ಬಳ್ಳಾರಿ ಗಣಿ ಮಾಫಿಯಾ, ಭೂಮಾಫಿಯಾ ಹಾಗೂ ಇತರ ಮಾಫಿಯಾಗಳ ಪ್ರತ್ಯಕ್ಷ ಬೆಂಬಲದ ಕುಮಾರಸ್ವಾಮಿ-ಯಡಿಯೂರಪ್ಪ ಸರ್ಕಾರ ಅಧಿಕಾರವಹಿಸಿಕೊಂಡಿತಾ. ಇಪ್ಪತ್ತು-ಇಪ್ಪತ್ತರ ಪ್ರಯೋಗ ವಿಫಲವಾಯಿತು. ಕುಮಾರಸ್ವಾಮಿ ವಚನಭ್ರಷ್ಟ ಎಂಬ ಆರೋಪಕ್ಕೆ ಒಳಗಾಗುವಂತಾಯಿತು. ಯಡಿಯೂರಪ್ಪ ನಡೆಸಿದ ಪ್ರಚಾರದಿಂದಾಗಿ ಕುಮಾರಸ್ವಾಮಿ ಅಧಿಕಾರ ತೊರೆಯುವಂತಾಯಿತು. ನಂತರದ ಯಡಿಯೂರಪ್ಪ ಸರ್ಕಾರ ಬಹಳ ದಿನ ಬಾಳಲಿಲ್ಲ. 2009 ರಲ್ಲಿ ನಡೆದ ಮಧ್ಯಂತರ ಚುನಾವಣೆಯಲ್ಲಿ ಗೆದ್ದು ಬಂದ ಯಡಿಯೂರಪ್ಪ ಮತ್ತೆ ಮುಖ್ಯಮಂತ್ರಿಯಾದರು. ಅಗತ್ಯ ಬಹುಮತವನ್ನು ಗಿಟ್ಟಿಸಿಕೊಳ್ಳಲು 5 ಜನ ಸ್ವತಂತ್ರವಾಗಿ ಆಯ್ಕೆಯಾದ ಶಾಸಕರನ್ನು ಮತ್ತು 'ಅಪರೇಷನ್ ಕಮಲ' ಮೂಲಕ ಸೆಳೆಯಲಾದ ಶಾಸಕರನ್ನು ಹಿಡಿದಿಟ್ಟುಕೊಳ್ಳಲು ಭಾರೀ ಮೊತ್ತದ ಹಣವನ್ನು ವ್ಯಯ ಮಾಡಬೇಕಾಯಿತು. ಯಡಿಯೂರಪ್ಪ ಮಂತ್ರಿಮಂಡಲದಲ್ಲಿ ಸದಸ್ಯರಾಗಿದ್ದ ಲೂಟಿ-ಕೋರರು ಸರ್ಕಾರವನ್ನು ಸರಿಯಾಗಿ ನಡೆಸಲು ಬಿಡಲಿಲ್ಲ ಮಾತ್ರವಲ್ಲದೆ ಯಾವುದೇ ಕ್ಷಣದಲ್ಲಿ ಅದನ್ನು ಉರುಳಿಸುವ ಬೆದರಿಕೆಯನ್ನು ಒಡ್ಡುತ್ತಿದ್ದರು. ನೊಂದ ಜನತೆಯನ್ನು ಬೆದರಿಸಿ ಬಾಯಿಮುಚ್ಚಿಸಲಾಗುತ್ತಿತ್ತು. ಹಾವೇರಿಯಲ್ಲಿ ತಮ್ಮ ಬೇಡಿಕೆಗಳಿಗಾಗಿ ಬೀದಿಗಿಳಿದಿದ್ದ ರೈತರ ಮೇಲೆ ಗುಂಡುಹಾರಿಸಿ ಇಬ್ಬರು ರೈತರನ್ನು ಸಾಯಿಸಿ ಆನಂತ ಯಡಿಯೂರಪ್ಪ ಅವರ ಬಗ್ಗೆ ಮೊಸಳೆ ಕಣ್ಣೀರು ಸುರಿಸಿದರು. ರೈತರ ಸಮಸ್ಯೆಗಳು ಬಗೆಹರಿಯಲಿಲ್ಲ. ಅವರ ಆತ್ಮಹತ್ಯೆಗಳು ನಿಲ್ಲಲಿಲ್ಲ. ಈ ಅವಧಿಯಲ್ಲಿ ನಡೆದ ಅತ್ಯಂತ ದುಷ್ಟ ಕೃತ್ಯಗಳೆಂದರೆ ದವಣಗೆರೆಯಿಂದ ಆರಂಭಿಸಿ ನಂತರ ಮಂಗಳೂರು ಮತ್ತು ಮುಂದೆ ಇಡೀ ರಾಜ್ಯದಲ್ಲಿ ಚರ್ಚ್‌ಗಳ ಮೇಲೆ ಆರೆಸ್ಸೆಸ್ ಮತ್ತು ಸಂಘ ಪರಿವಾರ ನಡೆಸಿದ ದಾಳಿಗಳು. ಕೋಮು ಗಲಭೆಗಳ ಜತೆಯಲ್ಲಿ ಒಂದು ಕಡೆ ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚಾದರೆ ಇನ್ನೊಂದು ಕಡೆ ಯಡಿಯುರಪ್ಪ ಮತ್ತು ಅವರ ಕುಟುಂಬದವರ ಬೃಹತ್ ಭ್ರಷ್ಟಾಚಾರದ ಪ್ರಕರಣಗಳು ಬಯಲಿಗೆ ಬಂದವು. ಇದರ ಪರಿಣಾಮವಾಗಿ ರಾಜ್ಯ ಬಿಜೆಪಿಯ ಮೂವರು ಮುಖ್ಯಮಂತ್ರಿಗಳನ್ನು ಕಾಣುವಂತಾಯಿತು. ಯಡಿಯೂರಪ್ಪ ಒಂದರ ನಂತರ ಒಂದರಂತೆ ಅಸಿತ್ವಕ್ಕೆ ತಂದ ಕೈಗೊಂಬೆ ಸರ್ಕಾರಗಳು ಆತನ ತಾಳಕ್ಕೆ ತಕ್ಕಂತೆ ಕುಣಿಯದಾದವು. ಲೋಕಾಯುಕ್ತಕ್ಕೆ ತಡೆಯೊಡ್ಡಲಾಯಿತು. ಯಡಿಯೂರಪ್ಪ ಜೈಲಿಗೂ ಹೋಗುವಂತಾಯಿತು. ಬಿಜೆಪಿ ಶಾಸಕರು ಶಾಸನ ಸಭೆಯಲ್ಲಿ ಅಸಭ್ಯ ಚಿತ್ರಗಳನ್ನು ನೋಡುತ್ತಾ ಕುಳಿತಿರುವುದು ವರದಿಯಾಗುತ್ತಿದ್ದಂತೆ ಇಂತಹ ಸರ್ಕಾರವನ್ನು ಅಧಿಕಾರಕ್ಕೆ ತಂದ ತಪ್ಪಿಗಾಗಿ ರಾಜ್ಯದ ಜನತೆ ಮರಗುವಂತಾಯಿತು. ಕೊನರೆಗೂ 2013 ರ ಚುನವಣೆ ಘೋಷಣೆಯಾಯಿತು.

ಬಿಜೆಪಿಯ ಈ ಅಧಿಕಾರಾವಧಿಯಲ್ಲಿ, ಕಾಂಗ್ರೆಸ್ ಸಹ ಆದರ್ಶವಾಗಿ ನಡೆದುಕೊಳ್ಳಲಿಲ್ಲ. ಕಾಂಗ್ರೆಸ್ ಬಳ್ಳಾರಿ ವರೆಗೆ ಪಾದಯಾತ್ರೆಯೊಂದನ್ನು ನಡೆಸಿದರೂ, ಜನರ ಬೆಂಬಲ ದೊರೆಯಲಿಲ್ಲ. ಕಾರಣವೇನೆಂದರೆ, ಭ್ರಷ್ಟಾಚಾರದಲ್ಲಿ ಕಾಂಗ್ರೆಸ್ ಬಿಜೆಪಿಗಿಂತ ಕಡಿಮೆಯೇನೂ ಅಲ್ಲ ಎಂದು ಜನರಿಗೆ ತಿಳಿದಿತ್ತು. ಜನತಾದಳ ಕುಮಾರಸ್ವಾಮಿ ಸಹ ಯಡಿಯೂರಪ್ಪನಂತೆ ರೆಸಾರ್ಟ್ ರಾಜಕೀಯ ಮಾಡುವಲ್ಲಿ ಮಾತ್ರ ಯಶಸ್ವಿಯಾದರು. ಜೆಡಿಎಸ್ ಬಹುತೇಕವಾಗಿ ಅದೇ ವರ್ಗ ಮತ್ತು ಅದೇ ಲಾಭಿಗಳ ಮೇಲೆ ಅವಲಂಭಿಸಿ ರಾಮಕೃಷ್ಣ ಹೆಗಡೆ ಜೊತೆಯಲ್ಲಿದ್ದ ಸಿದ್ಧಾಮಯ್ಯ, ಪಿ.ಜಿ.ಆರ್. ಸಿಂಧಿಯಾ, ಮತ್ತು ಅದಕ್ಕೂ ಹಿಂದೆ ಆರ್.ವಿ. ದೇಶ್‌ಪಾಂಡೆ ಅಂತವರನ್ನು ಓಡಿಸಲಾಯಿತು. ಒಂದು ಕುಟುಂಬದ ಮುಖಂಡತ್ವವನ್ನು ಮಾತ್ರ ಉಳಿಸಿಕೊಳ್ಳಲಾಯಿತು. ಅಖಿಲ ಭಾರತ ಮಟ್ಟದಲ್ಲಿ ಕಾಂಗ್ರೆಸ್ ಲಕ್ಷಾಂತರ ಕೋಟಿ ರೂ.ಗಳ ಲೂಟಿ ಮಾಡುತ್ತಿದ್ದಾಗ ರಾಜ್ಯದಲ್ಲಿ ಎಸ್.ಎಂ. ಕೃಷ್ಣ ಅವರ ಮುಖಂಡತ್ವದಲ್ಲಿ ಸಾವಿರಾರು ಕೋಟಿ ರೂ.ಗಳನ್ನು ಲೂಟಿ ಮಾಡಿದರು. ಆನಂತರ ಯಡಿಯೂರಪ್ಪ ಎಸ್.ಎಂ. ಕೃಷ್ಣ ಮತ್ತು ಡಿ.ಕೆ. ಶಿವಕುಮಾರ್ ಮಟ್ಟಕ್ಕೆ ತಲುಪಲು ಪ್ರಯತ್ನಿಸಿದರು. ಹೀಗೆ ಯಡಿಯೂಪ್ಪ ನೇತೃತ್ವದ ಲಿಂಗಾಯತರ ಲಾಭಿ ಹಾಗೂ ಎಸ್.ಎಂ. ಕೃಷ್ಣ - ಡಿ.ಕೆ. ಶಿವಕುಮಾರ್ ನೇತೃತ್ವದ ಒಕ್ಕಲಿಗ ಲಾಭಿ ಒಂದೇ ಬಣ್ಣದ ಪಕ್ಕಿಗಳೆಂದು ಸಾಬೀತಾಯಿತು.

ಕಾಂಗ್ರೆಸ್ ಮತ್ತು ಬಿಜೆಪಿ ಜಾರಿಗೆ ತಂದ ಧೋರಣೆಗಳಾದರೂ ಯಾವುವು? ಅವುಗಳಲ್ಲಿ ಯಾವುಧೇ ವ್ಯತ್ಯಾಸವಿಲ್ಲ. ಕಾಂಗ್ರೆಸ್ ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ಧೋರಣೆಗಳನ್ನು ಜಾರಿಗೆ ತಂದಾಗ, ಕಾಂಗ್ರೆಸ್ ನಮ್ಮ ಧೋರಣೆಗಳನ್ನು ಕಳವು ಮಾಡಿದೆ ಎಂದು ಬಿಜೆಪಿ ಆರೋಪಿಸಿತ್ತು. ಕುಮಾರಸ್ವಾಮಿ, ತನಗೆ ಅವಕಾಶ ಸಿಕ್ಕಾಗಲೂ ಅದೇ ಎಲ್‌ಪಿಜಿ ನೀತಿಗಳನ್ನೇ ಜಾರಿಗೆ ತಂದರು.

ಕರ್ನಾಟಕದಲ್ಲಿ ಇಂದು 1983 ರ ಪರಿಸ್ಥಿತಿಗೆ ಸಮಾನವಾದ ಪರಿಸ್ಥಿತಿ ಇದೆ. ಬಿಜೆಪಿ, ಕಾಂಗ್ರೆಸನ್ನು ವಿರೋಧಿಸುವ ಹೆಸರಿನಲ್ಲಿ, ಮೊದಲು ಆಪರೇಷನ್ ಕಮಲ, ನಂತರ ರೆಸಾರ್ಟ್ ರಾಜಕಾರಣ ಮತ್ತು ಶಾಸಕರ ಖರೀದಿಯಂತಹ ಕ್ರಮಗಳಿಂದ ಪ್ರಜಾಪ್ರಭುತ್ವಕ್ಕೆ ಧಕ್ಕೆ ಉಂಟುಮಾಡಿ ಸಾಧಿಸಿದ್ದನ್ನು ಮಂತ್ರಿಗಳು ಜೈಲಿಗೆ ಹೋಗುವಂತಾಗಿ, ಸ್ವತಃ ಯಡಿಯೂರಪ್ಪನೇ ಪಕ್ಷ ತೊರೆದು, ಬಿಎಸ್‌ಆರ್ ಪಕ್ಷ ಎಲ್ಲವನ್ನು ಹಣಬಲದಿಂದ ಸ್ವಾಧಿನಪಡಿಸಿಕೊಳ್ಳಲು ಮುಂದಾಗಿ, ಈಗ ಸರ್ಕಾರ ರಚನೆ ಮಾಡಲು ಬೇಕಾಗುವ ಬಹುಮತವನ್ನು ಪಡೆಯಲು ಸಾಧ್ಯವಾಗದ ಹೀನಾಯ ಸ್ಥಿತಿ ತಲುಪುವಂತಾಯಿತು. ಇತ್ತೀಚೆಗೆ ನಡೆದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿಯೂ ಬಿಜೆಪಿ ಹೀನಾಯ ಸೋಲು ಅನುಭವಿಸಿದೆ. ದೇಶದಲ್ಲಿ ಎರಡು ಪಕ್ಷಗಳ ವ್ಯವಸ್ಥೆಯನ್ನು ಜಾರಿಗೆ ತರಲು ಉತ್ಸುಕವಾಗಿರುವ ಕಾಂಗ್ರೆಸಾಗಲಿ, ಅಥವಾ ಜೆಡಿಎಸ್ ಆಗಲಿ ಬಿಜೆಪಿಗೆ ಪರ್ಯಾಯ ಆಗಲಾರವು ಎಂದು ಸ್ಪಷ್ಟವಾಗಿದೆ. ಈ ಪ್ರಮುಖ ಪಕ್ಷಗಳಿಂದ ಭ್ರಮನಿರಸನಗೊಂಡ ... ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಅ... ಸ್ವತಂತ್ರ ಅಭ್ಯರ್ಥಿಗಳನ್ನು ಗೆಲ್ಲಿಸಿರುವುದ... ಕಾಣಬಹುದು.

ಆದ್ದರಿಂದ ಇಂದು ರಾಜ್ಯದ ರಾ... ಕಾರಣ ಕೂಡುರಸ್ತೆಗೆ ಒಂದು ನಿಂತಂತಾ... ಎಡ ಪಕ್ಷಗಳ ಬಳಿಯಲ್ಲಿ ಮಾತ್ರ ಪರ್ಯಾ... ಧೋರಣೆಗಳಿವೆ. ಎಡ ಪಕ್ಷಗಳು ಮ... ಜನತೆಯನ್ನು ಭಾಧಿಸುತ್ತಿರುವ ಪ್ರಶ್ನೆಗಳಿಗ... ಬೃಹತ್ ಹೋರಾಟಗಳನ್ನು ನಡೆಸುತವೆ. ಕ... ಫೆಬ್ರವರಿ 20-21 ರಂದು, ಬೆಲೆ ಏರಿಕೆ ವಿರು... ತಿಂಗಳಿಗೆ 10 ಸಾವಿರ ರೂ. ಕನಿಷ್ಠ ವೇತನಕ್ಕಾ... ಗುತ್ತಿಗೆ ಪದ್ಧತಿಯ ನಿರ್ಮೂಲನೆಗಾ... ಖಾಸಗೀಕರಣವನ್ನು ನಿಲ್ಲಿಸಿ ಸಾರ್ವಜ... ರಂಗವನ್ನು ಬಲಪಡಿಸುವುದಕ್ಕಾಗಿ, ಕಾಮಿ... ಕಾನೂನುಗಳ ಜಾರಿಗಾಗಿ, ಚಿಲ್ಲರೆ ವ್ಯಾಪಾರದ... ವಿದೇಶಿ ನೇರ ಬಂಡವಾಳವನ್ನು ವಿರೋಧ... ಸಾರ್ವಜನಿಕ ಪಡಿತರ ವ್ಯವಸ್ಥೆಯ... ಸಾರ್ವತ್ರೀಕರಣಗೊಳಿಸಿ ಅಗತ್ಯ ವಸ್ತುಗಳ... ರೇಷನ್ ಮೂಲಕ ವಿತರಿಸಲು ಒತ್ತಾಯಿ... ನಡೆದ ಸಾರ್ವತ್ರಿಕ ಮುಷ್ಕರ ಅಂತಹ ಇತ್ತೀಚ... ಉದಾಹರಣೆಯಾಗಿದೆ.

ತಮ್ಮದು ರೈತರ ಪರವಾದ ಸರ್ಕಾರವೆಂ... ಹೇಳಿ ಕೊಳ್ಳುತ್ತಿದ್ದ ಯಡಿಯೂರಪ್ಪ ಮ... ಬಿಜೆಪಿ ಅನುಸರಿಸಿದ ಧೋರಣೆಗಳಿಂದಾಗಿ ಕ... 5 ವರ್ಷದ ಅವಧಿಯಲ್ಲಿ 2000ಕ್ಕೂ ... ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಾಯಿ... 2009ರ ಮಳೆ ಮತ್ತು ನೆರೆ ಹಾವ... ತುತ್ತಾದ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸ... ಈ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಅ... ಗೋರಕ್ಷಣೆ ಇತ್ಯಾದಿಗಳ ಹೆಸರಿನಲ್ಲಿ ಹೆಚ್ಚ... ಕೋಮುಗಲಭೆಗಳನ್ನು ಉಂಟುಮಾಡುವುದ... ಆಸಕಿ ತೋರಿ -ದರು.

ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗ... ಶಿಕ್ಷಣರಂಗ, ವೈದ್ಯಕೀಯ ಸಂಸ್ಥೆ, ರಸ್ತೆಗ... ನದಿಗಳು, ನೀರು, ವಿದ್ಯುತ್ ಮೊದಲಾ... ರಂಗಗಳ ಖಾಸಗೀಕರಣಕ್ಕೆ ಬದ್ಧವೆಂ... ತೋರಿಸಿಕೊಟ್ಟಿವೆ. ಅಗತ್ಯ ವಸ್ತುಗಳ ಬೆಲೆಗಳ... ಇಳಿಸುವ ಬದಲಾಗಿ ಅವುಗಳನ್ನು ಮೇಲ್ಮಟ್ಟದ... ಇಡಲು ಈ ಎರಡು ಪಕ್ಷಗಳು ಸಹಮ... ಹೊಂದಿವೆ. ಭ್ರಷ್ಟಾಚಾರದ ವಿಷಯದಲ್ಲಿ ಎರಡೂ ಪಕ್ಷಗಳು ಪರಸ್ಪರ ಸ್ಪರ್ಧೆಯಲ್ಲಿವೆ.

ಕೇವಲ ಎಡ ಪಕ್ಷಗಳು ಮಾತ್ರ ಭಿನ್ನವಾ... ಧೋರಣೆಯನ್ನು ಹೊಂದಿವೆ. ಎಡ ಪಕ್ಷಗ... ಜನರ ರವಾಗಿ ನಿಂತು, ಉದಾರೀಕರ... ಜಾಗತೀಕರಣ, ಖಾಸಗೀಕರಣ ನೀತಿ... ವಿರುದ್ಧ ಶಾಸನ ಸಭೆ ಒಳಗೂ ಹಾ... ಹೊರಗೂ ಹೋರಾಡುತ್ತಿವೆ. ಪರ್ಯಾ... ಧೋರಣೆಗಳಿಗಾಗಿ ಜನಾಂದೋಲನವ... ಬಲಪಡಿಸಲು ಎಡ ಪಕ್ಷಗಳ ಅಭ್ಯರ್ಥಿಗಳಿ... ಮತನೀಡಿ ಅವರನ್ನು ವಿಜೇತರನ್ನಾಗಿಸಿ.


ಸಿಪಿಐ(ಎಂ) ಪಕ್ಷದ ಚುನಾವಣಾ ಪ್ರಚಾರ ಕಾರ್ಯಕ್ರಮಗಳು

ದೂರದರ್ಶನ(ಡಿ.ಡಿ.-1)

ದಿನಾಂಕ	ಸಮಯ	ಮುಖಂಡರ ಹೆಸರು
17-04-2013	7.35 ರಿಂದ 7.40 ವರೆಗೆ	ಎಸ್. ಪ್ರಸನ್ನ ಕುಮಾರ್
18-04-2013	7.50 ರಿಂದ 8.00 ವರೆಗೆ	ಎಸ್. ವರಲಕ್ಷ್ಮಿ
23-04-2013	7.25 ರಿಂದ 7.35 ವರೆಗೆ	ಜಿ.ಎನ್. ನಾಗರಾಜ್
27-04-2013	7.15 ರಿಂದ 7.25 ವರೆಗೆ	ಮಾರುತಿ ಮಾನ್ಪಡೆ
02-05-2013	7.15 ರಿಂದ 7.25 ವರೆಗೆ	ಜಿ.ವಿ. ಶ್ರೀರಾಮ ರೆಡ್ಡಿ
	ಆಕಾಶವಾಣಿ	
19-04-2013	7.45 ರಿಂದ 7.55 ವರೆಗೆ	ಕೆ.ಎಸ್. ಲಕ್ಷ್ಮಿ
25-04-2013	7.45 ರಿಂದ 8.00 ವರೆಗೆ	ನಿತ್ಯಾನಂದ ಸ್ವಾಮಿ
29-04-2013	9.16 ರಿಂದ 9.26 ವರೆಗೆ	ಯು. ಬಸವರಾಜು


ಜನಶಕ್ತಿ
ಕನ್ನಡ ವಾರಪತ್ರಿಕೆ

ನೊವಾರ್ಟಿಸ್ ತೀರ್ಪು: ಯುಪಿಎ ಪಾಠ ಕಲಿಯುತ್ತದೆಯೇ?



ವೇದರಾಜ ಎನ್.ಕೆ.

ಇತ್ತೀಚೆಗೆ ನೊವಾರ್ಟಿಸ್ ಔಷಧಿ ಕಂಪನಿಯ ಅರ್ಜಿಯನ್ನು ತಿರಸ್ಕರಿಸಿ ದೇಶದ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪು ಇಡೀ ದೇಶದ ಗಮನ ಸೆಳೆಯಿತು. ಯುಪಿಎ–2 ಸರಕಾರವೂ ಇದನ್ನು ಸ್ವಾಗತಿಸಿತು. ಆದರೆ 9 ವರ್ಷಗಳ ಹಿಂದೆ ಯುಪಿಎ–1 ಸರಕಾರ ತದ್ವಿರುದ್ಧ ನಿಲುವು ತಳೆದಿತ್ತು. ಆಗ ಎಡಪಕ್ಷಗಳು ಒತ್ತಡ ತರದಿರುತ್ತಿದ್ದರೆ ಅದೀಗ ಸ್ವಾಗತಿಸುತ್ತಿರುವ ತೀರ್ಪು ಬರುತ್ತಲೇ ಇರಲಿಲ್ಲ ಎಂಬುದನ್ನು ಮಾಚಲಾಗುತ್ತಿದೆ.




ಸ್ವಿಝರ್ಲೆಂಡ್ ಮೂಲದ ಬಹುರಾಷ್ಟ್ರೀಯ ಔಷಧಿ ಕಂಪೆನಿ ನೊವಾರ್ಟಿಸ್ ರಕ್ತ ಕ್ಯಾನ್ಸರ್ ಶುಶ್ರೂಷೆಗೆ ಗ್ಲಿವಾಕ್ ಎಂಬ ಔಷಧಿಯನ್ನು ತಯಾರಿಸುತ್ತದೆ. ಇದು ಬಹಳ ದುಬಾರಿ ಔಷಧಿ. ಇದನ್ನು ಸೇವಿಸಬೇಕಾದ ಒಬ್ಬ ರೋಗಿ ತಿಂಗಳಿಗೆ 1ಲಕ್ಷ ರೂ. ಖರ್ಚು ಮಾಡಬೇಕಾಗುತ್ತದೆ. ಸುಮಾರಾಗಿ ಜೀವನ ಪರ್ಯಂತ ತೆಗೆದುಕೊಳ್ಳಬೇಕಾದ ಔಷಧಿ ಇದು. ಇದೇ ಔಷಧಿಯನ್ನು ಭಾರತೀಯ ಔಷಧಿ ಕಂಪನಿಗಳೂ ಸಾರ್ವತ್ರಿಕ (ಜೆನೆರಿಕ್) ಔಷಧಿಯಾಗಿ ತಯಾರಿಸುತ್ತವೆ. ಇದ-ಕ್ಕೆ ತಗಲುವ ಖರ್ಚು ತಿಂಗಳಿಗೆ 10 ಸಾವಿರ ರೂ.ಗಳಷ್ಟು. ಇದು ತಾನು ಸಂಶೋಧಿಸಿದ ಔಷಧಿ, ತನಗೆ ಪೇಟೆಂಟ್ ಕೊಡಬೇಕು, ಈ ಮೂಲಕ ಬೇರೆ ಯಾರೂ ಇದನ್ನು ತಯಾರಿಸಿ ಮಾರಾಟ ಮಾಡಲು ಬಿಡಬಾರದು ಎಂಬುದು ನೊವಾರ್ಟಿಸ್ ವಾದ. ಅದ-ರೆ ನಮ್ಮ ದೇಶದ ಪೇಟೆಂಟ್ ಕಚೇರಿ ಈ ವಾದವನ್ನು ತಿರಸ್ಕರಿಸಿತು. ನೊವಾರ್ಟಿಸ್ ಚೆನ್ನೈನಲ್ಲಿರುವ ಬೌದ್ಧಿಕ ಆಸ್ತಿ ಹಕ್ಕು ಕಚೇರಿಗೆ ಅಪೀಲು ಹೋಯಿತು. ಅದೂ ಕೂಡ ಅರ್ಜಿಯನ್ನು ತಿರಸ್ಕರಿಸಿತು. ನೊವಾರ್ಟಿಸ್ ಅಲ್ಲಿಗೂ ಬಿಡದೆ ಸುಪ್ರಿಂ ಕೋರ್ಟಿಗೆ ಅಪೀಲು ಹೋಯಿತು. ಈಗ ಸುಪ್ರಿಂ ಕೋರ್ಟ್ ಕೂಡ ಅದನ್ನು ಕಟು ಟಿಪ್ಪಣಿಯೊಂದಿಗೆ ತಿರಸ್ಕರಿಸಿದೆ. ಕುಪಿತಗೊಂಡಿರುವ ನೊವಾರ್ಟಿಸ್ ತಾನು ಭಾರತದಲ್ಲಿ ಇನ್ನು ಮುಂದೆ ಸಂಶೋಧನೆಗೆ ಹಣ ತೊಡಗಿಸುವುದಿಲ್ಲ ಎಂದು ಬೆದರಿಸಿದೆ. ತಾನು ಮಾತ್ರವಲ್ಲ, ಬೇರೆ ಬಹುರಾಷ್ಟ್ರೀಯ ಕಂಪನಿಗಳೂ ಹಾಗೇ ಮಾಡುತ್ತವೆ ಎಂದು ಅಹಂಕಾರದ ಮಾತಾಡಿದೆ.

ಒಂಭತ್ತು ವರ್ಷಗಳ ಹಿಂದೆ, ಡಿಸೆಂಬರ್ 6, 2004 ರಂದು ಯುಪಿಎ–1 ಸರಕಾರ ಪೇಟೆಂಟ್ಸ್(ತಿದ್ದುಪಡಿ)ಸುಗ್ರೀವಾಜ್ಞೆ, 2004ನ್ನು ಜಾರಿಗೊಳಿಸಿತು. ಇದು ಭಾರತ 1994 ರಲ್ಲಿ ಎಡಪಕ್ಷಗಳ ನೇತೃತ್ವದ ವ್ಯಾಪಕ ವಿರೋಧವನ್ನು ದಮನ ಮಾಡಿ ವಿಶ್ವ ವ್ಯಾಪಾರ ಸಂಘಟನೆ(ಡಬ್ಲ್ಯುಟಿಒ)ಗೆ ಸಹಿ ಹಾಕಿದುದರ ಪರಿಣಾಮ. ಅದರ ಭಾಗವಾದ ಟ್ರಿಪ್ಸ್(ವ್ಯಾಪಾರ ಸಂಬಂಧಿತ ಬೌದ್ಧಿಕ ಆಸ್ತಿ ಹಕ್ಕುಗಳು) ಪ್ರಕಾರ ಭಾರತ ತನ್ನ 1970ರ ಪೇಟೆಂಟ್ ಕಾನೂನನ್ನು 2004ರೊಳಗೆ ಬದಲಿಸಬೇಕಾಗಿತ್ತು. ಈ ಸುಗ್ರೀವಾಜ್ಞೆ ಜಾರಿ ಮಾಡಿದ್ದು ಅದಕ್ಕಾಗಿಯೇ. ಇದು ಭಾರತದ ಆಳುವ ವರ್ಗಗಳು ಒಪ್ಪಿಕೊಂಡ ನವ-ಉದಾರವಾದಿ ಆರ್ಥಿಕ ಧೋರಣೆಗಳಿಗೆ ಅನುಗುಣವಾಗಿ ಬಹುರಾಷ್ಟ್ರೀಯ ಔಷಧಿ ಕಂಪನಿಗಳಿಗೆ ಅನುಕೂಲ ಕಲ್ಪಿಸುವಂತದ್ದಾಗಿತ್ತು. ತಮಾಷೆಯೆಂದರೆ ಇದು ಹಿಂದಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ರೂಪಿಸಿದ್ದ ಮಸೂದೆಯೇ ಆಗಿತ್ತು. ಇದರಿಂದಾಗಿ ಯುಪಿಎ–1 ಸರಕಾರ ಎಡಪಕ್ಷಗಳ ಬೆಂಬಲವನ್ನು ಅವಲಂಬಿಸಿದ್ದರೂ ಬಿಜೆಪಿ/ಎನ್‌ಡಿಎ ಬೆಂಬಲದಿಂದ ಈ ತಿದ್ದುಪಡಿಯನ್ನು ಪಾಸು ಮಾಡಿಸಿಕೊಳ್ಳಬಹುದು ಎಂದು ಬಗೆದಿತ್ತು.

ಆದರೆ ನಂತರ ನಡೆದ ರಾಜಕೀಯ ಬೆಳವಣಿಗೆಗಳಲ್ಲಿ ಬಿಜೆಪಿಗೆ ತನ್ನದೇ ಕರಡನ್ನು ಬೆಂಬಲಿಸುವುದು ಸಾಧ್ಯವಾಗಲಿಲ್ಲ. ಆದರೆ ಸುಗ್ರೀವಾಜ್ಞೆಯ ಆರು ತಿಂಗಳ ಅವಧಿ ಮುಗಿಯುವುದರಲ್ಲಿತ್ತು. ಮಸೂದೆ ಅಂಗೀಕಾರವಾಗಲೇ ಬೇಕಿತ್ತು. ಎಡಪಕ್ಷಗಳು ಇದನ್ನು ವಿರೋಧಿಸುತ್ತವೆ ಎಂದು ಗೊತ್ತಿದ್ದರೂ ಯುಪಿಎ–1 ಸರಕಾರ ಎಡಪಕ್ಷಗಳ ಬೆಂಬಲ ಕೇಳಿತು. ಎಡಪಕ್ಷಗಳು ಕೆಲವು ಮಹತ್ವದ ತಿದ್ದುಪಡಿಗಳನ್ನು ಸೇರಿಸಿದರೆ ಬೆಂಬಲಿಸುವುದಾಗಿ ಶರತ್ತು ಹಾಕಿದವು. ಕಾಂಗ್ರೆಸಿಗೆ ಇದು ಸ್ವೀಕಾರಾರ್ಹವಾಗಿರಲಿಲ್ಲ. ಆದರೂ ದೀರ್ಘ ಮಾತುಕತೆಗಳ ಮತ್ತು ಸಂಸತ್ತಿನ ಹೊರಗೆ ಸಾಮೂಹಿಕ ಸಂಘಟನೆಗಳ ಚಳುವಳಿಯ ಪರಿಣಾಮವಾಗಿ ಮಸೂದೆಯ ಜನ–ವಿರೋಧಿ ಸ್ವರೂಪವನ್ನು ಸಾಕಷ್ಟು ಬದಲಿಸುವ 12 ತಿದ್ದುಪಡಿಗಳನ್ನು ಯುಪಿಎ–1 ಸರಕಾರ ಒಪ್ಪಿಕೊಳ್ಳಲೇ ಬೇಕಾಗಿ ಬಂತು. ಇದರಲ್ಲಿ ಸುಪ್ರಿಂ ಕೋರ್ಟ್ ತನ್ನ ತೀರ್ಪಿನಲ್ಲಿ ಈಗ ಪ್ರಸ್ತಾಪಿಸಿರುವ ಸೆಕ್ಷನ್ 3(ಡಿ) ಪ್ರಮುಖವಾದದ್ದು. ನೊವಾರ್ಟಿಸ್ ಅರ್ಜಿ ತಿರಸ್ಕೃತಗೊಂಡಿರುವುದು ಇದರ ಪ್ರಕಾರವೇ.


ಬಹುರಾಷ್ಟ್ರೀಯ ಔಷಧಿ ಕಂಪನಿಗಳು ತಮ್ಮ ಪೇಟೆಂಟ್ ಹಕ್ಕುಗಳನ್ನು ಅದರ ಅವಧಿಯ ನಂತರವೂ ಮುಂದುವರೆಸಲು ಕೆಲವು ತಂತ್ರಗಳನ್ನು ಅನುಸರಿಸುತ್ತವೆ. ಅದನ್ನು 'ಎವರ್ ಗ್ರೀನಿಂಗ್' ಎನ್ನುತ್ತಾರೆ, ಅಂದ-ರೆ ಸದಾ ಹಸಿರಾಗಿರುವಂತೆ ಮಾಡುವುದು. ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿ ಅದು ಹೊಸ ಶೋಧನೆ ಎಂದು ಪೇಟೆ-ಂಟ್ ಮಾಡಿಸುತ್ತವೆ. ಇದನ್ನು ತಡೆಯಲು ಎಡಪಕ್ಷಗಳು ಸೂಚಿಸಿದ ತಿದ್ದುಪಡಿಯೇ ಈ ಸೆಕ್ಷನ್ 3(ಡಿ). ನೊವಾರ್ಟಿಸ್‌ನ ಈ ಔಷಧಿ ಅದು ಹಿಂದೆ ಪೇಟೆಂಟ್ ಮಾಡಿಸಿಕೊಂಡ ಔಷಧಿಗಿಂತ ಭಿನ್ನವೆಂದು ತೋರಿಸಲು ಶತಪ್ರಯತ್ನ ನಡೆಸಿದರೂ ಅದು ಹೊಸ ಶೋಧನೆಯೇನಲ್ಲ, ಆದ್ದರಿಂದ ಪೇಟೆಂಟಿಗೆ ಅರ್ಹವಲ್ಲ ಎಂಬ ಪೇಟೆಂಟ್ ಕಚೇರಿಯ ಅಭಿಪ್ರಾಯವನ್ನು ಸುಪ್ರಿಂಕೋರ್ಟ್ ಎತ್ತಿ ಹಿಡಿಯಿತು. ಸೆಕ್ಷನ್ 3(ಡಿ) ಯೇ ಸರಿಯಿಲ್ಲ ಎಂಬ ನೊವಾರ್ಟಿಸ್ ವಾದವನ್ನು ಸುಪ್ರಿಂ ಕೋರ್ಟ್ ತಿರಸ್ಕರಿಸಿತು. ಈ ಹಿಂದೆ ಇದು ಡಬ್ಲ್ಯುಟಿಒ ಸಂಧಿಯ ಉಲ್ಲಂಘನೆ ಎಂದು ನೊವಾರ್ಟಿಸ್ ವಾದಿಸಿಧಾಗ ಇದರ ಬಗ್ಗೆ ಈ ದೇಶದ ಕೋರ್ಟುಗಳು ಅಭಿಪ್ರಾಯ ಕೊಡುವುದಿಲ್ಲ, ಬೇಕಾದರೆ ಡಬ್ಲ್ಯುಟಿಒ ವಿವಾದ ಪರಿಹಾರ ವ್ಯವಸ್ಥೆಯನ್ನು ಕೇಳಿ ಎಂದು ಚೆನ್ನೈ ಹೈಕೋರ್ಟ್ ಹೇಳಿದ್ದರೂ ನೋವಾರ್ಟಿಸ್ ಅಲ್ಲಿಗೆ ಹೋಗದೆ, ನಮ್ಮ ಸುಪ್ರಿಂ ಕೋರ್ಟಿಗೇ ಅಪೀಲು ಹೋಯಿತು ಎಂಬುದು ಗಮನಾರ್ಹ.



ಈ ತೀರ್ಪಿನಿಂದ ಭಾರತದಲ್ಲಿ ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿರುವ 3ಲಕ್ಷ ಮಂದಿಗೆ ಪ್ರಯೋಜನವಾಗಿದೆ ಎನ್ನಲಾಗಿದೆ. ಆದರೆ ಈ ತೀರ್ಪಿನ ಮಹತ್ವ ಇಷ್ಟೇ ಅಲ್ಲ. ಸೆಕ್ಷನ್ 3(ಡಿ) ಇರದಿರುತ್ತಿದ್ದರೆ ಈ ತೀರ್ಪು ನೊವಾರ್ಟಿಸ್ ಪರವಾಗಿರುತಿತ್ತು, ಆಗ ಸೆಕ್ಷನ್ 3(ಡಿ) ಯ ಅಡಿಯಲ್ಲಿ ಈಗ ತಿರಸ್ಕೃತವಾಗಿರುವ ಇನ್ನಷ್ಟು ಔಷಧಿಗಳು ಪೇಟೆಂಟ್‌ಗೆ ಅರ್ಹವಾಗಿ ದುಬಾರಿಯಾಗಿ ಬಿಡುತ್ತಿದ್ದವು. ಕೆಲವು ಬಹುರಾಷ್ಟ್ರೀಯ ಕಂಪನಿಗಳು ಈ 3(ಡಿ)ಯಿಂದಾಗಿ ಪೇಟೆಂಟ್ ಅರ್ಜಿಯನ್ನೂ ಸಲ್ಲಿಸಿರಲಿಲ್ಲ. ಅವೂ ಅರ್ಜಿಸಲ್ಲಿಸಿ ಆ ಔಷಧಿಗಳೂ ದುಬಾರಿಯಾಗುತ್ತಿದ್ದವು. ಈ ತೀರ್ಪು ಅವಕ್ಕೆಲ್ಲ ಪೂರ್ಣ ವಿರಾಮ ಹಾಕಿದೆ. ಈ ಮೂಲಕ ಲಕ್ಷಾಂತರ ಭಾರತೀಯ ರೋಗಿಗಳಿಗೆ ಮಾತ್ರವಲ್ಲ, ಸಮಸ್ತ ಮೂರನೇ ಜಗತ್ತಿನ ದೇಶಗಳ ಕೋಟ್ಯಂತರ ಜನಗಳಿಗೆ ಪ್ರಯೋಜನವಾಗಿದೆ.

ನೊವಾರ್ಟಿಸ್ ಪೇಟೆಂಟ್ ಮಾಡಬಯಸುವ ಔಷಧಿಯ ರಾಸಾಯನಿಕ ಮೂಲ 'ಇಮತಿನಿಬ್' ಎಂಬುದು. ಬ್ರಯನ್ ಡ್ರುಕರ್ ಇದನ್ನು ಅಭಿವೃದ್ಧಿ ಪಡಿಸುವಲ್ಲಿ ಕೆಲಸ ಮಾಡಿದ ವಿಜ್ಞಾನಿಗಳಲ್ಲಿ ಒಬ್ಬರು. ಅವರನ್ನು ನಮ್ಮ ಸುಪ್ರಿಂ ಕೋರ್ಟ್ ತೀರ್ಪಿನ ಬಗ್ಗೆ ಕೇಳಿದಾಗ, 2007ರಲ್ಲಿ ಒಂದು ಲೇಖನದಲ್ಲಿ ಹೇಳಿದ ಈ ಮಾತುಗಳನ್ನು ಪುನರುಚ್ಚರಿಸಿದರು: "ಈ ಕೆಲಸಗಳಲ್ಲಿ ನಾನು ಜತೆಗೂಡಿ ಕೆಲಸ ಮಾಡಿರುವ ಎಲ್ಲ ವಿಜ್ಞಾನಿಗಳಲ್ಲದಿದ್ದರೂ, ಹೆಚ್ಚಿನವರು ಪ್ರಥಮತಃ ರೋಗಿಗಳಿಗೆ ನೆರವಾಗುವ ಒಂದು ಸಾಧನವಾಗಿ ಜ್ಞಾನಾರ್ಜನೆಯಲ್ಲಿ ತೊಡಗಿರುತ್ತಾರೆ. ಆದ್ದರಿಂದ ಬೆಲೆ ನಿರ್ಧಾರಣೆಯ ತಂತ್ರಗಳು ಮತ್ತು 'ಪೇಟೆಂಟ್ ಎವರ್‌ಗ್ರೀನಿಂಗ್'ನಂತಹ ಧೋರಣೆಗಳಿಂದಾಗಿ ತಮ್ಮ ಪ್ರಯತ್ನಗಳ ಫಲಿತಾಂಶಗಳು ರೋಗಿಗಳನ್ನು ತಲುಪದಂತಾಗುತ್ತದೆ, ಅವರ ಜೀವಗಳನ್ನು ಉಳಿಸಲಾಗುವುದಿಲ್ಲ ಎಂಬುದು ಈ ಹೆಚ್ಚಿನ

ಪುಟ 15 ಕ್ಕೆ



ಕೋಮಿಂಟಾಂಗ್ ಪಕ್ಷದಲ್ಲಿ ಕಮ್ಯುನಿಸ್ಟರು: ಮಿಲಿಟರಿ ಹಾಗೂ ರೈತ ತರಬೇತಿ ಸಂಸ್ಥೆಗಳ ಸ್ಥಾಪನೆ

ಜಿ.ಎನ್. ನಾಗರಾಜ್ 30

ಮಾವೋರವರು ಏಕಕಾಲಕ್ಕೆ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರೂ ಹಾಗೂ ಕೋಮಿಂಟಾಂಗ್ ಪಕ್ಷದ ಕಾರ್ಯಕಾರೀ ಸಮಿತಿಯ ಪರ್ಯಾಯ ಸದಸ್ಯರೂ ಆದರು. ಆದ್ದರಿಂದ ಅವರು ಶಾಂಘೈನಲ್ಲಿ ಇದ್ದು ಎರಡೂ ಪಕ್ಷಗಳ ನಡುವಣ ಸಂಯೋಜಕರಾಗಿ ಕೆಲಸ ಮಾಡುವ ಜವಾಬ್ದಾರಿ ವಹಿಸಲಾಯಿತು. ಕೋಮಿಂಟಾಂಗ್ ಪಕ್ಷದ ಸಂವಿಧಾನವನ್ನು ಬರೆಯುವ ಸಮಿತಿಯಲ್ಲಿಯೂ ಪ್ರಮುಖ ಕೆಲಸ ನಿರ್ವಹಿಸಿದ ಮೂರು ಕಮ್ಯುನಿಸ್ಟರಲ್ಲಿ ಮಾವೋರವರೂ ಒಬ್ಬರಾದರು.

ಅಂದಿನ ಪರಿಸ್ಥಿತಿಯಲ್ಲಿ ಇದು ಬಹಳ ಕ್ಲಿಷ್ಟಕರ ಕೆಲಸವಾಗಿತ್ತು. ಕೋಮಿಂಟಾಂಗ್ ಪಕ್ಷದಲ್ಲಿ 1911 ರ ಕ್ರಾಂತಿಯಲ್ಲಿ ನೇರವಾಗಿ ಭಾಗವಹಿಸಿದ ಒಬ್ಬ ಹಿರಿಯ ನಾಯಕರ ಜೊತೆ ಕೆಲಸ ಮಾಡಬೇಕಾಯಿತು. ಅವರು ಮಾವೋರವರು ಹೆಚ್ಚಿನ ಶಿಕ್ಷಣ ಹಂಬಲದಿಂದ ನುನಾನ್ ರಾಜ ಧಾನಿ ಚಾಂಗ್ ಶಾಕ್ಕೆ ಆಗಮಿಸಿದಾಗ ಓದಿದ ಮೊದಲ ಆಧುನಿಕ ಚಿಂತನೆಯ ಪತ್ರಿಕೆಯ ಸಂಪಾದಕರಾಗಿದ್ದವರು. ಮಾವೋರವರು ಅವರ ಬಗ್ಗೆ ಅಪಾರ ಗೌರವವನ್ನು ಇಟ್ಟಿದ್ದವರು. ಆದರೆ ಅವರು ರೈತ ಹಿನ್ನೆಲೆಯ ಮಾವೋರವರೂ ಸೇರಿದಂತೆ ಕೆಳ ವರ್ಗಗಳ ಬಗ್ಗೆ ತುಚ್ಛ ಮನೋಭಾವವನ್ನು ಪ್ರದರ್ಶಿಸುತ್ತಿದ್ದರು. ಒಂದು ಕಡೆ ಇಂತಹವರ ಅಸಡ್ಡೆಯ ಮನೋಭಾವದ ಜೊತೆ ಹೆಣಗಾಡುತ್ತಾ ಕೋಮಿಂಟಾಂಗ್ ಪಕ್ಷವನ್ನು ಸಾಮಾನ್ಯ ಜನರ ಬಳಿಗೆ ಕೊಂಡೊಯ್ದು ಅದನ್ನು ವಿಸ್ತರಿಸಬೇಕು. ಹಾಗೂ ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆಗೆ ನೆರವಾಗಬೇಕು. ಮತ್ತೊಂದು ಕಡೆ ಈ ಡಂಬಾಚಾರದ ಉಚ್ಛ ವರ್ಗಗಳ ವರ್ತನೆಯ ಬಗ್ಗೆ ತಿರಸ್ಕಾರದ ಮನೋಭಾವದಿಂದ ಕೂಡಿದ್ದ, ಈ ಬಂಡವಾಳಶಾಹೀ ಪಕ್ಷದೊಡನೆ ಯಾವ ಸಂಬಂಧವೂ ಬೇಡವೆನ್ನುತ್ತಿದ್ದ ಕಮ್ಯುನಿಸ್ಟ್ ಪಕ್ಷದ ಎಡ ಪ್ರತ್ಯೇಕತಾವಾದಿಗಳೊಡನೆ ಗುದ್ದಾಡಬೇಕು. ಇವರಂತೂ ಮಾವೋರವರನ್ನು ಕೋಮಿಂಟಾಂಗ್ ಹಿರಿಯರ ಆಪ್ತ ಸಹಾಯಕನೆಂದು ಕೀಟಲೆ ಮಾಡುತ್ತಿದ್ದರು. ಚಳುವಳಿಯ ಹಿತ ದೃಷ್ಟಿಯಿಂದ ಇವನ್ನೆಲ್ಲ ಸಹಿಸಿಕೊಂಡು ಹಗಲಿರುಳೂ ಶ್ರಮಿಸಬೇಕಾಯಿತು.

ಮಿಲಿಟರಿ ಅಕಾಡೆಮಿಯ ಸ್ಥಾಪನೆ

1911 ರಲ್ಲಿಯೇ ಕಾಂತಿಯ ಮೂಲಕ ಚೀನೀ ಸಾಮ್ರಾಟರನ್ನು ಕಿತ್ತು ಹಾಕಿದರೂ ಯುದ್ಧಕೋರ ಪಾಳೆಯಗಾರರ ಹಿಡಿತ-ಕ್ಕೆ ತುತ್ತಾಗಿ ಪ್ರಜಾಪ್ರಭುತ್ವವನ್ನು ಸ್ಥಾಪನೆ ಮಾಡಲಾಗದ ಪರಿಸ್ಥಿತಿಯ ಬಗ್ಗೆ ಓದುಗರಿಗೆ ತಿಳಿದೆ ಇದೆ. ಇದನ್ನು ವಿಶ್ಲೇಷಿಸಿದ ರಷ್ಯನ್ ಕಮ್ಯುನಿಸ್ಟ್ ಪಕ್ಷ ಒಂದು ಕ್ರಾಂತಿಕಾರೀ ಸೈನ್ಯವಿಲ್ಲದೆ ಈ ಯುದ್ಧಕೋರರರನ್ನು ಮಣಿಸಲಾಗುವುದಿಲ್ಲವೆಂದು ಸನ್ ಯಾತ್ ಸೇನ್ ರವರಿಗೆ ಸಲಹೆ ನೀಡಿತು.


ಚೌ ಎನ್ ಲಾಯ್

ಈ ಉದ್ದೇಶದಿಂದ ಒಂದು ಮಿಲಿಟರಿ ಅಕಾಡೆಮಿಯನ್ನು ಸ್ಥಾಪಿಸಲು ನೆರವು ನೀಡಿತು. ಕ್ಯಾಂಟನ್ ನಗರದ (ಈಗ ಗ್ವಾ-ಂಗ್ ಝೌ ನಗರ) ಬಳಿಯ ಹುವಾಂಗ್ ಪು ಪ್ರದೇಶದಲ್ಲಿ ಒಂದು ಸೈನಿಕ ತರಬೇತಿ ಶಾಲೆಯನ್ನು ಆರಂಭಿಸಲಾಯಿತು. ಇದರ ಮುಖ್ಯಸ್ಥರಾಗಿ ಕೆಲಸ ನಿರ್ವಹಿಸಲು ಗುರುತಿಸಲ್ಪಟ್ಟ ಕೋಮಿಂಟಾಂಗ್ ಪಕ್ಷದ ಚಿಯಾಂಗ್ ಕೈ ಷೇಕ್ ರವರಿಗೆ ರಷ್ಯಾದಲ್ಲಿ ತರಬೇತಿ ನೀಡಲಾಯಿತು ಮಾತ್ರವಲ್ಲ 30 ಕ್ಕೂ ಹೆಚ್ಚು ರಷ್ಯನ್ ಕೆಂಪು ಸೈನ್ಯದ ಸೇನಾಧಿಕಾರಿಗಳು ಈ ಶಾಲೆಯಲ್ಲಿ ತರಬೇತಿ ನೀಡಲು ನಿಯೋಜಿಸಲ್ಪಟ್ಟರು. ಚಿಯಾಂಗ್ ಕೈ ಷೇಕ್ ಈ ಅಕಾಡೆಮಿಯ ಅಧ್ಯಕ್ಷರೆಂದು ನೇಮಕವಾದರೆ ಅದೇ ತಾನೇ ಫ್ರಾನ್ಸ್ ದೇಶದಿಂದ ಹಿಂದಿರುಗಿ ಈ ಪ್ರದೇಶದ ಕಮ್ಯುನಿಸ್ಟ್ ಪಕ್ಷದ ಘಟಕದ ಕಾರ್ಯದರ್ಶಿಯಗಿದ್ದ ಚೌ ಎನ್ ಲಾಯ್ ರವರು ಇದರ ರಾಜಕೀಯ ನಿರ್ದೇಶಕರಾದರು. ಈ ಮಿಲಿಟರಿ ಶಾಲೆಗೆ ಸೇರಿ ತರಬೇತಿ ಪಡೆದವರಲ್ಲಿ ಅನೇಕರು ಕಮ್ಯುನಿಸ್ಟ್ ಸದಸ್ಯರು, ಸಮಾಜವಾದೀ ಯುವದಳದ ಸದಸ್ಯರೂ ಆಗಿದ್ದರು.

ಈ ಶಾಲೆ ಯುದ್ಧಕೋರರ ಆಕ್ರಮಣದ ವಿರುದ್ಧ ಸೆಣಸಿ ಕೋಮಿಂಟಾಂಗ್ ಪಕ್ಷದ ಹಿಡಿತದಲ್ಲಿದ್ದ ಪ್ರದೇಶಗಳನ್ನು, ಅಲ್ಲಿಯ ಸರ್ಕಾರವನ್ನು ರಕ್ಷಿಸಿಕೊಳ್ಳುವುದಲ್ಲದೆ ಮುಂದೆ ಯುದ್ಧಕೋರ ಪಾಳೆಯಗಾರರ ಮೇಲೆ ಯುದ್ಧ ಸಾರಿ ಚೀನಾವನ್ನು ಒಂದುಗೂಡಿಸಲು ಪ್ರಯತ್ನ ಮಾಡಲು ಸಾಧ್ಯವಾಯಿತು.

ರೈತ ಸಂಘಟನೆ ಹಾಗೂ ತರಬೇತಿ ಸಂಸ್ಥೆಯ ಸ್ಥಾಪನೆ.

ಕೋಮಿಂಟಾಂಗ್-ಕಮ್ಯುನಿಸ್ಟ್ ಮೈತ್ರಿ ಏರ್ಪಡುವಷ್ಟರಲ್ಲಾಗಲೇ ಕೋಮಿಂಟಾಂಗ್ ಪಕ್ಷದ ಪ್ರಭಾವ ವಲಯದ ಗ್ವಾಂಗ್ ಡಾಂಗ್ ಪ್ರದೇಶದಲ್ಲಿ ರೈತ ಚಳುವಳಿ ಆರಂಭವಾಗಿತ್ತು. ಪೆಂಗ್ ಪೈ ಎಂಬ ಜಪಾನಿನಲ್ಲಿ ವಿದ್ಯಾಭ್ಯಾಸ ಮಾಡಿ ಹಿಂದಿರುಗಿ ಮೇ ನಾಲ್ಕರ ಚಳುವಳಿಯ ಪ್ರಭಾವದಲ್ಲಿ ಕಮ್ಯುನಿಸ್ಟನಾಗಿದ್ದ ದೊಡ್ಡ ಭೂಮಾಲಕರ ಕುಟುಂಬಕ್ಕೆ ಸೇರಿದ ಯುವಕನೊಬ್ಬ ತನ್ನ ಕುಟುಂಬ ಹಾಗೂ ಮೂಲ ವರ್ಗದ ವಿರುದ್ಧ ಸಿಡಿದೆದ್ದು ತನ್ನ ಕುಟುಂಬದ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದ 1,400 ಗೇಣೀದಾರರಿಗೆ ಹಂಚಿಬಿಟ್ಟಿದ್ದ. 1921 ರ ವೇಳೆಗೆ ಆ ಪ್ರದೇಶದಲ್ಲಿ ಭೂಮಾಲಕರ ಅಮಾನವೀಯ ಹಿಂಸೆ, ದಬ್ಬಾಳಿಕೆ, ಗೇಣಿಯ ವಿಪರಿತ ಹೊರೆಯ ವಿರುದ್ಧ ರೈತರನ್ನು ಸಂಘಟಿಸಲು ಆರಂಭಿಸಿದ್ದ. ಈ ಪ್ರಯತ್ನಗಳ ಫಲವಾಗಿ 1923 ರ ವೇಳೆಗೆ ತಾಲುಕಾ ಮಟ್ಟದ ರೈತ ಸಂಘ ಸ್ಥಾಪನೆಯಾಗಿತ್ತು. ಭೂಮಾಲಕರ ಕ್ರೂರ ದಬ್ಬಾಳಿಕೆ, ಧಾಳಿಗಳನ್ನು ಎದುರಿಸಲು ರೈತ ಸ್ವಯಂ ಸೇವಕರ ಪಡೆಯನ್ನೂ ರೂಪಿಸಿಕೊಂಡಿದ್ದರು.

ರೈತರ ಬೆಂಬಲವಿಲ್ಲದೆ, ಅವರು ದೊಡ್ಡ ಪ್ರಮಾಣದಲ್ಲಿ ಸೈನ್ಯಕ್ಕೆ ಸೇರದೆ ಯುದ್ಧಕೋರರರನ್ನು ಅಡಗಿಸಲಾಗದೆಂದು ಕೋಮಿಂಟಾಂಗ್ ಪಕ್ಷದ ಅಧಿವೇಶನದಲ್ಲಿಯೇ 1924ರಲ್ಲಿ ರೈತ ವಿಭಾಗವೊಂದನ್ನು ಆರಂಭಿಸಲಾಗಿತ್ತು. ಕೆಲವೇ ತಿಂಗಳುಗಳಲ್ಲಿ ಈ ವಿಭಾಗ [illegible] ಒಂದು ರಾಷ್ಟ್ರೀಯ ರೈತ ತರಬೇತಿ ಸಂಸ್ಥೆಯಾಗಿ ಮಾರ್ಪಡಿಸಲಾಯಿತು. ಮೊದಮೊದಲು ಈ ಸಂಸ್ಥೆಗೆ ಗ್ವಾಂಗ್ ಡಾಂಗ್ ಪ್ರದೇಶದ ರೈತರೇ ತರಬೇತಿ[illegible] ಬಂದರೂ ನಂತರ ಮಾವೋರವರ [illegible] ಪ್ರವೇಶದೊಂದಿಗೆ ಹುನಾನ್ ಮೊದಲ[illegible] ಇತರ ರಾಜ್ಯಗಳ ರೈತರನ್ನೂ ತರಬೇತಿ[illegible] ಆರಿಸಲಾಯಿತು. ಒಂದೆರಡು ವರ್ಷಗ[illegible] ಚೀನಾದ 21 ರಾಜ್ಯಗಳ ರೈತ ಕಾರ್ಯಕ[illegible] ತರಬೇತಿ ನೀಡಲಾಯಿತು.

ಈ ಸಂಸ್ಥೆಯ ತರಬೇತಿ ಕೇವಲ [illegible] ದಿನಗಳ ತರಬೇತಿಯಾಗಿರಲಿಲ್ಲ. ಮೂ[illegible] ತಿಂಗಳ ತರಬೇತಿಯಾಗಿ ಆರಂಭವಾ[illegible] ನಂತರ ಆರು ತಿಂಗಳ ತರಬೇತಿಯಾ[illegible] ಪರಿವರ್ತನೆಯಾಯಿತು. ಆರಂಭದಲ್ಲಿ [illegible] ಪೆಂಗ್ ಪೈ, ಚೌ ಎನ್ ಲಾಯ್ ತರಗತಿಗಳನ್ನು ನಡೆಸುತ್ತಿದ್ದರು. ನಂತ[illegible] ಮಾವೋರವರೂ ಸೇರಿ 15 ಜನ ಶಿಕ್ಷ[illegible] ತರಬೇತಿ ನೀಡುತ್ತಿದ್ದರು. ಮೂರರಿಂದ [illegible] ನಾಲ್ಕು ಗಂಟೆಗಳ ಕಾಲದ 250 ಕ್ಕೂ [illegible] ಹೆಚ್ಚು ತರಗತಿಗಳನ್ನು ನಡೆಸಲಾಗುತ್ತಿ[illegible] ಪೆಂಗ್ ಪೈ ರೈತ ಸಂಘಗಳ ಆರಂಭ, ಅವುಗಳ ಹೋರಾಟದ ಸ್ವರೂಪಗಳ ಬಗ್ಗೆ ಪಾಠ ಮಾಡಿದರೆ, ಮಾವೋ ರೈತರ ಸಮಸ್ಯೆಗಳು, ಹಳ್ಳಿಗಾಡಿನ ಶಿಕ್ಷ[illegible] ಆರೋಗ್ಯ ಮತ್ತು ಚೊಕ್ಕಟವಾಗಿರುವು[illegible] ಬಗ್ಗೆ, ದೈಹಿಕ ವ್ಯಾಯಾಮಗಳು, ಗ್ರಾ[illegible] ಸಮಾಜದ ಅಧ್ಯಯನ ಇವುಗಳ ಬಗ[illegible] ಚೌ ಎನ್ ಲಾಯ್ ರವರು ಮಿಲಿಟ[illegible] ಅಂಶಗಳು ಹಾಗು ತಂತ್ರಗಳ ಬಗ್ಗೆ ತ[illegible] ನೀಡುತ್ತಿದ್ದರು. ಪುಸ್ತಕಗಳು, ಪತ್ರಿಕೆಗಳ [illegible] ಅಧ್ಯಯನ ಹಾಗೂ ಚರ್ಚೆ ಗ್ರಾಮೀಣ[illegible] ಅಧ್ಯಯನ ಮಾಡಿ ಕಲೆ ಹಾಕಿದ ಮಾ[illegible] ಹಾಗೂ ಅದರ ಫಲಿತಾಂಶಗಳ ಬಗ್ಗೆ ನಡೆಸಲಾಗುತ್ತಿತ್ತು.

ಈ ತರಬೇತಿ ಗ್ವಾಂಗ್ ಡಾಂಗ್ ಪ್ರದೇಶದಲ್ಲಿ ರೈತ ಚಳುವಳಿಯನ್ನು ಪ್ರಬಲವಾಗಿ ಬೆಳೆಸಲು ದೊಡ್ಡ ಕಾಣಿಕೆ [illegible] ನೀಡಿ ಆ ಮೂಲಕ ಕೋಮಿಂಟಾಂಗ್ [illegible] ಸರ್ಕಾರವನ್ನು ರಕ್ಷಿಸಿಕೊಳ್ಳಲು ನೆರವಾ[illegible] ಹಾಗೆಯೇ ಇಡೀ ಚೀನಾದಲ್ಲಿ ರೈತ ಚಳುವಳಿ ಹಬ್ಬಲು ಕಾರಣವಾಯಿತು. ಮೊದಲ ರಾಷ್ಟ್ರ ಮಟ್ಟದ ರೈತ ಸಮ್ಮ[illegible] ನಡೆಸಲು ಕೊಡುಗೆ ನೀಡಿತು. ಮುಂದ[illegible] ಎಲ್ಲ ಕ್ರಾಂತಿಕಾರೀ ಹೋರಾಟ ಯು[illegible] ಈ ಸಂಸ್ಥೆಯಲ್ಲಿ ತರಬೇತಿ ಪಡೆದವ[illegible] ಚಿರಸ್ಮರಣೀಯವಾದುದು.

ನೊವಾರ್ಟಿಸ್ ತೀರ್ಪು...

ಪುಟ 13 ರಿಂದ

ವಿಜ್ಞಾನಿಗಳಿಗೆ ಆತಂಕದ ಸಂಗತಿ."

ಆದರೂ ಪೇಟೆಂಟ್‌ಧಾರಕರ ಹಕ್ಕುಗಳನ್ನು ಮತ್ತು ಕೈಗೆಟಕುವ ಶುಶ್ರೂಷೆ ಪಡೆಯುವ ಭಾರತೀಯ ಜನತೆಯ ಹಕ್ಕಿನ ನಡುವೆ ಸಮತೋಲ ತರಲು ಪ್ರಯತ್ನಿಸಿರುವ ನಮ್ಮ ದೇಶದ ಕಾನೂನನ್ನು ಅನುಸರಿಸಿದರೆ ಈ ನೊವಾರ್ಟಿಸ್‌ನಂತವರು ಏಕೆ ಆಕ್ಷೇಪಿಸಬೇಕು ಎಂದು ನಮ್ಮ ಯುಪಿಎ-2 ವಾಣಿಜ್ಯ ಮಂತ್ರಿಗಳಿಗೆ ಬೇಸರವಾಗಿದೆಯಂತೆ. ನಿಮ್ಮ ಸರಕಾರ ಅಪ್ಪಿಕೊಂಡಿರುವ ನವ-ಉದಾರವಾದ ಎಂದರೆ ಇದೇ ತಾನೇ- 'ಜನತೆಗಿಂತ ಮೊದಲು ಲಾಭ'. ಅಷ್ಟಕ್ಕೂ ನಿಮ್ಮ ಸರಕಾರ ಬಿಜೆಪಿಯೊಂದಿಗೆ ಶಾಮೀಲಾಗಿ ಅವರಿಗೆ ಬೇಕಾದ ಕಾನೂನನ್ನೇ ತರಲು ಹೊರಟಿತ್ತಲ್ಲ! ಹೇಗೋ ಎಡಪಕ್ಷಗಳಿಗೆ ಮಧ್ಯಪ್ರವೇಶಿಸುವ ಅವಕಾಶ ದೊರೆತು, ಈ ಮಟ್ಟಿಗಾದರೂ 'ಲಾಭಕ್ಕಿಂತ ಜನತೆ ಮುಖ್ಯ' ಎಂಬ ತತ್ವದ ಕೈಮೇಲಾಯಿತಲ್ಲ ಎಂಬ ಈ ಬೇಸರ ಹೆಚ್ಚು 'ಸಹಜ' ಎಂದು ನಿಮ್ಮ ಬಹಳಷ್ಟು ಸಹಯೋಗಿಗಳಿಗೂ ಅನಿಸಿರಬಹುದು!

ಈಗ ಸಕ್ಕರೆ ಲಾಬ್ಬಿಯ ಲೂಟಿಗೆ ಆಹ್ವಾನ

ಕಾರ್ಪೊರೇಟ್‌ಗಳ ಲಾಭಕೋರತನಕ್ಕೆ ಮಣೆ ಹಾಕುವ ಯುಪಿಎ-2 ಸರಕಾರದ ನವ-ಉದಾರವಾದಿ ಧೋರಣೆ ಇನ್ನು ಸಕ್ಕರೆ ಬೆಲೆಗಳನ್ನು ಗಗನಕ್ಕೇರಿಸಲಿದೆ. ಭಾಗಶಃ ನಿಯಂತ್ರಣ ತೆಗೆಯುವ ಹೆಸರಿನಲ್ಲಿ ಅದೀಗ ಕಾರ್ಪೊರೇಟ್ ಸಕ್ಕರೆ ಮಿಲ್ಲುಗಳ ಲಾಭಕೋರತನಕ್ಕೆ ಮುಕ್ತ ಅವಕಾಶ ಕಲ್ಪಿಸುವ ಕ್ರಮಗಳನ್ನು ಪ್ರಕಟಿಸಿದೆ. ಲೆವಿ ಸಕ್ಕರೆಯ ವಸೂಲಿ ಮತ್ತು 'ನಿಯಂತ್ರಿತ ಬಿಡುಗಡೆ' ವ್ಯವಸ್ಥೆಯನ್ನು ರದ್ದು ಮಾಡಲಾಗಿದೆ.

ಇದುವರೆಗೆ ಸಕ್ಕರೆ ಮಿಲ್ಲುಗಳು ತಮ್ಮ ಉತ್ಪಾದನೆಯ 10ಶೇ.ವನ್ನು ಸರಕಾರಕ್ಕೆ ಮಾರುಕಟ್ಟೆ ಬೆಲೆಗಿಂತ ಕಡಿಮೆ ದರದಲ್ಲಿ ಮಾರಬೇಕಾಗಿತ್ತು. ಇದು ಪಡಿತರ ವ್ಯವಸ್ಥೆಯಲ್ಲಿ ಬಡವರಿಗೆ ಸಕ್ಕರೆಯನ್ನು ಹಂಚಲಿಕ್ಕಾಗಿ. ಇನ್ನು ಮುಂದೆ ಸಕ್ಕರೆ ಮಿಲ್ಲುಗಳಿಗೆ ಈ 'ಬಂಧನ' ಇರುವುದಿಲ್ಲ. ಲೆವಿ ಸಕ್ಕರೆಯ ಮೇಲೆ ಇದು ವರೆಗೆ ಕೆ.ಜಿ.ಗೆ 19.50ರೂ. ಪಡೆಯುತ್ತಿದ್ದ ಸಕ್ಕರೆ ಮಿಲ್ಲುಗಳು ಇನ್ನು ಮುಂದೆ 32 ರೂ. ಪಡೆಯುತ್ತವೆ. ಸಕ್ಕರೆ ಬೆಲೆ ಏರಿದರೆ ಇನ್ನೂ ಹೆಚ್ಚು ಪಡೆಯುತ್ತವೆ. ರಾಜ್ಯ ಸರಕಾರಗಳು ಬಹಿರಂಗ ಮಾರುಕಟ್ಟೆಯಿಂದ ಸ್ಪರ್ಧಾತ್ಮಕ ಹರಾಜಿನಲ್ಲಿ ಅದನ್ನು ಖರೀದಿಸಿ ಪಡಿತರ ವ್ಯವಸ್ಥೆಯ ಮೂಲಕ 13.50ರೂ. ದರದಲ್ಲಿ ಹಂಚಬೇಕು. ಬಹಿರಂಗ ಮಾರುಕಟ್ಟೆ ಬೆಲೆ ಮತ್ತು ಪಡಿತರ ಬೆಲೆಯಲ್ಲಿನ ಈಗಿರುವ ವ್ಯತ್ಯಾಸವನ್ನು ಕೇಂದ್ರ ಸರಕಾರ ವಹಿಸಿಕೊಳ್ಳುವುದಾಗಿ ಹೇಳಿಕೊಂಡಿದೆ. ಅಂದರೆ ಸರಕಾರೀ ಖಜಾನೆಯಿಂದ ಸಕ್ಕರೆ ಲಾಬ್ಬಿಗೆ 'ನೇರ ನಗದು ವರ್ಗಾವಣೆ'! ಮಾರುಕಟ್ಟೆ ಬೆಲೆಗಳು ಏರಿದರೆ ಅದರ ಹೊರೆ ರಾಜ್ಯ ಸರಕಾರಗಳ ಮೇಲೆ. ಆಗಲೇ 24 ಗಂಟೆಗಳೊಳಗೆ ಸಕ್ಕರೆ ಮಾರುಕಟ್ಟೆ ಬೆಲೆಯಲ್ಲಿ ಕ್ವಿಂಟಾಲಿಗೆ 50ರೂ. ಏರಿದೆ. ಲಾಭಕೋರತನಕ್ಕೆ ಸರಕಾರವೇ ಮಣೆ ಹಾಕುತ್ತಿರುವಾಗ ಅದು ಇನ್ನಷ್ಟು ಏರಲಿದೆ.

ಇನ್ನೊಂದು ಕ್ರಮ :

ಈಗಿರುವ ನಿಯಂತ್ರಿತ ಬಿಡುಗಡೆ ವ್ಯವಸ್ಥೆಯ ಪ್ರಕಾರ ಸಕ್ಕರೆ ಮಿಲ್ಲುಗಳು ನಿರ್ದಿಷ್ಟ ಸಮಯ ಚೌಕಟ್ಟಿನಲ್ಲಿ ಒಂದು ನಿರ್ದಿಷ್ಟ ಪ್ರಮಾಣದ ಸಕ್ಕರೆಯನ್ನು ಬಿಡುಗಡೆ ಮಾಡಬೇಕು. ಸಕ್ಕರೆ ಮಿಲ್ಲುಗಳು ಕೃತಕವಾಗಿ ಅಭಾವವನ್ನು ಸೃಷ್ಟಿಸಿ ಬೆಲೆಗಳನ್ನು ಏರಿಸದಂತೆ ತಡೆಯುವ ವ್ಯವಸ್ಥೆ ಇದಾಗಿತ್ತು. ಈಗ ಇದನ್ನು ರದ್ದು ಮಾಡಿ ಆಮೂಲಕವೂ ಸಕ್ಕರೆ ದೊರೆಗಳಿಗೆ ಮುಕ್ತ ಅವಕಾಶ ಒದಗಿಸಲಾಗಿದೆ. ಅವರು ಕೃತಕ ಕೊರತೆ ಸೃಷ್ಟಿಸಿ ಸಕ್ಕರೆ ಬೆಲೆಗಳನ್ನು ಏರಿಸಬಹುದು, ಅತ್ತ ದಾಸ್ತಾನುಗಳನ್ನು ತಂದು ಸುರಿದು ರೈತರ ಕಬ್ಬಿಗೆ ಸರಿಯಾದ ಬೆಲೆ ಸಿಗದಂತೆಯೂ ಮಾಡಬಹುದು.

ರೈತರ, ಬಳಕೆದಾರರ ಮತ್ತು ಸಹಕಾರಿ ವಲಯದ ಹಿತಗಳನ್ನು ಬಲಿಗೊಟ್ಟು ಕಾರ್ಪೊರೇಟ್ ಸಕ್ಕರೆ ಮಿಲ್ಲುಗಳ ಹಿತಗಳಿಗೆ ಪ್ರೋತ್ಸಾಹ ನೀಡುವ ಈ ನಿರ್ಧಾರದ ಮೂಲಕ ಸರಕಾರ 80ಸಾವಿರ ಕೋಟಿ ರೂ.ಗಳ ಸಕ್ಕರೆ ಲಾಬ್ಬಿ ಜತೆಗೆ ನಿಂತಿದೆ, ಅವರ ಲಂಗುಲಗಾಮಿಲ್ಲದ ಲಾಭಕೋರತನಕ್ಕೆ ಸೌಲಭ್ಯ ಒದಗಿಸಿದೆ ಎಂದು ಬಲವಾಗಿ ಖಂಡಿಸಿರುವ ಅಖಿಲ ಭಾರತ ಕಿಸಾನ್ ಸಭಾ ಇದಕ್ಕೆ ಬಲವಾದ ಪ್ರತಿರೋಧ ಒಡ್ಡಬೇಕು ಎಂದು ಕರೆ ನೀಡಿದೆ; ಈ ಪ್ರತಿಗಾಮಿ ಕ್ರಮಗಳನ್ನು ಹಿಂತೆಗೆದುಕೊಂಡು, ಕಬ್ಬು ಬೆಳೆಗಾರರು ಮತ್ತು ರೈತ ಸಂಘಟನೆಗಳೊಂದಿಗೆ ಸಮಾಲೋಚನೆಯ ಮೂಲಕ ಒಂದು ಸಮಗ್ರ ಕಬ್ಬು ಧೋರಣೆಯನ್ನು ರೂಪಿಸಬೇಕು ಎಂದು ಅದು ಸರಕಾರವನ್ನು ಆಗ್ರಹಿಸಿದೆ.

ಜನ ಸಮುದಾಯದ ಗಳಿಕೆಯನ್ನು.....

ಪುಟ 11 ರಿಂದ

ಈ ಅವಧಿಯಲ್ಲಿ ನಡೆಸಲಾದ ಪ್ರಮುಖ ಜಂಟಿ ಹಾಗೂ ಸ್ವತಂತ್ರ ಹೋರಾಟಗಳನ್ನು ಕುರಿತು ವಿಶ್ಲೇಷಿಸಲಾಗಿತ್ತು. 2009 ಮತ್ತು 2011 ರ ಪಾರ್ಲಿಮೆಂಟ್ ಹಾಗೂ ವಿಧಾನಸಭಾ ಚುನಾವಣೆಗಳಲ್ಲಿ ಎಡಪಕ್ಷಗಳಿಗೆ ಉಂಟಾದ ಹಿನ್ನಡೆಯ ಕಾರಣದಿಂದ ಯುಪಿಎ -2 ಸರ್ಕಾರದ ರಾಜಕೀಯ, ಆರ್ಥಿಕ ಮತ್ತು ವಿದೇಶಾಂಗ ಧೋರಣೆಗಳು ಯಾವುದೇ ಅಡೆತಡೆ ಇಲ್ಲದೆ ಹೆಚ್ಚೆಚ್ಚು ಬಲಪಂಥದತ್ತವಾಲುತ್ತಿವೆ. ಪ್ರಮುಖ ವಿರೋಧ-ಪಕ್ಷವಾಗಿರುವ ಬಿಜೆಪಿ, ತಾನು ಹಿಂದೆ ಅಧಿಕಾರದಲ್ಲಿ ಇದ್ದಾಗ ಇದೇ ಧೋರಣೆಗಳನ್ನು ಅನುಸರಿಸುತ್ತಾ ಬಂದಿರುವುದರಿಂದ, ಈಗ ಕೇವಲ ಸಮಯ ಸಾಧಕ ನಿಲುಮೆಗಳನ್ನು ತೆಗೆದುಕೊಳ್ಳುತ್ತಾ ಕಾಲಹರಣ ಮಾಡುತ್ತಿದೆ. ಎಲ್ಲಾ ಗಂಭೀರ ಆರ್ಥಿಕ ಧೋರಣೆಗಳ ಪ್ರಶ್ನೆಗಳು ತಲೆದೋರಿದಾಗ ಬಿಜೆಪಿ ಬಹುಮತ ಇಲ್ಲದ ಕಾಂಗ್ರೆಸ್ ಸರ್ಕಾರಕ್ಕೆ ಪಾರಾಗಲು ನೆರವಾಗುತ್ತಿದೆ. ಎಡಪಕ್ಷಗಳು ಮಾತ್ರ ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ, ಜನವಿರೋಧಿ ಧೋರಣೆಗಳನ್ನು ವಿರೋಧಿಸುತ್ತಾ ಬಂದಿವೆ. ಈ ಹಿನ್ನೆಲೆಯಲ್ಲಿ, ನವ ಉದಾರೀಕರಣದ ನೀತಿಗಳ ವಿರುದ್ಧ ಹೋರಾಟವನ್ನು ಮುನ್ನೆಡೆಸುವ ಮತ್ತು ಆ ಮೂಲಕ ಕಾರ್ಮಿಕರ ಪ್ರಜ್ಞೆಯನ್ನು ಎತ್ತರಿಸುವ ಜವಾಬ್ದಾರಿ ಕಾರ್ಮಿಕ ವರ್ಗದ ಮೇಲಿದೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ವರದಿಯ ಎರಡನೇ ಭಾಗವನ್ನು 'ಸಂಘಟನೆ'ಯ ವಿಚಾರಕ್ಕೆ ಮೀಸಲಿಡಲಾಗಿತ್ತು. ಇಲ್ಲಿ ಸ್ವವಿಮರ್ಶಾತ್ಮಕವಾಗಿ ಸಂಘಟನೆಯಲ್ಲಿ ಕಂಡುಬಂದಿರುವ ದೌರ್ಬಲ್ಯಗಳನ್ನು



ಹುತಾತ್ಮ ಜ್ಯೋತಿ ಸ್ವೀಕಾರ

ಗುರುತಿಸಿ ವಿಶ್ಲೇಷಿಸಲಾಗಿದೆ. ಜಂಟಿ ಹೋರಾಟಗಳನ್ನು ಮಾಡುತ್ತಿರುವಾಗಲೇ ಸ್ವತಂತ್ರ ಹೋರಾಟಗಳನ್ನು ಕೈಗೊಳ್ಳುವುದು, ಇಲ್ಲಿಯ ವರೆಗೆ ತಲುಪದೇ ಇರುವ ಕಾರ್ಮಿಕ ವಿಭಾಗಗಳಿಗೆ ತಲುಪುವುದು ಸಾಧ್ಯವಾಗಬೇಕು ಎಂದು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. 'ಭುವನೇಶ್ವರ ದಸ್ತಾವೇಜು' ಎತ್ತಿ ತೋರಿಸಿರುವಂತೆ ಪ್ರಜಾಸತ್ತಾತ್ಮಕ ಕಾರ್ಯಾಚರಣೆಗೆ ಬದ್ಧರಾಗುವುದು ಅತ್ಯಗತ್ಯವಾಗಿದೆ. ಕಾರ್ಮಿಕರ ಮತ್ತು ಜನತೆಯ ಸಾಮಾಜಿಕ ಪ್ರಶ್ನೆಗಳನ್ನು ಎತ್ತಿಕೊಳ್ಳುವುದರ ಮಹತ್ವವನ್ನು ಪ್ರತಿಪಾದಿಸುತ್ತಾ ದಲಿತರ, ಆದಿವಾಸಿಗಳ, ಧಾರ್ಮಿಕ ಅಲ್ಪಸಂಖ್ಯಾತರ ಮತ್ತು ಮಹಿಳೆಯರ ಪ್ರತ್ಯೇಕ ಪ್ರಶ್ನೆಗಳಿಗೆ ಆದ್ಯತೆಯ ಗಮನ ನೀಡಬೇಕು ಎಂದು ವರದಿಯನ್ನು ಮಂಡಿಸುವಾಗ ಕಾಂ. ತಪನ್ ಸೇನ್ ಒತ್ತುಕೊಟ್ಟು ಹೇಳಿದರು. ವರದಿಯ ಎರಡೂ ಭಾಗಗಳ ಮೇಲೆ ನಡೆದ ಚರ್ಚೆಯಲ್ಲಿ 90 ಮಂದಿ ಪ್ರತಿನಿಧಿಗಳು ಭಾಗವಹಿಸಿ ಮಾತನಾಡಿದರು. ಕಾಂ. ತಪನ್‌ಸೇನ್ ಚರ್ಚೆಯನ್ನು ಸಮಾರೋಪಗೊಳಿಸಿದ ನಂತರ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ನವ ಉದಾರೀಕರಣದ ನೆಲೆಯಲ್ಲಿ

ಬದಲಾಗುತ್ತಿರುವ ಉದ್ಯೋಗ ಸಂಬಂಧಗಳ ಸ್ವರೂಪ - ವರ್ಗ ಐಕ್ಯತೆಯ ಸವಾಲುಗಳು. ಪರ್ಯಾಯಕ್ಕಾಗಿ ಹೋರಾಟ, ಸಾಮಾಜಿಕ ಸಮಸ್ಯೆಗಳು-ಕಾರ್ಮಿಕ ವರ್ಗದ ಪಾತ್ರ, ಪ್ರಜಾಸತ್ತಾತ್ಮಕ ಕಾರ್ಯಾಚರಣೆ.

ಇವುಗಳ ಬಗ್ಗೆ ಆಯೋಗಗಳನ್ನು ಮಾಡಿ ಪ್ರತ್ಯೇಕವಾಗಿ ಚರ್ಚೆ ಮಾಡಲು ಅವಕಾಶವನ್ನು ಕಲ್ಪಿಸಲಾಗಿತ್ತು. ಮುಂದಿನ ಕರ್ತವ್ಯಗಳನ್ನು ನಿರ್ದಿಷ್ಟವಾಗಿ ಚರ್ಚಿಸಿ ಅನುಮೋದಿಸಲಾಯಿತು. ಅನೇಕ ಮಹತ್ವದ ನಿರ್ಣಯಗಳನ್ನು ಚರ್ಚಿಸಿ ಅಂಗೀಕರಿಸಲಾಯಿತು. ಡಬ್ಲ್ಯುಎಫ್‌ಟಿಯುನ ಅಲೆಗ್ಸಾಂಡ್ರಿಯಾ ಮಹಿಳಾ ಪ್ರತಿನಿಧಿಗಳ ಪ್ರತ್ಯೇಕ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಸಮ್ಮೇಳನದ ಕೊನೆಯ ದಿನ ಕಾಂ. ಎ.ಕೆ. ಪದ್ಮನಾಭನ್ ಅಧ್ಯಕ್ಷರಾಗಿ, ತಪನ್‌ಸೇನ್ ಪ್ರಧಾನ ಕಾರ್ಯದರ್ಶಿಯಾಗಿ, ರಂಜನಾ ನಿರುಲ್ಲಾ ರವರು ಖಜಾಂಚಿಯಾಗಿ ಒಟ್ಟು 35 ಪದಾಧಿಕಾರಿಗಳನ್ನು, 125 ಸದಸ್ಯರ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಮತ್ತು 425 ಸದಸ್ಯರ ಜನರಲ್ ಕೌನ್ಸಿಲ್ ಅನ್ನು ಸಮ್ಮೇಳನ ಆಯ್ಕೆ ಮಾಡಿತು. ಕರ್ನಾಟಕದಿಂದ ಕಾ. ವರಲಕ್ಷ್ಮಿ ಮತ್ತು ಕಾ. ಪ್ರಸನ್ನಕುಮಾರ್ ಕಾರ್ಯದರ್ಶಿಗಳಾಗಿ ಆಯ್ಕೆಯಾಗಿದ್ದಾರೆ. ಕೇಂದ್ರ-ಕಾರ್ಯಕಾರಿ ಸಮಿತಿಗೆ ಕರ್ನಾಟಕದಿಂದ ಬಿ. ಮಾಧವ, ಮೀನಾಕ್ಷಿ ಸುಂದರಂ, ಕೆ.ಎನ್. ಉಮೇಶ್ ಮತ್ತು ಸೈಯದ್ ಮುಜೀಬ್ ಸದಸ್ಯರಾಗಿ ಆಯ್ಕೆಯಾಗಿದ್ದು ಒಂದು ಸ್ಥಾನ ಖಾಲಿ ಇದೆ. ಜನರಲ್ ಕೌನ್ಸಿಲ್ ಸದಸ್ಯರಾಗಿ ಕರ್ನಾಟಕದಿಂದ ಈ ಕೆಳಗಿನ 15 ಜನ ಆಯ್ಕೆಯಾಗಿದ್ದು ಒಂದು ಸ್ಥಾನ ಖಾಲಿ ಇದೆ.

ಬಿ. ಮಾಧವ, ಕೆ. ಶಂಕರ್, ಮೀನಾಕ್ಷಿ ಸುಂದರಂ, ಸೈಯ್ಯದ್ ಮುಜೀಬ್, ಕೆ.ಎನ್. ಉಮೇಶ್, ವಸಂತ ಆಚಾರಿ, ಜೆ. ಬಾಲಕೃಷ್ಣ ಶೆಟ್ಟಿ, ಬಿ.ಎಂ. ಭಟ್, ಯಮುನಾ, ಶಾಂತಾ ಘಂಟಿ, ಎಂ.ಬಿ. ನಾಡಗೌಡ, ಎನ್. ವೀರಸ್ವಾಮಿ, ಕೆ. ಮಹಾಂತೇಶ್, ಸುನಂದ ಮತ್ತು ಬಿ.ವಿ. ರಾಘವೇಂದ್ರ.

(ಮುಂದುವರೆಯಲಿದೆ)

JANASHAKTHI KANNADA VARA PATRIKE APR 28, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on every Sa
Licensed to Post without prepayment License No. WPP-



ಸಮುದಾಯ ಕುಂದಾಪುರ: "ಸುಲ್ತಾನ್ ಟಿಪ್ಪು" ಒಂದು ವಿಶಿಷ್ಟ ಪ್ರಯೋಗ

ವೆಂಕಟೇಶ್ ಕೋಣಿ

ರಂಗಭೂಮಿ ಎಂಬುದು ಶುದ್ಧ ಸೃಜನ ಲೋಕ. ಅಂತೆಯೇ ಅದು ಸಂಕೀರ್ಣ ಕಲಾ ಮಾಧ್ಯಮವೂ ಹೌದು. ಕಲೆ ಕೇವಲ ಕಲೆಗಾಗಿ ಅಲ್ಲ ಅದು ಜನರ ಭಾವನೆಗಳ ಪ್ರತೀಕವೆಂಬ ಪರಿಕಲ್ಪನೆಯನ್ನು ಹೊಂದಿದ ಕುಂದಾಪುರ ಸಮುದಾಯ ಸಾಂಸ್ಕೃತಿಕ ಕಲಾತಂಡ ನಾಟಕ ಕಲೆಯನ್ನು ಜನಪರವನ್ನಾಗಿಸಲು ಮತ್ತು ಆಳುವ ವರ್ಗ ವ್ಯವಸ್ಥೆಯ ಲೋಪದೋಷಗಳನ್ನು ಎತ್ತಿ ಹಿಡಿಯಲು ರಂಗಭೂಮಿ ಮಾಧ್ಯಮವನ್ನು ಸಮರ್ಥ ಅಸ್ತ್ರವನ್ನಾಗಿ ರೂಪಿಸುತ್ತಿದೆ.

ಮನರಂಜನೆ ಹೆಸರಲ್ಲಿ ಕೀಳು ಅಭಿರುಚಿಯ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿ ಇದಕ್ಕಿಂತ ಭಿನ್ನವಾದ ಸಕಾರಾತ್ಮಕ ಸೃಜನಶೀಲ, ವೈಚಾರಿಕ, ವಸ್ತುನಿಷ್ಠ ಕಾರ್ಯಕ್ರಮಗಳನ್ನು ನೀಡುವತ್ತ ಕುಂದಾಪುರ ಸಮುದಾಯ ದಿಟ್ಟ ಹೆಜ್ಜೆ ಇಡುತ್ತಿದೆ.

ನಾಟಕಕಾರ ಎಚ್.ಎಸ್. ಶಿವಪ್ರಕಾಶ್‌ರ ನಾಟಕ "ಸುಲ್ತಾನ್ ಟಿಪ್ಪು" ಇದನ್ನು ಇತ್ತೀಚೆಗೆ ಕುಂದಾಪುರ ಸಮುದಾಯ ರಂಗ ತಂಡ ವಾಸುದೇವ ಗಂಗೇರರವರ ಸಮರ್ಥ ನಿರ್ದೇಶನದಲ್ಲಿ ಬೈಂದೂರಿನ ಶಾರದಾ ವೇದಿಕೆಯಲ್ಲಿ ಪ್ರಸ್ತುತಪಡಿಸಿತು.

ಸಂವೇದನೆ ಕಲಿಸುವ ರಂಗಭೂಮಿ ಮಾಧ್ಯಮದಿಂದ ಸಂಬಂಧಗಳು ಗಟ್ಟಿಯಾಗುತ್ತವೆ. ಈ ಮಾಧ್ಯಮದ ಮೂಲಕವೇ ಯುವಕರಲ್ಲಿ ಸಾಂಸ್ಕೃತಿಕ ಪ್ರಜ್ಞೆಯನ್ನು ಬೆಳೆಸಬೇಕು ಎಂದು ಅಭಿಪ್ರಾಯಪಡುವ ನಾಟಕ ನಿರ್ದೇಶಕ ವಾಸುದೇವ ಗಂಗೇರರವರು ಪಾತ್ರಗಳ ನೈಜ ಅನಾವರಣ ಉಪಮೇಗಳ ಸಮರ್ಥ ಬಳಕೆ ಮತ್ತು ಚಮತ್ಕಾರಿಕ ಶೈಲಿಯಿಂದಾಗಿ ಸುಲಭವಾಗಿ ನೋಡುಗರನ್ನು ತಲ್ಲೀನಗೊಳಿಸಿದ್ದಷ್ಟೇ ಅಲ್ಲ, ಹಲವಾರು ಬಾರಿ ಕರತಾಡನ, ಶಿಳ್ಳೆಗಿಟ್ಟಿಸಿತು. ಈ ನಾಟಕಕ್ಕೆ ಉತ್ಸಾಹಿ ಯುವಕರ ತಂಡವು ನ್ಯಾಯ ಸಲ್ಲಿಸಿದರೆಂದೇ ಹೇಳಬಹುದು.

ಐತಿಹಾಸಿಕ ಕಥಾವಸ್ತುವನ್ನು ಆಧರಿಸಿದ ನಾಟಕವಾದರೂ ಸಮಕಾಲೀನ ಸಂವೇದನೆಗಳ ಹಿನ್ನೆಲೆಯಲ್ಲಿ ವರ್ತಮಾನದ ಕಾಲದ ಸಾಮಾಜಿಕ ಜೀವನದಲ್ಲಿ ರಾಜಕೀಯ ಕೋಮುವಾದ ದ್ವೇಷದ ಕರಾಳತೆಯ ಗಾಢ ಪರಿಣಾಮ ನೆನಪಿಸುವಂತಹದ್ದು. ಟಿಪ್ಪು ಸಾಮ್ರಾಜ್ಯ ಮುಸ್ಲಿಂ ಸಾಮ್ರಾಜ್ಯವಾಗಿರಲಿಲ್ಲ. ಟಿಪ್ಪು ಆಡಳಿತದಲ್ಲಿ ವಿಪ್ಲವಕಾರಿ ಬದಲಾವಣೆಗಳು ಹಿಂದೂ ದೇವಾಲಯದ ಜೀರ್ಣೋದ್ಧಾರ, ಶ್ರೀರಂಗಪಟ್ಟಣದ ಐತಿಹಾಸಿಕ ದೇವಾಲಯದ ರಕ್ಷಣೆ, ಬ್ರಿಟೀಷರನ್ನು ಹೊಡೆದೋಡಿಸಲು ಕಾದಾಡಿ ವೀರ ಮರಣವನ್ನಪ್ಪಿದ ಟಿಪ್ಪು –



ಹಿಂದೂ ಸಾಂಸ್ಕೃತಿಕ ವಕ್ತಾರರ ದೃಷ್ಟಿಯಲ್ಲಿ ದೇಶದ್ರೋಹಿಯಾಗಿ ಕಾಣುತ್ತಾನೆ. ತನ್ನ ಬೃಹತ್ ಸಾಮ್ರಾಜ್ಯದ ಸಮಸ್ತ ಜನತೆಗೆ ಉತ್ತಮ ಆಡಳಿತ ನೀಡಿದ ಟಿಪ್ಪು ಮುಸ್ಲಿಂ ದೊರೆ ಹೇಗಾಗುತ್ತಾನೆ?

ಒಟ್ಟು ನಾಟಕದ ಜೀವಕೇಂದ್ರವಾದ ಟಿಪ್ಪು ಪಾತ್ರದ ಕೆ.ಎಸ್. ವಿಕ್ರಮ್, ಮೀರಸಾದಿಕ್ ಪಾತ್ರದ ಯಶವಂತ್, ಲಕ್ಷ್ಮಿ ಅ... ಪಾತ್ರದ ಚೈತ್ರಾ ಎಮ್. ರವರ ಅಭಿನ... ಚೆನ್ನಾಗಿತ್ತು. ಇವರ ಅಭಿನಯ ನಾ... ನಂತರ ಸಹ ನೋಡುಗರ ಮನದಾ... ಉಳಿಯುತ್ತದೆ. ಭವಿಷ್ಯದ ರಂಗಭೂ... ಈ ಮೂವರು ಅತ್ಯುತ್ತಮ ನಟರಾ... ಎಲ್ಲಾ ಲಕ್ಷಣಗಳೂ ಅವರಲ್ಲಿವೆ. ಅ... ಪ್ರಭು (ಪೂರ್ಣಯ್ಯ), ವಿ.ಎಮ್. ... (ಸಯ್ಯದ್ ಗಫಾರ್), ಸುಧಾಕರ ಕಾ... (ರಜಾಖಾನ್), ಬಿಂದುತುಂಗ (ರುಕಿ... ಬಾನು) ಪಾತ್ರಗಳು ಪ್ರೇಕ್ಷಕರ ಗ... ಸೆಳೆದವು. ಅಭಿನಯ ಹಾವಭಾವಗಳ ಜೆ... ಗೆ ಶಾರೀರಿಕ ಭಾಷೆಯನ್ನು ಕಲಾ... ಸಾಕಷ್ಟು ಮೈಗೂಡಿಸಿಕೊಂಡಿ... ಫಕ್ರುನ್ನಿಸಾ ಪಾತ್ರಧಾರಿಣಿ ಸ... ನ್ಯ ಭಟ್ ಸಂಭಾಷಣೆಯಲ್ಲಿ ರಾಗ ... ಮಾತನಾಡುವ ದಾಟಿ ಸ್ವಲ್ಪ ಅತಿಯಾಯಿ... ಎಂದೆನಿಸುತ್ತದೆ.

ನಿಶಾಂತ್ (ಬಾಲಟಿಪ್ಪು), ಸು... (ಹೈದರಾಲಿ), ನಿತೀಷ (ರೀಪಾ), ಕ... (ಹ್ಯಾರಿಸ್), ನಾಗಪ್ರಸಾದ (ವೆ... ನಿಶಾಂತ್ (ಖಾದೀರ್), ಅ... (ಮೊಹಿದ್ದೀನ್), ವಿನಾಯಕ್, ಕ... ನಿತೇಶ್, ಗುರುಪ್ರಸಾದ್, ನಾ... (ಶಾಹಿರ್ಧಗಳು) ರವರೆಲ್ಲರ ಅಭಿನಯ... ಚೆನ್ನಾಗಿತ್ತು.

ಪ್ರೇಕ್ಷಕರ ಗಮನ ಬೇರೆಡೆಗೆ ಹೋಗ... ದೃಶ್ಯ ಬದಲಾವಣೆ ಅರಿವಿಗೆ ಬರ... ವ್ಯವಸ್ಥೆಗೊಳಿಸಬೇಕಿತ್ತು. ನಾಟಕದ ಯ... ಹಿಂದೆ ರಂಗಸಜ್ಜಿಕೆ ನಿರ್ವಹಣೆ ಮ... ಕೆ.ಎಂ. ಬಾಲಕೃಷ್ಣ, ಗೋಪಾಲ... ಶಂಕರ ಆನಗಳ್ಳಿ, ಉತ್ಕಲ ಕೆ. ... ಪರಿಶ್ರಮ ಇದೆ. ರಂಗ ಪರಿಕ... ಸಾಂಕೇತಿಕವಾದ ಅಂಶಗಳನ್ನೊಳಗೊ... ಅರ್ಥಪೂರ್ಣವಾಗಿದ್ದವು. ಬೆ... ವ್ಯವಸ್ಥೆಯು (ಸದಾನಂದ ಬೈಂದೂ... ನಟರ ಅಭಿನಯವನ್ನು ಪ್ರೇಕ್ಷ... ಪರಿಣಾಮಕಾರಿಯಾಗಿ ತೆರೆದಿಡುವಲ್ಲಿ ಅಸಮರ್ಪಕವಾಗಿತ್ತು ಎನ್ನಬಹುದು.

ಪ್ರತೀಕ್ ಪೈ, ಗೌತಮ್ ರವರ ಸಂ... ನಿರ್ವಹಣೆ ಪೂರಕವಾಗಿದ್ದು, ಹ... ದಿನಗಳವರೆಗೆ ಮನಸ್ಸಿನಲ್ಲಿ ಉಳಿಯುತ್ತ...

ಆರಂಭದಿಂದ ಅಂತ್ಯದ... ನೋಡಿಸಿಕೊಂಡು ಹೋಗುವ ... ನಾಟಕ ಬಿಗಿ ನಿರ್ದೇಶನ, ಪರಿಣಾಮ... ಪಾತ್ರಗಳಿಂದ ಗಮನ ಸೆಳೆಯುತ್ತದೆ. ... ನಾಟಕ ಪ್ರಯೋಗಗಳು ರಂಗಭೂಮಿ... ಯುವ ನಿರ್ದೇಶಕರ ಪ್ರತಿಭೆ... ಸಮರ್ಥವಾಗಿ ಬಳಸಿಕೊಳ್ಳಲು ಹ... ಸಮಾಜಕ್ಕೆ ಸದಭಿರುಚಿಯ ಕಲೆಯ... ಉತ್ತಮ ಹೊಸ ಕಲಾವಿದರ ಸಮೂಹ... ನೀಡಲಿ ಎಂದು ಆಶಿಸೋಣ.

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**